Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-18 | ಸಂಚಿಕೆ-16 | ಏಪ್ರಿಲ್ 15-21, 2024 | ಪುಟ 16 | ರೂ.10/-
Volume-18 | Issue-16 | April 15-21, 2024 | Pages:16 | Price: 10/



18ನೇ ಲೋಕಸಭಾ ಚುನಾವಣೆ

ಜನತೆ ಮಾಡಬೇಕಾದ್ದು ಏನು?

ಪ್ರಧಾನಿ ಮೋದಿ: ಆಡದ ಮಾತುಗಳು ಆಡಿದ ವಂಚನೆ ವರಸೆಗಳು

ಸಂವಿಧಾನ ಸಂರಕ್ಷಣೆಯೇ ಡಾ.ಅಂಬೇಡ್ಕರ್ ರವರಿಗೆ ಸೂಕ್ತ ಗೌರವ ಸೂಚಕ

ಭರ್ಜರಿ ಸುಳ್ಳುಗಳೇ ಮೋದಿಯವರ ಗ್ಯಾರಂಟಿ




‘ಸಫ್ದರ್ ಜೀವಿಸಿದ್ದರೆ’ ಫ್ಯಾಸಿಸಂ ವಿರುದ್ಧ ಬೀದಿಯಲ್ಲಿರುತ್ತಿದ್ದರು...

‘ಸಫ್ದರ್ ಹಷ್ಮಿ ಸ್ವತಃ ಕಲಾವಿದ ಹಾಗೂ ಪತ್ರಕರ್ತರಾಗಿದ್ದವರು. ಅವರದ್ದು ಕೇವಲ 34 ವರ್ಷಗಳ ಕಿರಿಯ ಕ್ರಾಂತಿಕಾರಿ ಬದುಕು. ಆದರೆ ಆ ಕಿರು ಅವಧಿಯಲ್ಲೇ ಶತಮಾನಗಳಷ್ಟು ಮರೆಯಲಾಗದ ಕೆಲಸ ಮಾಡಿದ ಕೀರ್ತಿ ಅವರದ್ದು. 2024 ಏಪ್ರಿಲ್ 12 ಸಫ್ದರ್ ಹಷ್ಮೀ ಜನ್ಮ ದಿನ. ಜನರಿಂದ ರೂಪಿತವಾಗಿ ಜನತೆಗಾಗಿ ಅರ್ಪಿಸಿಕೊಂಡು ಜನರಿಗಾಗಿಯೇ ತನ್ನ ಯೌವ್ವನವನ್ನೇ ಬಲಿನೀಡಿದ ಹಷ್ಮೀ ಎನ್ನುವ ಮಹಾನ್ ಕಲಾವಿದ ಸಮಕಾಲೀನ ಸಂದರ್ಭದಲ್ಲಿ ನಮ್ಮ ಜತೆ ಇರಲೇಬೇಕಾಗಿದ್ದ ಜೀವವಾಗಿತ್ತು.

ಕೆ. ಮಹಾಂತೇಶ

ನಾನು ಮಾತನಾಡುವುದಿಲ್ಲ
ಎಲೆಗಳ ಬಗ್ಗೆ
ನಾನು ಮಾತನಾಡುವುದಿಲ್ಲ
ಬಯಕೆಗಳ ಬಗ್ಗೆ
ನಾನು ಮಾತನಾಡುವುದಿಲ್ಲ
ನನ್ನ ಕನಸುಗಳ ಬಗ್ಗೆ
ಯಾಕೆಂದರೆ....
ನೋಡಿ ಬೀದಿಯಲ್ಲಿ ರಕ್ತವಿದೆ
ರಕ್ತವಿದೆ ಬೀದಿಯ ಮೇಲೆ...



ಚಿಲಿಯ ಕವಿ, ನೋಬೆಲ್ ಪುರಸ್ಕೃತ ಸಾಹಿತಿ ಪ್ಯಾಬ್ಲೋ ನೆರೂಡ ಸರ್ವಾಧಿಕಾರತ್ವದ ವಿರುದ್ಧ ಬರೆದ ಈ ಕನವದ ಸಾಲುಗಳು ಅದೇ ದಾರಿಯಲ್ಲಿ ಸಾಗುತ್ತಿರುವ ಇಂಡಿಯಾದ ಇವತ್ತಿನ ಪರಿಸ್ಥಿತಿಗೆ ಕಾಕತಾಳೀಯವೆಂಬಂತೆ ಅನ್ವಯಿಸುತ್ತಿವೆ ದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ ಅಘೋಷಿತ ತುರ್ತು ಪರಿಸ್ಥಿತಿಯ ವಾತಾವರಣವಿದೆ. ಫ್ಯಾಸಿಸಂನ ಬೇರುಗಳು ದೇಶದ ಉದ್ದಗಲಕ್ಕೂ ವಿವಿಧ ಸ್ವರೂಪಗಳಲ್ಲಿ ಕವಲೊಡೆದಿವೆ. ದೂರದ ಯುರೋಪ್‌ನ ಜರ್ಮನಿ, ಇಟಲಿಗಳಲ್ಲಿ ಹಲವು ದಶಕಗಳ ಕಾಲ ಜನಾಂಗೀಯ ಮಾರಣಹೋಮಕ್ಕೆ ಕಾರಣವಾದ ಸ್ಥಿತಿ ಭಾರತದಂತಹ ಬಹುತ್ವದ, ಬಹುಸಂಸ್ಕೃತಿಯ, ಬಹುಜನಾಂಗೀಯ ಸಮಾಜದಲ್ಲಿ ನುಸುಳಲು ಸಾಧ್ಯವೇ ಇಲ್ಲ ಎಂದು ಅರಾಮವಾಗಿ ಕುಳಿತಿದ್ದವರ ಮನೆಯ ಅಂಗಳಕ್ಕೂ ಈಗ ತಲುಪಿಯಾಗಿದೆ. ಈ ಗಂಭೀರ ಸನ್ನಿವೇಶದಲ್ಲಿ ‘ಸಫ್ದರ್’ ಎನ್ನುವ ವ್ಯಕಿತ್ವವೊಂದು ಜೀವಂತವಿದ್ದರೆ ಅವರು ಅಕ್ಷರಶಃ ತನ್ನ ಸಂಗಾತಿ ಕಲಾವಿದರೊಂದಿಗೆ ದೇಶದ ಬೀದಿಯಲ್ಲಿರುತ್ತಿದ್ದರು.

ಹೌದು ಸಫ್ದರ್ ಇಂದು ಬದುಕಿದ್ದರೆ, ದೇಶದ ಪ್ರಜಾತಂತ್ರದ ಅಳಿವು ಉಳಿವಿನ ಹಣೆ ಬರಹವನ್ನು ನಿರ್ಧರಿಸಬೇಕಾದ ಈ ಚುನಾವಣೆ ಎನ್ನುವ ಮಹಾಸಮರದಲ್ಲಿ ಜನತೆಯ ಬದುಕಿನ ಸಂಕಟಗಳಿಗೆ ಒಂದು ಸಾಂಸ್ಕೃತಿಕ ಧ್ವನಿಯಾಗಿರುತ್ತಿದ್ದರು. ಸಧ್ಯ ಪ್ರಜಾಪ್ರಭುತ್ವದ ಮುಖವಾಡ ಹಾಕಿಕೊಂಡು ಸರ್ವಾಧಿಕತ್ವದೆಡೆಗೆ ಸಾಗುವ ಅದರ ಅಪಾಯಗಳ ಬಗೆಗೆ, ಜತೆಗೆ ಅದಕ್ಕೆ ನೀರೇರೆದು ಘೋಷಿಸುವ ಅವಕಾಶವಾದಿ ರಾಜಕಾರಣದ ಬಗ್ಗೆ ತಮ್ಮದೇ ತಂಡ ಜನಂ(ಜನನಾಟ್ಯ ಮಂಚ್) ಮೂಲಕ ಹಾಡು.. ನಾಟಕಾಭಿನಯ, ಕಾವ್ಯ ಹಾಗೂ ಬರಹಗಳ ಮೂಲಕ ಪ್ರಶ್ನಿಸುವ, ವಿಡಂಬನೆ ಮಾಡುವ ಅವಕಾಶವನ್ನು ಅವರು ಖಂಡಿತ ಕಳೆದುಕೊಳ್ಳುತ್ತಿರಲಿಲ್ಲ. ಆಳುವ ವರ್ಗದ ಜೊತೆ ಎಂದೂ ಅಧಿಕಾರಕ್ಕಾಗಿ ರಾಜಿಯಾಗದೆ ಪ್ರಭುತ್ವದ ಹುಳುಕುಗಳನ್ನು ಸದಾ ಹುಡುಕುತ್ತಾ ಅದಕ್ಕೆ ಅಕ್ಷರ, ಹಾಡು, ನಾಟಕದ ರೂಪಗಳನ್ನು ನೀಡಿ ಜನತೆಯ ಸದಾ ಎಚ್ಚರಿಸುತ್ತಿದ್ದ ಶಕ್ತಿಯಾಗಿರುತ್ತಿದ್ದರು.

ಅದು 1989 ಜನವರಿ 1, ಸಫ್ದರ್ ಹಷ್ಮೀ ಮತ್ತು ಆತನ ಜನನಾಟ್ಯ ಮಂಚ್(ಜನಂ) ತಂಡ ‘ಅಲ್ಲಾ ಬೋಲ್’ ಎನ್ನುವ ವಿಡಂಬನಾತ್ಮಕ ಬೀದಿ ನಾಟಕದ ಮೂಲಕ ದೆಹಲಿಯ ’ಸಾಹಿದಾಬಾದ್’ ಪ್ರದೇಶದಲ್ಲಿದ್ದರು. ಆಗ ಅಲ್ಲಿನ ನಗರ ಸಭೆಗೆ ಚುನಾವಣೆಗಳು ಘೋಷಣೆಯಾಗಿದ್ದವು. ಆ ಪ್ರದೇಶದ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಂಕಟಗಳನ್ನು ಹಾಗೂ ಸ್ಥಳೀಯ ಪೋಲೀಸರು–ಕೈಗಾರಿಕಾ ಮಾಲೀಕರು ಹಾಗೂ ಆ ಪ್ರದೇಶದ ರಾಜಕಾರಣದ ನಡುವಿದ್ದ ಕಾನೂನು ಬಾಹಿರ ನಂಟನ್ನು ಎಳೆ–ಎಳೆಯಾಗಿ ಬಿಡಿಸಿಟ್ಟು ಜನಜಾಗೃತಿ ಮೂಡಿಸುವ ಕೆಲಸದಲ್ಲಿ ಜನಂ ನಿರತವಾಗಿತ್ತು. ದೆಹಲಿ ಸುತ್ತಮುತ್ತಲಿನ ಆ ಪ್ರದೇಶದಲ್ಲಿ ‘ಜನಂ’ ತಂಡದ ಈ ಚಟುವಟಿಕೆಗಳು ಅದಾಗಲೇ ಬಹಳ ಜನಪ್ರಿಯವಾಗಿದ್ದವು. ಇದರಿಂದಾಗಿ ಕ್ರೋಧಗೊಂಡಿದ್ದ ರಾಜಕೀಯ ಪ್ರೇರಿತ ಶಕ್ತಿಗಳು ಜನವರಿ 1 ರ ಮಧ್ಯಾನ್ಹ ನಾಟಕ ಪ್ರದರ್ಶಿಸುತ್ತಿದ್ದ ತಂಡದ ಮೇಲೆ ಸುಮಾರು 150 ಜನರ ಗೂಂಡಾಪಡೆ ಏಕಾಏಕಿ ದಾಳಿ ನಡೆಸಿತು. ಹಲ್ಲೆಕೋರರಿಂದ ಹೇಗ್ನೋ ತಪ್ಪಿಸಿಕೊಂಡ ಕಲಾವಿದರು ಸ್ಥಳೀಯ ಕಾರ್ಮಿಕ ಸಂಘದ ಕಛೇರಿಯಲ್ಲಿ ಆಶ್ರಯಪಡೆದರು. ಆದರೆ ಅಲ್ಲಿಗೂ ನುಗ್ಗಿದ ಗೂಂಡಾಪಡೆ ದೊಣ್ಣೆ, ಲಾಠಿ ಹಾಗೂ ಮಾರಾಕಾಸ್ತ್ರಗಳಿಂದ ಹಲ್ಲೆ ನಡೆಸಿದರು. ತನ್ನ ಸಹಕಲಾವಿದರನ್ನೆಲ್ಲಾ ಬೆಂಗಾವಲಾಗಿ ರಕ್ಷಿಸುತ್ತಾ ಬಾಗಿಲಲ್ಲೇ ನಿಂತಿದ್ದ ಸಫ್ದರ್ ಹಷ್ಮೀ ಆಳುವವರು ರೂಪಿಸಿದ ಸಂಚಿಗೆ ಬಲಿಯಾಗಿ ಹುತಾತ್ಮರಾದರು. ಆ ಗೂಂಡಾಗಳು ನಡೆಸಿದ ಮಾರಣಾಂತಿಕ ಪೆಟ್ಟುಗಳಿಂದಾಗಿ ಜನವರಿ 2 ರಂದು ಆಸ್ಪತ್ರೆಯಲ್ಲಿ.

ಹಷ್ಮೀ ಮತ್ತವರ ಸಂಗಾತಿಗಳು ನಡೆಸುತ್ತಿದ್ದ ಕೆಲಸವೇ ಅಂತಹುದ್ದು. ಇಡೀ ದೆಹಲಿ ಮಾತ್ರವಲ್ಲ ಅದರ ಸುತ್ತಮುತ್ತಲಿನ ರಾಜ್ಯಗಳಲ್ಲಿ ಎಲ್ಲಿಯೇ ಅನ್ಯಾಯ, ದಬ್ಬಾಳಿಕೆ ಕೂಗು ಕೇಳಿದರೆ ಅಲ್ಲಿಗೆ ಪ್ರತ್ಯಕ್ಷವಾಗುತ್ತಿತ್ತು ‘ಜನನಾಟ್ಯಮಂಚ್’ ತಂಡ.! ಅದು ಹೋಟೇಲ್ ತಿಂಡಿ ಬೆಲೆ ಏರಿಕೆ, ದೆಹಲಿ ನಗರ ಬಸ್ ಪ್ರಯಾಣ ದರ ಏರಿಕೆ, ಕಾರ್ಮಿಕರ ನ್ಯಾಯಯುತ ಮುಷ್ಕರ ಸೇರಿದಂತೆ... ಜನತೆಯ ಮೇಲೆ ನಡೆಯುವ ಎಲ್ಲಾ ದಬ್ಬಾಳಿಕೆಗಳಿಗೆ ಉತ್ತರವಾಗಿ ‘ಜನಂ’ ತಂಡ ದೆಹಲಿಯ ‘ಮಂಡಿಹೌಸ್’ ಮತ್ತು ಕನಾಟ್‌ಪ್ಲೇಸ್‌ಗಳಲ್ಲಿ (ನಮ್ಮ ಬೆಂಗಳೂರಿನ ಕಲಾ ಕ್ಷೇತ್ರದಂತೆ) ಕುಳಿತು ಹಾಡು, ನಾಟಕಗಳನ್ನು ಸಿದ್ದಪಡಿಸಿ ಅಲ್ಲೇ ರಿಹರ್ಸಲ್ ಮಾಡುತ್ತಿತ್ತು. ಅಲ್ಲಿ ಪ್ರತಿ ಶನಿವಾರ ನಡೆಯುತ್ತಿದ್ದ ಹೊಸ ನಾಟಕಗಳನ್ನು ವಿಕ್ಷೀಸಲು ನೂರಾರು ಜನರು ಸೇರುತ್ತಿದ್ದರು ಹೀಗಾಗಿ 80 ದಶಕದಲ್ಲಿ ‘ಕನಾಟ್‌ಪ್ಲೇಸ್’ ಎಂದರೆ ದೆಹಲಿ ಪೋಲೀಸರಿಗೆ ಬೆವರಿಳಿಯುತ್ತಿತ್ತು. ಆಕಾರಣದಿಂದಾಗಿ ಅವರು ಆ ಪ್ರದೇಶದ ಸುತ್ತಮುತ್ತ ಎಷ್ಟೋ ಬಾರಿ ಕಲಂ 144 ಹೇರುತ್ತಿದ್ದರು.!

ಸಫ್ದರ್ ವಿದ್ಯಾರ್ಥಿ ದಿಸೆಯಿಂದಲೂ ಸಫ್ದರ್ ಪ್ರತಿಭಾವಂತರಾಗಿದ್ದರು. ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಮುಗಿಸಿ ಕೆಲ ಕಾಲ ಕಾಶ್ಮೀರದಲ್ಲಿ ಅಧ್ಯಾಪಕನಾಗಿ ನಂತರ ಪ.ಬಂಗಾಳ ಸರ್ಕಾರದ ವಾರ್ತಾಧಿಕಾರಿ ದೆಹಲಿಯಲ್ಲಿದ್ದು ಕಾರ್ಯನಿರ್ವಹಿಸಿದರು. ಸಫ್ದರ್ ಹಷ್ಮೀ ಹತ್ಯೆಯಾಗಿದ್ದು ಕೇವಲ ತನ್ನ 34 ನೇ ವರ್ಷದಲ್ಲಿ.! ನಿಜ, ಅದು ಸಾಯುವ ವಯಸ್ಸಲ್ಲ. ಆದರೆ ಆಳುವ ವರ್ಗದ ಜನರಿಗೆ ಅವರು ಹೆಚ್ಚು ದಿನಗಳು ಬದುಕಿದಷ್ಟು ಕಷ್ಟದ ದಿನಗಳು ಎಂಬುದು ಮನದಟ್ಟಾಗಿತ್ತು.

ಮಹಾನ್ ಕಲಾವಿದ ಹಷ್ಮೀ ಹತ್ಯೆಯನ್ನು ಇಡೀ ದೇಶವೇ ಒಂದಾಗಿ ಖಂಡಿಸಿತ್ತು. ದೇಶದ ಉದ್ದಗಲಕ್ಕೂ ಪ್ರತಿಭಟನೆಗಳು ನಡೆದವು. 1989 ಜನವರಿ 2 ರಂದು 14 ಕೀ.ಮೀ ನಡೆದ ಅವರ ಅಂತಿಯಯಾತ್ರೆಯಲ್ಲಿ ಪಾಲ್ಗೊಂಡರ ಸಂಖ್ಯೆ 10 ಸಾವಿರ ದಾಟಿತ್ತು.! ಸಫ್ದರ್ ತಾಯಿ ಅಲ್ಲದೆ ಖ್ಯಾತ ನಾಮರಾದ ಭೀಷ್ಮ ಸಹಾನಿ, ಹಬೀಬ್ ತನ್ವೀರ್, ಯಶಪಾಲ, ಸಿಪಿಎಂ ನಾಯಕ ಸುರ್ಜಿತ್ ಸೇರಿದಂತೆ ನೂರಾರು ಗಣ್ಯರು ಭಾಗವಹಿಸಿದ್ದರು. ಇನ್ನೂ ಸ್ಪೂರ್ತಿ ನೀಡಿದ ಸಂಗತಿ ಎಂದರೆ ಜನವರಿ 3 ರಂದು ಅಂದರೆ ಹಷ್ಮೀ ಹತ್ಯೆಯಾದ ಎರಡೇ ದಿನದಲ್ಲಿ ಅದೇ ‘ಜನಂ’ ತಂಡ ಸಫ್ದರ್ ಹೆಂಡತಿ ಮಲಯಶ್ರೀ ಹಷ್ಮೀ ನೇತೃತ್ವದಲ್ಲಿ ಹಷ್ಮೀ ಹತ್ಯೆಯಾದ ಅದೇ ಸಾಹಿದಾಬಾದ್ ಪ್ರದೇಶದಲ್ಲೇ “ಭೋಖ್‌ಸೇ ಮರ್ನೇವಾಲೇ ಕ್ಯಾ ಮೌತ್‌ಸೇ ಹರ್ನೇ ವಾಲೇ ?(ಹಸಿವಿನಿಂದ ಸಾಯುತ್ತಿರುವ ನಾವು ಸಾವಿಗೆ ಹೆದರುವೆವೆನು?) ಎನ್ನುವ ಘೋಷಣೆಯೊಂದಿಗೆ ಅರ್ಧಕ್ಕೆ ನಿಂತಿದ್ದ ಅದೇ ‘ಅಲ್ಲಾಬೋಲ್’” ನಾಟಕವನ್ನು ಪ್ರದರ್ಶಿಸಿ ಆಳುವವರಿಗೆ ನೇರ ಸವಾಲೆಸೆಯಿತು.

ಜಗತ್ ಪ್ರಸಿದ್ದ ಕಲಾವಿದ ಎಂ.ಎಫ್. ಹುಸೇನ್ ಹಷ್ಮೀ ಹತ್ಯೆ ಖಂಡಿಸಿ ರಚಿಸಿದ ಕಲಾಕೃತಿಯು ಬಾಂಬೆಯಲ್ಲಿ ನಡೆದ ಪ್ರದರ್ಶನದಲ್ಲಿ 10 ಲಕ್ಷಕ್ಕೆ ಮಾರಾಟವಾಗುವ ಮೂಲಕ ಹಷ್ಮೀ ಜನಪ್ರಿಯತೆಗೆ ಸಾಕ್ಷಿಯಾಯಿತು. ಹಷ್ಮೀ ಅಮರರಾದ ನಂತರ ಅಸ್ತಿತ್ವಕ್ಕೆ ಬಂದಿರುವ ‘ಸಹಮತ್’(ಸಫ್ದರ್ ಹಷ್ಮೀ ಮೆಮೊರಿಯಲ್ ಟ್ರಸ್ಟ್) ಕಳೆದ ಮೂರುವರೆ ದಶಕಗಳಲ್ಲಿ ಅಭಿವ್ಯಕ್ತಿ ಸಾತಂತ್ರ್ಯಗಳ ರಕ್ಷಣೆ, ಜಾತಿವಾದ, ಕೋಮುವಾದ, ಭ್ರಷ್ಟಾಚಾರ ಹಾಗೂ ಜನರ ಬದುಕಿಗೆ ಸಂಬಂಧಿಸಿದ ವಿವಿಧ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

1989 ಏಪ್ರಿಲ್ 12 ರಿಂದ 16 ರವರಗೆ ಬೆಂಗಳೂರಿನಲ್ಲಿ ಸಮುದಾಯ ಸಫ್ದರ್ ಹಷ್ಮೀ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದ ‘ಸಮಗ್ರತಾ ಉತ್ಸವ’ ವನ್ನು ನಟ ಅನಂತನಾಗ್ ಉದ್ಘಾಟಿಸಿದ್ದರು. ಆ ಉತ್ಸವದಲ್ಲಿ ದಾವಣಗೆರೆ ಸಮುದಾಯ ಹಿರಿಯ ಚಿತ್ರಕಲಾವಿದ ಶ್ರೀ.ಟಿ.ಬಿ ಸೊಲಬಕ್ಕನವರ್ ಮಾರ್ಗದರ್ಶನ, ಸಮುದಾಯ ಕಾರ್ಯದರ್ಶಿ ಡಿ.ಯಾಕೂಬ್ ನಾಯಕತ್ವ ಹಾಗೂ ಇಸ್ಮಾಯಿಲ್ ಎಲಿಗಾರ್ ನಿರ್ದೇಶನದ ಮಾನವ ವಿಕಾಸ ಹಾದಿಯ ’ಜನತೆ’ ನಾಟಕದಲ್ಲಿ ನಾನು ಒಬ್ಬ ಕಲಾವಿದನಾಗಿ ಮೊದಲ ಬಾರಿಗೆ ಬೆಂಗಳೂರಿನ ’ಸಂಸ ಬಯಲು ರಂಗಮಂದಿರ" ದಲ್ಲಿ ಅಭಿನಯಿಸಿದ್ದ ದೃಶ್ಯವಿನ್ನೂ ಕಣ್ಣಿಂದ ಮಾಸಿಲ್ಲ.

ಸಫ್ದರ್ ನಮ್ಮಿಂದ ದೂರವಾಗಿ ಮೂರುವರೆ ದಶಕಗಳೇ ಕಳೆದವು ನಿಜ. ಆದರೆ ದೆಹಲಿ ರಸ್ತೆಯಲ್ಲಿ ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ, ಮಣಿಪುರದಲ್ಲಿ ಹೆತ್ತಮ್ಮಗಳ ಬೆತ್ತಲೆ ಮೆರವಣಿ, ಉತ್ತರಪ್ರದೇಶ, ಹರಿಯಾಣ, ಕರ್ನಾಟಕ ಮೊದಲಾದ ಕಡೆಗಳಲ್ಲಿ ಯುವಕ, ಯುವತಿಯರ ಮೇಲೆ ನೈತಿಕ ಪೊಲೀಸ್ ಗಿರಿ ನಡೆದಾಗ, ದೇಶದೆಲ್ಲೆಡೆ ದಲಿತರ ಮೇಲೆ ನಿರಂತರ ದೌರ್ಜನ್ಯ, ದಬ್ಬಾಳಿಕೆಗಳು ನಡೆಯುತ್ತಿರುವಾಗ, ಅಲ್ಪಸಂಖ್ಯಾತರ ಮೇಲೆ ಏಕ ಸಂಸ್ಕೃತಿಯ ಗೂಂಡಾಗಿರಿ, ಮತಾಂಧತೆಯ ದಾಳಿಗಳು ಎಗ್ಗಿಲ್ಲದೆ ನಡೆಯುವಾಗ ಫ್ಯಾಸಿಂಸಂನ ಕರಾಳಛಾಯೆಗಳು ದೇಶದ ಉದ್ದಲಕ್ಕೂ ಆವರಿಸಿರುವ ಈ ಹೊತ್ತಿನಲ್ಲಿ ಒಬ್ಬ ಹೋರಾಟಗಾರ, ಕಲಾವಿದ, ಪತ್ರಕರ್ತ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಸದಾ ಜನರ ನೋವುಗಳಿಗೆ ಮಿಡಿಯುವ ಸಂಗಾತಿಯಾಗಿ ಸಫ್ದರ್ ಇರುವಿಕೆ ಹಿಂದೆಂದಿಗಿಂತೂ ಇಂದು ತೀರ ಅವಶ್ಯವಾಗಿತ್ತು ಅಂತಹ ಪ್ರೀತಿಯ ಸಂಗಾತಿ ಸಫ್ದರ್ ಹಷ್ಮಿಗೆ ಜನುಮ ದಿನದ ಶುಭಾಶಯಗಳು.





ಸಂಪಾದಕೀಯ

ಜ್ವಲಂತ ಪ್ರಶ್ನೆಗಳ ಬಗ್ಗೆ ಮಾತೇ ಆಡದ ಪ್ರಧಾನಿ

ರಾಜ್ಯವು ಅತ್ಯಂತ ಗಂಭೀರ ಬರ ಪರಿಸ್ಥಿತಿ ಎದುರಿಸುತ್ತಿರುವಾಗ ನೆರವಿಗೆ ಬಾರದ ಪ್ರಧಾನಿ ನರೇಂದ್ರ ಮೋದಿಯವರು, ಕರ್ನಾಟಕ ರಾಜ್ಯದ ಕಷ್ಟನಷ್ಟಗಳಿಗೆ ಅಗತ್ಯ ಸ್ಪಂದನೆ ನೀಡದೆ ಈಗ ಲೋಕಸಭಾ ಚುನಾವಣಾ ಪ್ರಚಾರಕ್ಕಾಗಿ ಪದೇ ಪದೇ ಕರ್ನಾಟಕಕ್ಕೆ ಬರುತ್ತಿದ್ದಾರೆ.

ಚುನಾವಣಾ ಪ್ರಚಾರಕ್ಕೆ ಬರಲು ಯಾರದ್ದೇನೂ ಆಕ್ಷೇಪ ಇರಬೇಕಿಲ್ಲ, ಬರಲಿ. ಬಿಜೆಪಿಯ ಉನ್ನತ ನಾಯಕರು ಹಾಗೂ ದೇಶದ ಪ್ರಧಾನಿಯಾಗಿ ಮೋದಿಯವರಿಗೆ ದೇಶದಲ್ಲಿ ಎಲ್ಲಿಯಾದರೂ ಚುನಾವಣಾ ಪ್ರಚಾರ ಮಾಡುವ ಹಕ್ಕಿದೆ. ಆದರೆ ಕರ್ನಾಟಕದ ಜನತೆ, ಕರ್ನಾಟಕ ಸರ್ಕಾರ ನಮ್ಮ ರಾಜ್ಯಕ್ಕೆ ಭಾರತ ಒಕ್ಕೂಟ ಸರ್ಕಾರದಿಂದ ಆಗಿರುವ ಮತ್ತು ಆಗುತ್ತಿರುವ ಬಾರಿ ಅನ್ಯಾಯ, ತಾರತಮ್ಯಗಳ ಬಗೆಗೆ ನಿಖರ ಸಾಕ್ಷ್ಯಾಧಾರಗಳೊಂದಿಗೆ ಗಂಭೀರ ಪ್ರಶ್ನೆಗಳನ್ನು ಎತ್ತಿರುವಾಗ, ಈ ವಿಷಯ ರಾಷ್ಟ್ರವ್ಯಾಪಿ ಗಮನ ಸೆಳೆದು ವ್ಯಾಪಕ ಚರ್ಚೆಯ ಕೇಂದ್ರಬಿಂದುವೂ ಆಗಿರುವಾಗ, ಈ ಬಗೆಗೆ ಮಾತನಾಡಬೇಕಾದ ಮತ್ತು ಜ್ವಲಂತ ನೈಜ ಪ್ರಶ್ನೆಗಳಿಗೆ ಉತ್ತರಿಸಬೇಕಾದ ನೈತಿಕ ಹೊಣೆಗಾರಿಕೆ ಮತ್ತು ರಾಜಕೀಯ ಜವಾಬ್ದಾರಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಇತ್ತು. ಆದರೆ ಮೋದಿಯವರು ಈ ಯಾವ ಪ್ರಶ್ನೆಗಳ ಬಗೆಗೂ ಮಾತನಾಡುವ ಗೋಜಿಗೇ ಹೋಗಲಿಲ್ಲ ಎಂಬುದು ಅತ್ಯಂತ ವಿಷಾದದ ಸಂಗತಿ.

ಮಂಗಳೂರಿನಲ್ಲಿ ಮೋದಿಯವರು ಬರೀ 'ರೋಡ್ ಶೋ' ಮಾಡಿ ಪ್ರಚಾರ ಮುಗಿಸಿದ್ದಾರೆ. ಭಾಷಣವನ್ನೂ ಮಾಡಿಲ್ಲ. ಇನ್ನು ಮೈಸೂರಿನಲ್ಲಿ ಭಾಷಣ ಮಾಡಿದರೂ ಸಹ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗೆಗೆ ಯಾವ ಉತ್ತರವನ್ನೂ ನೀಡಲಿಲ್ಲ. ಬರೀ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಮಾಡುವಂತಹ ವಿಷಯಗಳ ಕುರಿತು ಮಾತನಾಡಿದ್ದಾರೆ. ಮಾತ್ರವಲ್ಲ, ಆಡಿದ ಬಹುತೇಕ ಮಾತುಗಳು ವಿರೋಧ ಪಕ್ಷಗಳನ್ನು ಟೀಕಿಸುವುದರಲ್ಲೇ ಕಳೆದರು.

ಕರ್ನಾಟಕ ರಾಜ್ಯಕ್ಕೆ ಒಕ್ಕೂಟ ಸರಕಾರದಿಂದ ಜಿ.ಎಸ್.ಟಿ. ತೆರಿಗೆ ಪಾಲು ಹಂಚಿಕೆಯಲ್ಲಿ ಆಗಿರುವ ತೀವ್ರ ಅನ್ಯಾಯವನ್ನು ಸರಿಪಡಿಸುವ ಬಗೆಗೆ ಪ್ರಧಾನಿ ರಾಜ್ಯದ ಜನತೆಗೆ ವಚನ ನೀಡಬೇಕಿತ್ತು. ಅದೇ ರೀತಿ ರಾಜ್ಯವನ್ನು ಕಾಡುತ್ತಿರುವ ಗಂಭೀರ ಬರ ಪರಿಸ್ಥಿತಿ ಬಗೆಗೆ ವರದಿ ನೀಡಿ ಹಲವಾರು ತಿಂಗಳುಗಳೇ ಕಳೆದಿದ್ದರೂ ಒಂದೂ ರೂಪಾಯಿಯನ್ನೂ ಇಲ್ಲಿಯವರೆಗೆ ಪರಿಹಾರವಾಗಿ ನೀಡದಿರುವ ಬಗೆಗೆ ಪ್ರಧಾನಿಯವರು ಮಾತನಾಡಬೇಕಿತ್ತು. ಈ ವಿಷಯದಲ್ಲಿ

ರಾಜ್ಯದ ಕೆಲ ಬಿಜೆಪಿ ನಾಯಕರು ಈಗ ಬಾಯಿ ಬಿಡುತ್ತಿದ್ದಾರೆ. ಕೇವಲ ಪರಿಹಾರ ಬಿಡುಗಡೆ ವಿಳಂಬವಾಗಿರುವುದು ನಿಜ, ಆದರೆ ಕರ್ನಾಟಕ ಮಾತ್ರವಲ್ಲ ಇನ್ನೂ ಹಲವಾರು ರಾಜ್ಯಗಳಿಗೆ ಪರಿಹಾರ ಬಿಡುಗಡೆ ವಿಳಂಬವಾಗಿದೆ ಎಂದು ಅವರು ಹೇಳುತ್ತಿದ್ದಾರೆ. ಲೋಕಸಭಾ ಚುನಾವಣೆಯ ನೀತಿ ಸಂಹಿತೆಯ ಅಡ್ಡಿಯೂ ಪರಿಹಾರ ಬಿಡುಗಡೆಯಾಗದೇ ಇರುವುದಕ್ಕೆ ಕಾರಣ ಎಂದು ಸುಳ್ಳು ಹೇಳುತ್ತಿದ್ದಾರೆ. ಅವರ ಮಾತಿನಲ್ಲಿ ಒಂದು ಸತ್ಯ ತಿಳಿದು ಬರುತ್ತಿದೆ. ಅದೇನೆಂದರೆ ಬಿಜೆಪಿ ನೇತೃತ್ವದ ಒಕ್ಕೂಟ ಸರಕಾರ ಬರೀ ಕರ್ನಾಟಕಕ್ಕೆ ಮಾತ್ರವಲ್ಲ, ಈ ವಿಷಯದಲ್ಲಿ ದೇಶಕ್ಕೇ ಅನ್ಯಾಯ ಮಾಡುತ್ತಿದೆ.

ಈ ವಿಷಯದಲ್ಲಿ ಮೊದಲು ಕೇಂದ್ರ ಗ್ರಹ ಮಂತ್ರಿ ಅಮಿತ್ ಷಾ, ರಾಜ್ಯ ಸರ್ಕಾರವು ಬರ ಪರಿಸ್ಥಿತಿಯ ಕುರಿತು ಒಕ್ಕೂಟ ಸರಕಾರಕ್ಕೆ ತಡವಾಗಿ ವರದಿ ಸಲ್ಲಿಸಿದ್ದೇ ಪರಿಹಾರ ಬಿಡುಗಡೆ ವಿಳಂಬವಾಗಲು ಕಾರಣ ಎಂದು ಹಸಿ ಹಸಿ ಸುಳ್ಳು ಹೇಳಿದರು. ಈ ವಿಷಯದಲ್ಲಿ ಅತ್ಯಂತ ನಿಖರವಾದ ಸ್ಪಷ್ಟವಾದ ದಾಖಲೆಗಳು ಬಿಡುಗಡೆಯಾದ ಮೇಲೆ ಗೃಹ ಸಚಿವರ ಭಂಡತನ ಬಯಲಾಯಿತು.

ಮೋದಿಯವರು ದೇಶದ ಬೇರೆ ಬೇರೆ ಭಾಗಗಳಲ್ಲಿಯೂ ಪ್ರಚಾರದಲ್ಲಿ ಭಾಗಿಯಾಗಿ ನಾನಾ ವಿಷಯಗಳ ಮೇಲೆ ಮಾತನಾಡಿದ್ದಾರೆ. ಆದರೆ ಆಡಿರುವ ಮಾತುಗಳು ಅವರೊಬ್ಬ ಜವಾಬ್ದಾರಿಯುತ ಪ್ರಧಾನಿ ಎಂದು ಸೂಚಿಸುವುದಿಲ್ಲ.

ಬಿಹಾರದಲ್ಲಿ ಇಂಡಿಯಾ ಕೂಟದ ನಾಯಕರು ಶ್ರಾವಣ ಮಾಸದಲ್ಲಿ ಮೀನು, ಮಾಂಸ ತಿಂದರು ಎಂದೂ, ಮತ್ತೆ ಯಾವುದೋ ರಾಜಕೀಯ ನಾಯಕರ ಭೇಟಿ ಸಂದರ್ಭದಲ್ಲಿ ಕುರಿ ಮಾಂಸದ ಅಡುಗೆ ಮಾಡಲಾಗಿತ್ತು ಎಂದು ಅವರು ಟೀಕಿಸಿದ್ದಾರೆ. ಆಹಾರ, ಉಡುಪು, ಮತಧರ್ಮ ಮುಂತಾದವುಗಳು ಜನರ ಖಾಸಗಿ ವಿಚಾರ, ಖಾಸಗಿ ಹಕ್ಕು ಎಂಬ ಎಚ್ಚರ ದೇಶವನ್ನಾಳುವ ಪ್ರಧಾನಿಗಳಿಗೆ ಇಲ್ಲದಿರುವುದು ದೇಶದ ದುರಂತ.

ಇದಲ್ಲದೇ ನರೇಂದ್ರ ಮೋದಿಯವರು ರಾಷ್ಟ್ರೀಯ ಅಂತರ, ರಾಷ್ಟ್ರೀಯ ಮಹತ್ವದ ವಿಚಾರಗಳಲ್ಲಿ ಆಡಿರುವ ಮಾತುಗಳು ನರೇಂದ್ರ ಮೋದಿಯವರ ಮತ್ತು ಬಿಜೆಪಿ-ಸಂಘಪರಿವಾರದ ದೋಷಪೂರಿತ ವಿಚಾರಧಾರೆಯನ್ನು ಪ್ರತಿಫಲಿಸುತ್ತವೆ.

ಮೋದಿಯವರು ಮಾತನಾಡುತ್ತಾ ಸನಾತನ ಹಿಂದೂ ಧರ್ಮವನ್ನು ಹಾಗೂ ದೇಶವನ್ನು ನಾಶ ಮಾಡುವುದು ಇಂಡಿಯಾ ಕೂಟದ ಪಕ್ಷಗಳ ಗುರಿ, ಇಂಡಿಯಾ ಒಕ್ಕೂಟ ತುಕ್ಡೆ ತುಕ್ಡೆ ಗ್ಯಾಂಗ್ ಎಂದೂ ಟೀಕಿಸಿದ್ದಾರೆ. ಕಾಂಗ್ರೆಸ್ ನದು ಮುಸ್ಲಿಂ ಲೀಗ್ ಮನಸ್ಥಿತಿ ಎಂದೂ ಆರೋಪ ಹೊರಿಸಿದ್ದಾರೆ. ಈ ಹಿಂದೆ ಅವರು ಕಾಂಗ್ರೇಸ್ ಪಕ್ಷ ತನ್ನ ಪ್ರಣಾಳಿಕೆ ಸಿದ್ದಪಡಿಸುವುದರಲ್ಲಿ ನಗರ ನಕ್ಸಲರ ನೆರವು ಪಡೆದಿದ್ದಾರೆ ಎಂದು ದೂಷಿಸಿದ್ದರು. ರಾಜ್ಯಗಳ ಹಕ್ಕು, ಒಕ್ಕೂಟ ತತ್ವದ ಕುರಿತು ಮಾತನಾಡುವುದು ದೇಶವನ್ನು ಛಿದ್ರಗೊಳಿಸಿದಂತಾಗುತ್ತದೆಯೇ ?

ಸಿಪಿಐ(ಎಂ)ನ ಪ್ರಣಾಳಿಕೆಯನ್ನು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿಯವರು ಪ್ರಣಾಳಿಕೆಯಲ್ಲಿನ ಅಣು ನಿಶ್ಶಸ್ತ್ರೀಕರಣದ ವಿಚಾರವನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ. ಭಾರತದ ನೆರೆಯ ದೇಶಗಳು ಅಣ್ವಸ್ತ್ರ ಸಜ್ಜಿತ ಆಗಿರುವಾಗ ಭಾರತವು ಅಣ್ವಸ್ತ್ರಗಳು ಹೊಂದಿಲ್ಲದಿದ್ದರೆ ಹೇಗೆ ಎಂದು ಮೋದಿಯವರು ಪ್ರಶ್ನಿಸಿದ್ದಾರೆ. ಸಿಪಿಐ(ಎಂ) ಪಕ್ಷವು ದೇಶದ ಸಾರ್ವಭೌಮತೆಯ ರಕ್ಷಣೆಗಾಗಿ ಕಟಿಬದ್ಧವಾಗಿ ನಡೆಸುತ್ತಿರುವ ಹೋರಾಟ, ಈ ವಿಷಯದಲ್ಲಿ ಸಿಪಿಐ(ಎಂ) ನ ಬದ್ದತೆ ದೇಶಕ್ಕೇ ಗೊತ್ತಿದೆ.

ಜಗತ್ತಿನಲ್ಲಿ ಅಣ್ವಸ್ತ್ರಗಳ ವಿನಾಶಕಾರಿ ಅಪಾಯಗಳನ್ನ ಅರಿತು ಅವನ್ನು ಸಂಪೂರ್ಣ ನಾಶ ಪಡಿಸಬೇಕು ಎನ್ನುವ ಆಗ್ರಹ ಎಲ್ಲೆಡೆ ನಡೆದಿದೆ. ನೆರೆ ಹೊರೆ ದೇಶಗಳೊಂದಿಗೆ ಎಂಥ ಉದಯ್ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಮಾತುಕತೆಯ ಮೂಲಕ ಪರಿಹರಿಸಿಕೊಳ್ಳಬೇಕೆ ಹೊರತು ಯುದ್ಧ ಅದರಲ್ಲೂ ಅಣ್ವಸ್ತ್ರದ ಬಳಕೆ ಕೂಡದು ಎನ್ನುವುದು ಆಗ್ರಹ. ಅನ್ನುವಸ್ತ್ರವನ್ನು ಯಾರೇ ಮೊದಲಿಗೆ ಯಾರೇ ಬಳಸಿದರೂ ಅದು ಇಡೀ ಜಗತ್ತನ್ನೇ ನಾಶ ಪಡಿಸುತ್ತದೆ. ಹೀಗಾಗಿ ಜಾಗತಿಕವಾಗಿ ರಾಜತಾಂತ್ರಿಕ ಮಾರ್ಗಗಳ ಮೂಲಕ ಅಣು ನಿಶ್ಶಸ್ತ್ರೀಕರಣದ ಪ್ರಕ್ರಿಯೆ ಆರಂಭವಾಗಬೇಕು. ಭಾರತ ಈ ವಿಷಯದಲ್ಲಿ ಮುತುವರ್ಜಿ ವಹಿಸಬೇಕು, ಭಾರತದ ನೆರೆಯ ದೇಶಗಳು ಸೇರಿದಂತೆ ಜಗತ್ತಿನ ಎಲ್ಲ ದೇಶಗಳೂ ಅಣ್ವಸ್ತ್ರಗಳನ್ನು ನಾಶ ಮಾಡುವಂತಾದಾಗ ಭಾರತವೂ ಅಣ್ವಸ್ತ್ರ ನಾಶಕ್ಕೆ ಬದ್ಧವಾಗಬೇಕು ಎಂಬ ನಿಲುವು ಪ್ರಣಾಳಿಕೆಯಲ್ಲಿ ವ್ಯಕ್ತವಾಗಿದೆ ಹೊರತು ಭಾರತ ತನ್ನ ರಕ್ಷಣೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಬೇಕೆಂದು ಸಿಪಿಐ(ಎಂ) ಪ್ರತಿಪಾದಿಸಿಲ್ಲ. ಮುಗ್ಧರಿಗೆ ತಿಳುವಳಿಕೆ ಮೂಡಿಸಬಹುದು. ದುರುದ್ದೇಶಪೂರ್ವಕವಾಗಿ ಅಪಪ್ರಚಾರ ಮಾಡುವವರನ್ನಿ ಒಪ್ಪಿಸುವುದು ಸಾಧ್ಯವೇ? ಇದಕ್ಕೆ ಜನತೆಯೇ ಉತ್ತರ ನೀಡಬೇಕಷ್ಟೆ.

ಒಟ್ಟಾರೆ ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯಕ್ಕೆ ಭೇಟಿ ನೀಡಿದಾಗ ರಾಜ್ಯದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗೆಗಾಗಲಿ ಮತ್ತು ರಾಜ್ಯಕ್ಕೆ ಸಿಗಬೇಕಾದ ಕೇಂದ್ರದ ನೆರವು ಮತ್ತು ಸೌಲಭ್ಯಗಳ ಬಗ್ಗೆ, ಹಕ್ಕುಗಳ ಬಗ್ಗೆ ಚಕಾರವೆತ್ತದೆ ಬೆನ್ನು ತೋರಿಸಿ ಹೋಗಿದ್ದಾರೆ. ಆ ಮಟ್ಟಿನಲ್ಲಿ ಅವರು ವಂಚನೆಯ ಮಾತುಗಳಿಂದ ವೈಫಲ್ಯವನ್ನು ಸಹ ಒಪ್ಪಿಕೊಂಡಿದ್ದಾರೆ.

18ನೆಯ ಸಾರ್ವತ್ರಿಕ ಚುನಾವಣೆ-2024

ಶಾಂತಿ-ಸೌಹಾರ್ದತೆಯನ್ನು ಕದಡುವ ಶಕ್ತಿಗಳನ್ನು ಸೋಲಿಸೋಣ
ಸಾಮರಸ್ಯ-ಸಹಬಾಳ್ವೆಯ ಜನ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳೋಣ

ರಾಜ್ಯಾದ್ಯಂತ ಅಭಿಯಾನ ಏಪ್ರಿಲ್ 14, 2024 ರಿಂದ ಮೇ 7, 2024

ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ' ಎಂದೂ, ದೇಶವನ್ನು 'ವೈವಿಧ್ಯತೆಯಲ್ಲಿ ಏಕತೆ ಕಾಣುವ ಸಾಮರಸ್ಯದ ನಾಡು, ಬಹುತ್ವದ ಬೀಡು' ಎಂದು ಹೆಮ್ಮೆ ಪಡುವ ದಿನಗಳು ಮಸುಕಾಗುತ್ತಿವೆ. ನಮ್ಮ ನಾಡಿನ ಸೌಹಾರ್ದ ಪರಂಪರೆ, ಬಹುತ್ವದ ಸಂಸ್ಕೃತಿಗೆ ಸಂಚಕಾರ ತರಲಾಗುತ್ತಿದೆ. ಮತಧರ್ಮಗಳ ನಡುವೆ, ಸಮುದಾಯ ಸಮುದಾಯಗಳ ನಡುವೆ ವಿವಾದಗಳನ್ನೆಬ್ಬಿಸಿ ತಾರತಮ್ಯ ಮಾಡುತ್ತಾ, ಸಂಶಯಗಳನ್ನು ಸೃಷ್ಟಿಸಲಾಗುತ್ತಿದೆ. ದೇವರು-ಧರ್ಮ ಮತ್ತು ಮುಗ್ಧಜನರ ಭಕ್ತಿಯ ಭಾವನೆಗಳನ್ನು ಸಂಕುಚಿತ ರಾಜಕೀಯ ದುರುದ್ದೇಶಗಳಿಗಾಗಿ ದುರ್ಬಳಕೆ ಮಾಡುತ್ತಾ ಜನರ ನಡುವೆ ದ್ವೇಷ, ಹಾಗೂ ಹಗೆತನವನ್ನು ಹರಡಲಾಗುತ್ತಿದೆ. ಉಡುಪು, ಊಟದಂತಹ ವಿಷಯಗಳೂ ವಿವಾದದ ವಸ್ತುವಾಗುತ್ತಿವೆ.

ಎಲ್ಲಾ ನಾಗರೀಕರ ಪ್ರಗತಿ, ಸಮೃದ್ಧಿ, ಸಮಾನತೆ, ಸಾಮಾಜಿಕ ನ್ಯಾಯಗಳ ಕಡೆಗೆ ಚಲಿಸಬೇಕಾದ ದೇಶವನ್ನು ಜಾತಿ ಹಾಗೂ ಕೋಮು ದಳ್ಳುರಿಯ ಗಂಭೀರ ಅಪಾಯದ ಕಡೆಗೆ ತಳ್ಳುತ್ತಾ ವಿಭಜಕ ಪ್ರವೃತ್ತಿ ವಿಜೃಂಭಿಸುತ್ತಿದೆ.

ಜನರ ಪರವಾಗಿ, ಶಾಂತಿ-ಸೌಹಾರ್ದತೆಗಳ ಪರವಾಗಿ, ದನಿ ಎತ್ತಿದ ಸಾಹಿತಿ, ಚಿಂತಕರು, ಪತ್ರಕರ್ತರುಗಳನ್ನು, ಸಾಮಾಜಿಕ ಕ್ರಿಯಾಶೀಲರನ್ನು, ಸೈದ್ಧಾಂತಿಕ ವಿರೋಧಿಗಳನ್ನು ದಮನಿಸುವ ನೀತಿಯನ್ನು ಆಳುವ ವರ್ಗ ಅನುಸರಿಸುತ್ತಿದೆ. ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆಯಾಗುತ್ತಿದೆ.

ದೇಶದಲ್ಲಿ ಕಾರ್ಮಿಕರು, ರೈತರು, ಕೂಲಿಕಾರರು, ದಲಿತರು, ಆದಿವಾಸಿಗಳು, ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದಲಿತರು, ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಹತ್ಯೆಗಳು ಹೆಚ್ಚುತ್ತಿವೆ. ನಿರುದ್ಯೋಗ ಸಮಸ್ಯೆಯಿಂದ ಯುವಜನರು ಕಂಗಾಲಾಗಿದ್ದಾರೆ. ಸಮಾನತೆಯ ಆಶಯಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಬದಲು ಭಾವ ಬಂಧುತ್ವದ ಭಾರತವನ್ನು ಭಾವೋದ್ರೇಕದ ಬೀಡಾಗಿ ರೂಪಾಂತರಿಸಲಾಗುತ್ತಿದೆ. ಇದು ಜನರ ನೈಜ ಸಮಸ್ಯೆಗಳನ್ನು ಹಿನ್ನೆಲೆಗೆ ಸರಿಸುವ ಹುನ್ನಾರವಾಗಿದೆ.

ಈ ನಿಟ್ಟಿನಲ್ಲಿ ನಾವೆಲ್ಲರೂ ಚಿಂತಿಸಬೇಕಿದೆ.

ಭಾರತ ಇಂದು ನಿರ್ಣಾಯಕ ಘಟ್ಟದಲ್ಲಿದೆ. ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ನ್ಯಾಯ, ಸಮಾನತೆ, ಸೌಹಾರ್ದತೆಗೆ, ಸಾರ್ವಭೌಮತೆಗೆ ಮಾರಕವಾಗಿರುವ, ಭ್ರಷ್ಟ ಕಾರ್ಪೋರೇಟ್-ಕೋಮುವಾದೀ ಹಾಗೂ ಜಾತಿವಾದಿ ಕೂಟವನ್ನು ಸೋಲಿಸಬೇಕಿದೆ. ಭಾರತದ ಸಹಸ್ರಾರು ವರ್ಷಗಳ ಸಾಮರಸ್ಯ-ಸಹಬಾಳ್ವೆಯ ಜನಸಂಸ್ಕೃತಿ, ಜಾತ್ಯತೀತತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ರಕ್ಷಿಸುವ ದೃಢವಾದ ತೀರ್ಮಾನವನ್ನು ಕೈಗೊಂಡು ಮತವನ್ನು ಚಲಾಯಿಸಬೇಕೆಂದು ವಿನಂತಿಸುತ್ತೇವೆ.

-ಸೌಹಾರ್ದ ಕರ್ನಾಟಕ

ಸಂಯೋಜಕರು:

ಪ್ರೊ.ಬರಗೂರು ರಾಮಚಂದ್ರಪ್ಪ, ಮಾವಳ್ಳಿ ಶಂಕರ್, ಡಾ.ಎಸ್.ವೈ.ಗುರುಶಾಂತ್, ನಿಸಾರ್ ಅಹಮದ್, ಡಾ.ಆರ್.ಮೋಹನ್ರಾಜ್, ಬಡಗಲಪುರ ನಾಗೇಂದ್ರ, ಬಿ.ರಾಜಶೇಖರಮೂರ್ತಿ, ಆರ್.ರಾಮಕೃಷ್ಣ, ಮಲ್ಲಿಗೆ, ಜ್ಯೋತಿ ಅನಂತ ಸುಬ್ಬರಾವ್, ಎಸ್.ಶೋಭ, ಡಾ.ಮನೋಹರ ಚಂದ್ರಪ್ರಸಾದ್, ಪೆರಿಕೋ ಪ್ರಭು, ರಾಜಶೇಖರ ಕಿಗ್ಗ.

(ವಿ.ಸೂ. - 'ಸೌಹಾರ್ದ ಕರ್ನಾಟಕ'ದ ಪರವಾಗಿ ರಾಜ್ಯದ ಹಿರಿಯ ಚಿಂತಕರು, ಸಾಹಿತಿಗಳು, ಕಲಾವಿದರು, ಯುವ ಬರಹಗಾರರು ಸೇರಿದಂತೆ ನಾಡಿನ ಎಲ್ಲ ಕ್ಷೇತ್ರಗಳ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮನಸ್ಸುಗಳು ಸೇರಿ, 18 ನೇ ಲೋಕಸಭಾ ಚುನಾವಣೆ -2024 ಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣ (ವ್ಯಾಟ್ಸ್ ಆಪ್, ಫೇಸ್ ಬುಕ್, ಎಕ್ಸ್, ಇನ್ಸ್ಟಾಗ್ರಾಮ್)ಗಳಲ್ಲಿ "ಶಾಂತಿ - ಸೌಹಾರ್ದತೆಯನ್ನು ಕದಡುವ ಶಕ್ತಿಗಳನ್ನು ಸೋಲಿಸೋಣ. ಈ ಹಿನ್ನೆಲೆಯಲ್ಲಿ ಸಾಮರಸ್ಯ - ಸಹಬಾಳ್ವೆಯ ಜನ ಸಂಸ್ಕೃತಿಯನ್ನು ಸಂರಕ್ಷಿಸಿಕೊಳ್ಳೋಣ- ಅಭಿಯಾನ"ವನ್ನು ನಡೆಸಲಾಗುತ್ತಿದೆ. ತಾವುಗಳು ಈ ಮೇಲಿನ ಹೇಳಿಕೆಯ ನಂತರ ತಮ್ಮ ಹೆಸರನ್ನು ಸೇರಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚುವ ಮೂಲಕ ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇವೆ.)


* ಸೌಹಾರ್ದತೆಕ್ಷಣೆಗಾಗಿ ಮತ ನೀಡುವಂತೆ ಮಾಡಲಾದ ಮನವಿಗೆ ನಾಡಿನ ಪ್ರಮುಖರ ಸಹಮತದ ಸಂಗ್ರಹ, ಮಾಧ್ಯಮಗಳಿಗೆ ಬಿಡುಗಡೆ ಹೇಳಿಕೆ.
* ಪ್ರಮುಖ ಪ್ರಶ್ನೆಗಳುಳ್ಳ ಕನಿಷ್ಠ 30 ಪೋಸ್ಟರ್ ಗಳ ಬಿಡುಗಡೆ
* ಪ್ರಮುಖರಿಂದ ವೀಡಿಯೋ ಸಂದೇಶ ವೀಡಿಯೋಗಳು, ಸಂವಾದ, ಸಭೆಗಳು

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರಕ್ಕೆ ಕಾಂ.ಬೃಂದಾ ಕಾರತ್

ಏಪ್ರಿಲ್ 23, 2024 ರಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಸದಸ್ಯರಾದ ಕಾಮ್ರೆಡ್ ಬೃಂದಾ ಕಾರತ್ ರವರು ಬಾಗೇಪಲ್ಲಿಗೆ ಆಗಮಿಸಲಿದ್ದಾರೆ. ಅಂದು ಮದ್ಯಾಹ್ನ 12 ಗಂಟೆಗೆ ಚಿಕ್ಕಬಳ್ಳಾಪುರ ಲೋಕಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಬೆಂಬಲಿಸಿ ಮಾತನಾಡಲಿದ್ದಾರೆ.

ಅತ್ಯಧಿಕ ಸಂಖ್ಯೆಯಲ್ಲಿ ಜನತೆ ಭಾಗವಹಿಸಲು ವಿನಂತಿಸಲಾಗಿದೆ.

"ಭರ್ಜರಿ ಸುಳ್ಳುಗಳೇ 'ಮೋದಿ ಗ್ಯಾರಂಟಿ'ಗಳು"
ಈ ನಿರ್ಣಾಯಕ ಸಂದರ್ಭದಲ್ಲಿ ಓದಲೇಬೇಕಾದ ಪುಸ್ತಕ



ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ 10 ವರ್ಷಗಳ ಕಾಲ ಆಡಳಿತ ನಡೆಸಿದೆ. ಈ ಸರಕಾರ ಅಧಿಕಾರಕ್ಕೆ ಬಂದದ್ದೇ ಎರಡು ಬಾರಿಯೂ ಆಕರ್ಷಕ ಘೋಷಣೆಗಳ ಮತ್ತು ಬಣ್ಣ ಬಣ್ಣದ ಕನಸುಗಳ, ಭರವಸೆಗಳ ಮಾರಾಟದ ಮೂಲಕ. ಕಾಲ ಕಾಲಕ್ಕೆ ಹಳೆ ಘೋಷಣೆಗಳು, ಭರವಸೆಗಳನ್ನು ಮರೆಸಿ ಹೊಸ ಘೋಷಣೆಗಳನ್ನು, ಭರವಸೆಗಳನ್ನು ಕೊಡುತ್ತಾ ಬಂದಿದೆ. ಬಹುಶಃ ಹಿಂದಿನ ಯಾವ ಸರಕಾರವೂ ಇಷ್ಟು ಘೋಷಣೆಗಳು, ಭರವಸೆಗಳನ್ನು ಕೊಟ್ಟಿಲ್ಲ. ಈ ಅವಧಿಯಲ್ಲಿ ತಾವು ಬಹಳಷ್ಟು ಸಾಧನೆಗಳನ್ನು ಮಾಡಿದ್ದೇವೆ ಎನ್ನುತ್ತಾ ಜಾಹಿರಾತುಗಳ ಮೂಲಕ, ಸುದ್ದಿ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಸಭೆ ಸಮಾರಂಭಗಳಲ್ಲಿ ಮತ್ತು ನೇರವಾಗಿ ಜನರ ಬಳಿ ಅಬ್ಬರದ ಪ್ರಚಾರ ಮಾಡಿದ್ದಾರೆ, ಚುನಾವಣಾ ಸಮಯದಲ್ಲಿ ಇನ್ನಷ್ಟು ರಭಸವಾಗಿ ಮಾಡುತ್ತಿದ್ದಾರೆ.

ಮೋದಿ ಸರಕಾರ ಕೊಟ್ಟ ಘೋಷಣೆಗಳು, ಭರವಸೆಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ? ತಳಮಟ್ಟದ ವಾಸ್ತವವೇನು? ವಿವಿಧ ಕ್ಷೇತ್ರಗಳಲ್ಲಿ ಮೋದಿ ಸರಕಾರದ ಸಾಧನೆಗಳು, ವೈಫಲ್ಯಗಳು ಏನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಸಿಪಿಐ(ಎಂ) ಈ ಕಿರುಹೊತ್ತಗೆಯಲ್ಲಿ ಮಾಡಿದೆ. ಇದನ್ನು ನಾಲ್ಕು ಭಾಗಗಳಲ್ಲಿ ಒಟ್ಟು 17 ವಿಷಯಗಳ ಸುತ್ತ ಮಾಡಲಾಗಿದೆ.

ಸರಕಾರದ ಪ್ರಾಥಮಿಕ ಕರ್ತವ್ಯಗಳಾದ ಆರ್ಥಿಕ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಆಹಾರ ಭದ್ರತೆ, ಆರೋಗ್ಯ, ಶಿಕ್ಷಣ, ಪರಿಸರ ಕ್ಷೇತ್ರಗಳಲ್ಲಿ ಮೋದಿ ಸರಕಾರ ಕೊಚ್ಚಿಕೊಂಡ ಸಾಧನೆಗಳ ವಾಸ್ತವ ಏನು ಎಂಬುದು 'ಗ್ಯಾರಂಟಿ ಅವಧಿ' ಮುಗಿದ ಅಚ್ಛೇದಿನಗಳು' ಎಂದು ಕರೆಯಲಾಗಿರುವ ಭಾಗ 1 ರಲ್ಲಿದೆ.

ದುಡಿಯುವ ಜನರ ವಿವಿಧ ಜನವಿಭಾಗಗಳಿಗೆ ಕೊಟ್ಟ ಭರವಸೆಗಳು, ಕೊಚ್ಚಿಕೊಂಡ ಸಾಧನೆಗಳನ್ನು ಸಹ ಇಲ್ಲಿ ಪರಿಶೀಲಿಸಲಾಗಿದೆ. ಕಾರ್ಮಿಕರ, ರೈತರ, ಕೃಷಿ ಕೂಲಿಕಾರರ, ಮಹಿಳಾ ದುಡಿಮೆಗಾರರ ಸಮಸ್ಯೆಗಳನ್ನು ಪರಿಹರಿಸುವತ್ತ ಏನು ಮಾಡಿದೆ ಮಾಡಿಲ್ಲ ಎಂಬುದರ ವಾಸ್ತವ ಚಿತ್ರ ದುಡಿಯುವ ಜನರ ವಿರೋಧಿ ಎಂಬ ಭಾಗ 2 ರಲ್ಲಿದೆ.

ಸಾಮಾಜಿಕವಾಗಿ ಪ್ರಮುಖ ದಮನಿತ ಜನವಿಭಾಗಗಳಾದ ಮಹಿಳೆಯರು, ದಲಿತರು, ಆದಿವಾಸಿಗಳಿಗೆ ಕೊಟ್ಟ ಭರವಸೆಗಳು, ಮಾರಿದ ಕನಸುಗಳು ಎಷ್ಟರ ಮಟ್ಟಿಗೆ ಜಾರಿಯಾದವು ಎಂಬುದು ದಮನಿತ ಜನರ ವಿರೋಧಿ ಎಂದು ಕರೆಯಲಾಗಿರುವ ಭಾಗ 3 ರಲ್ಲಿದೆ.

ಈ ನಿರ್ದಿಷ್ಟ ಕ್ಷೇತ್ರಗಳಲ್ಲಿ ಈ ಸರಕಾರದ ಸಾಧನೆಗಳು ಪ್ರಶ್ನಾರ್ಹ ಮಾತ್ರವಲ್ಲ ಸೊನ್ನೆ. ಸಾಧನೆಗಳ ಕುರಿತು ಭರ್ಜರಿ ಸುಳ್ಳುಗಳನ್ನು ಹೇಳಲಾಗುತ್ತಿದೆ, ಅವನ್ನೇ ಮತ್ತೆ 'ಮೋದಿ ಗ್ಯಾರಂಟಿ'ಯೆಂದು ಪ್ರಚಾರ ಮಾಡಲಾಗುತ್ತಿದೆ ಎಂಬುದು ಈ ವಿಶ್ಲೇಷಣೆಯ ಸಾರಾಂಶ.

ಆದರೆ ಈ ಸರಕಾರ ಸಾಂವಿಧಾನಿಕ ಮೌಲ್ಯಗಳ ಮೇಲೆ ದಾಳಿ ಮಾಡುತ್ತಾ, ಸಾಂವಿಧಾನಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಕಳಚಿ ಹಾಕುತ್ತಾ ಮನುವಾದಿ ಹಿಂದುತ್ವ ರಾಷ್ಟ್ರ ಕಟ್ಟುವತ್ತ ಹೋಗುತ್ತಿರುವ ತೀವ್ರ ಆರೋಪವನ್ನು ಎದುರಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆ, ಜಾತ್ಯತೀತತೆ, ಅಲ್ಪಸಂಖ್ಯಾತರ ಮೇಲೆ ಫ್ಯಾಸಿಸ್ಟ್ ಮಾದರಿಯ ಈ ಸರಕಾರದ ದಾಳಿಗಳು, ವ್ಯವಸ್ಥೆ ಬುಡಮೇಲು ಮಾಡುವ ಬ್ರಹ್ಮಾಂಡ ಭ್ರಷ್ಟಾಚಾರ ಹಾಗೂ ರಾಷ್ಟ್ರೀಯ ಭದ್ರತೆಗೆ ಅದು ಒಡ್ಡಿರುವ ಅಪಾಯಗಳ ವಿಶ್ಲೇಷಣೆ ಮೂಲಕ ಈ ಆರೋಪವನ್ನು ಸಾಬೀತು ಪಡಿಸಲಾಗಿದೆ. ಈ ವಿಶ್ಲೇಷಣೆ ಸಾಂವಿಧಾನಿಕ ಪ್ರಜಾಪ್ರಭುತ್ವ ನಾಶಮಾಡಿ ಮನುವಾದಿ ಹಿಂದುತ್ವರಾಷ್ಟ್ರದತ್ತ ಎಂಬ ಕೊನೆಯ ಭಾಗದಲ್ಲಿದೆ.

ಈ ಪುಸ್ತಕದಲ್ಲಿ ವಿಮರ್ಶಿಸಿರುವ ಮೋದಿ ಗ್ಯಾರಂಟಿಗಳ, ಪ್ರಮಾದಗಳ ಪಟ್ಟಿ ಇಲ್ಲಿದೆ.

"ಭರ್ಜರಿ ಸುಳ್ಳುಗಳೇ 'ಮೋದಿ ಗ್ಯಾರಂಟಿ'ಗಳು" ಈ ನಿರ್ಣಾಯಕ ಸಂದರ್ಭದಲ್ಲಿ ಎಲ್ಲ ಪ್ರಜ್ಞಾವಂತ ನಾಗರಿಕರು, ರಾಜಕೀಯ ಕಾಯಕರ್ತರು ಓದಲೇಬೇಕಾದ ಪುಸ್ತಕ

'ಗ್ಯಾರಂಟಿ ಅವಧಿ' ಮುಗಿದ ಅಚ್ಛೇದಿನಗಳು

❒ ಐದು ಟ್ರಿಲಿಯನ್ ಆರ್ಥಿಕತೆಯೂ, ಹಸಿವಿನ ಸೂಚಕದಲ್ಲಿ 111 ಸ್ಥಾನವೂ

❒ ಎರಡು ಕೋಟಿ ಉದ್ಯೋಗಗಳು ಎಲ್ಲಿ? 60 ಸಾವಿರ ಹುದ್ದೆಗೆ 48 ಲಕ್ಷ ಯುವಜನರ ಲಗ್ಗೆ ಯಾಕೆ?

❒ ಬಾಯಲ್ಲಿ 'ಗರೀಬ್ ಅನ್ನ ಯೋಜನಾ' ಮಂತ್ರ', ಕೈಯಲ್ಲಿ ಆಹಾರ ಭದ್ರತೆ ಅನುದಾನ ಶೇ.40 ಕಡಿತ

❒ ಸಾರ್ವಜನಿಕ ಆರೋಗ್ಯ ಅನುದಾನ ಕಡಿತ, ಖಾಸಗಿ ವಿಮೆ ಕಂಪನಿಗಳಿಗೆ ಸುಗ್ಗಿ

❒ ಶಿಕ್ಷಣ ರಂಗದ ಇನ್ನಷ್ಟು ಕಾರ್ಪೊರೇಟೀಕರಣ, ಕೋಮುವಾದೀಕರಣ ಮತ್ತು ಕೇಂದ್ರೀಕರಣ

❒ 'ನಮಾಮಿ ಗಂಗೆ':ಜಗತ್ತಿನ ಅತಿ ಮಾಲಿನ್ಯಭರಿತ 20ರಲ್ಲಿ 15 ನಗರಗಳು ಗಂಗಾ ಬಯಲಿನವು

ದುಡಿಯುವ ಜನರ ವಿರೋಧಿ

❒ ಆರು ವರ್ಷದಲ್ಲಿ 'ತಳಮಟ್ಟದ ದಿನಗೂಲಿ'ಯಲ್ಲಿ ಕೇವಲ ರೂ.2 ಹೆಚ್ಚಳ

❒ ಸ್ವಾಮಿನಾಥನ್ ಗೆ ಭಾರತರತ್ನ ಒಕೆ! ಅವರ 'ಕನಿಷ್ಠ ಬೆಂಬಲ ಬೆಲೆ'ಗೆ ಖೊಕ್ ಯಾಕೆ?

❒ ಕೃಷಿ ಕಾರ್ಮಿಕರೂ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ

❒ ಕೊವಿಡ್‌ನಲ್ಲಿ ಉದ್ಯೋಗ ಕಳಕೊಂಡ ಮಹಿಳೆಯರಲ್ಲಿ ಶೇ.47 ಶಾಶ್ವತವಾಗಿ ಕಳಕೊಂಡರು

ದಮನಿತ ಜನರ ವಿರೋಧಿ

❒ 'ಬೇಟಿ ಬಚಾವೊ, ಬೇಟಿ ಪಡಾವೋ' ಯೋಜನೆಯ ಶೇ.80 ಖರ್ಚು ಪ್ರಚಾರಕ್ಕೆ

❒ ದಲಿತರ ಮೇಲೆ ದೌರ್ಜನ್ಯ 2014–2020 ಅವಧಿಯಲ್ಲಿ ಶೇ. 45 ಹೆಚ್ಚಳ

❒ ಆದಿವಾಸಿ ಯೋಜನೆಗೆ ಅನುದಾನ ಶೇ.8.6 ಬದಲು ಕೇವಲ ಶೇ.2.7

ಸಾಂವಿಧಾನಿಕ ಪ್ರಜಾಪ್ರಭುತ್ವ ನಾಶಮಾಡಿ ಮನುವಾದಿ ಹಿಂದುತ್ವ ರಾಷ್ಟ್ರದತ್ತ

❒ 'ಪ್ರಜಾಪ್ರಭುತ್ವದ ತಾಯ್ನಾಡಿ'ನಲ್ಲಿ ಚುನಾಯಿತ ನಿರಂಕುಶ ಪ್ರಭುತ್ವ


❒ ಮೊಬ್ ಲಿಂಚಿಂಗ್, ಬುಲ್ಡೋಝರ್ ನ್ಯಾಯ 'ಸಬ್ ಕಾ ಸಾಥ್' ಖಂಡಿತಾ ಅಲ್ಲ!

❒ ಚುನಾವಣಾ ಬಾಂಡ್: 'ಅಕೆಲೆ ಖಾವೂಂಗಾ'!

❒ ರಕ್ಷಣಾ ಉಪಕರಣಗಳಲ್ಲಿ ವಿಫಲ ಆತ್ಮನಿರ್ಭರತೆ–ಭದ್ರತೆಗೆ ಕುತ್ತು

ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆಯ ಕನ್ನಡ ಅನುವಾದ ಇದೀಗ ಪ್ರಕಟವಾಗಿದೆ. ಕೇವಲ ರೂ.10 ಬೆಲೆಯ ಪ್ರಣಾಳಿಕೆಯ ಪ್ರತಿಗಳನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಚೇರಿ ಇ.ಎಂ.ಎಸ್ ಭವನವನ್ನು ಸಂಪರ್ಕಿಸಿ ಪಡೆಯಬಹುದು.

ಪ್ರಣಾಳಿಕೆಯನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ವೆಬ್ ಸೈಟಿನಲ್ಲಿ ಅಂದರೆ **cpimkarnataka.org/cpim** ನಲ್ಲಿ ಓದಬಹುದು.



ಯಾವುದೇ ಕಾರಣ ನೀಡದೆ ಸಿಪಿಐ(ಎಂ) ತ್ರಿಶೂರ್ ಜಿಲ್ಲಾ ಸಮಿತಿಯ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿದ ಐಟಿ ಇಲಾಖೆ

ತ್ರಿಶೂರ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಗೆ ದಾರಿ ಮಾಡಿಕೊಡಲು ಆದಾಯ ತೆರಿಗೆ ಇಲಾಖೆಯು ಸಿಪಿಐ(ಎಂ) ತ್ರಿಶೂರ್ ಜಿಲ್ಲಾ ಸಮಿತಿಯ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿದೆ. ಐಟಿ ಇಲಾಖೆ ಪಕ್ಷಕ್ಕೆ ನೀಡಲಾದ ನೋಟಿಸ್ ನಲ್ಲಿ 'ಬ್ಯಾಂಕ್ ಆಫ್ ಇಂಡಿಯಾ ಎಂಜಿ ರೋಡ್ ಶಾಖೆಯಲ್ಲಿರುವ ಪಕ್ಷದ ಖಾತೆಯನ್ನು ಸ್ಥಗಿತಗೊಳಿಸಲಾಗಿದೆ, ಮುಂದಿನ ಸೂಚನೆ ಬರುವವರೆಗೂ ಯಾವುದೇ ವಹಿವಾಟು ನಡೆಸುವಂತಿಲ್ಲ' ಎಂದು ಸೂಚಿಸಿದೆ. ಅಧಿಕಾರಿಗಳು ಇದಕ್ಕೆ ಯಾವುದೇ ಕಾರಣ ನೀಡಲಿಲ್ಲ.

ಏಪ್ರಿಲ್ 5 ರಂದು ರಾತ್ರಿ, ಐಟಿ ಅಧಿಕಾರಿಗಳು ಬ್ಯಾಂಕ್‌ನ ಎಂಜಿ ರೋಡ್ ಶಾಖೆಗೆ ಆಗಮಿಸಿ ಖಾತೆ ವಿವರಗಳನ್ನು ಪರಿಶೀಲಿಸಿದರು. ಅಲ್ಲಿಗೆ ಜಿಲ್ಲಾ ಸಮಿತಿ ಕಚೇರಿ ಕಾರ್ಯದರ್ಶಿಯನ್ನು ಕರೆಸಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಂಎಂ ವರ್ಗೀಸ್ ಅವರನ್ನು ಕೊಚ್ಚಿಯಲ್ಲಿ ಹಿಂದಿನ ದಿನ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕರುವನ್ನೂರ್ ಸೇವಾ ಸಹಕಾರಿ ಬ್ಯಾಂಕ್‌ಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಚಾರಣೆ ನಡೆಸಿದ್ದು, ಖಾತೆಯ ವಿವರಗಳ ಬಗ್ಗೆ ವಿಚಾರಣೆ ನಡೆಸಿದ್ದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಐಟಿ ಇಲಾಖೆಯ ಕ್ರಮಗಳನ್ನು ಖಂಡಿಸಿ ಹೇಳಿಕೆ ನೀಡಿದ್ದಾರೆ. ತ್ರಿಶೂರ್ ಜಿಲ್ಲಾ ಸಮಿತಿಯ ಖಾತೆಯ ವಿವರಗಳನ್ನು ಒಳಗೊಂಡಂತೆ ವಾರ್ಷಿಕವಾಗಿ ಆದಾಯ ತೆರಿಗೆ ಇಲಾಖೆ ಮತ್ತು ಚುನಾವಣಾ ಆಯೋಗಕ್ಕೆ ನಿಖರವಾದ ಆದಾಯ ಮತ್ತು ವೆಚ್ಚದ ಅಂಕಿಅಂಶಗಳನ್ನು ಸಲ್ಲಿಸುವುದರೊಂದಿಗೆ ಪಕ್ಷವು ತನ್ನ ಅನುಸರಣೆಗೆ ಒತ್ತು ನೀಡಿದೆ. ಮುನ್ಸೂಚನೆ ಅಥವಾ ವಿವರಣೆ ನೀಡದೆ ಖಾತೆಯನ್ನು ಸ್ಥಗಿತಗೊಳಿಸಿರುವುದು ಅನ್ಯಾಯವಾಗಿದೆ. ವಿರೋಧ ಪಕ್ಷಗಳು ಮತ್ತು ಅವರ ನೇತೃತ್ವದ ಸರ್ಕಾರಗಳನ್ನು ಗುರಿಯಾಗಿಸುವ ಕೇಂದ್ರ ಸರ್ಕಾರದ ಕಾರ್ಯತಂತ್ರದ ಭಾಗವಾಗಿ ಈ ಕ್ರಮಗಳನ್ನು ನಿರೂಪಿಸಿದೆ ಎಂದು ಸಿಪಿಎಂ ಆರೋಪಿಸಿದೆ.

ಚುನಾವಣಾ ತುಣುಕುಗಳು

ಲೋಕಸಭೆ ಚುನಾವಣೆ ಕೇವಲ ಸರ್ಕಾರ ರಚನೆಗೆ ಮಾತ್ರವಲ್ಲದೆ ದೇಶ, ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ರಕ್ಷಿಸುತ್ತದೆ. ಬಿಜೆಪಿ ಸರ್ಕಾರದ ಸರ್ವಾಧಿಕಾರಿ ಆಡಳಿತದಲ್ಲಿ 140 ಕೋಟಿಗೂ ಹೆಚ್ಚು ಜನರು ಅಪಾಯದಲ್ಲಿದ್ದಾರೆ, ಅದಕ್ಕಾಗಿಯೇ 27 ರಾಜಕೀಯ ಪಕ್ಷಗಳು ತಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಆ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯಲು 'ಇಂಡಿಯಾ' ಬಣವನ್ನು ರಚಿಸಿದವು.

–ಸಿಪಿಎಂ ತ್ರಿಪುರಾ ಕಾರ್ಯದರ್ಶಿ – ಜಿತೇಂದ್ರ ಚೌಧರಿ

ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನಾಚರಣೆ

ಸಂವಿಧಾನದ ಸಂರಕ್ಷಣೆಯೇ ಅವರಿಗೆ ಸಲ್ಲಿಸುವ ನಿಜವಾದ ಗೌರವ

ಏಪ್ರಿಲ್ 14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನಾಚರಣೆ. ಇದೇ ಸಂದರ್ಭದಲ್ಲಿ 18ನೇ ಸಾರ್ವತ್ರಿಕ ಚುನಾವಣೆಗೆ ವೇದಿಕೆ ಸಜ್ಜಾಗಿದೆ. ಮತ್ತೊಂದೆಡೆ, ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಪಕ್ಷದ ಇತರೆ ನಾಯಕರ ಪ್ರತಿಕ್ರಿಯೆಗಳನ್ನು ನೋಡಿದರೆ, ಅವರು ಈ ಸಂವಿಧಾನವನ್ನು 2029 ರವರೆಗೆ ಮುಂದುವರಿಸುತ್ತಾರೆಯೇ, ಸಂವಿಧಾನದಲ್ಲಿನ ಮೂಲಭೂತ ಬದಲಾವಣೆಗಳನ್ನು ಮಾಡಲಾಗುತ್ತದೆಯೇ, ಎಂಬ ಪ್ರಶ್ನೆಗಳೊಂದಿಗೆ ಚರ್ಚೆಗಳು ನಡೆಯುತ್ತಿವೆ. ಇತ್ತೀಚೆಗೆ ನಡೆದ ಸಭೆಯೊಂದರಲ್ಲಿ ಸ್ವತಃ ಪ್ರಧಾನಿಯೇ 'ಈ ಹತ್ತು ವರ್ಷ ನೋಡಿದ್ದು ಟ್ರೇಲರ್ ಮಾತ್ರ, ಮುಂದೆ ನಿಜವಾದ ಸಿನಿಮಾ ನೋಡಬಹುದು' ಎಂದು ಹೇಳಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಅವರ ಈ ಮಾತಿನ ಅರ್ಥವೇನು? ಇದು ಮುಂಬರುವ ಅವಧಿಯಲ್ಲಿ ಸಾಂವಿಧಾನಿಕ ಬದಲಾವಣೆಗಳಾಗಲಿವೆ ಎಂಬ ಸೂಚನೆಯೇ? ಚುನಾವಣೆಯಲ್ಲಿ ಬಿಜೆಪಿಗೆ 400 ಸ್ಥಾನ ಬಂದರೆ ಸಂವಿಧಾನದಿಂದ 'ಜಾತ್ಯಾತೀತ' ಎಂದುದನ್ನು ಕಿತ್ತೊಗೆದು, ಸಂವಿಧಾನದಲ್ಲಿ ಅಮೂಲಾಗ್ರ ಬದಲಾವಣೆ ಮಾಡುವುದಾಗಿ ಕರ್ನಾಟಕದ ಬಿಜೆಪಿ ಮುಖಂಡ ಅನಂತ್ ಕುಮಾರ್ ಹೆಗಡೆ ಹೇಳಿದ್ದಾರೆ. ಬಿಜೆಪಿ ಮತ್ತು ಸಂಘಪರಿವಾರದ ಚಿಂತನೆ ಏನಿದೆ ಎಂಬುದನ್ನು ಇದು ತೋರಿಸುತ್ತದೆ.

ಭಾರತದ ಸಂವಿಧಾನ ಸಭೆಯು ಸುಮಾರು 3 ವರ್ಷಗಳ ಕಾಲ ಕೆಲಸ ಮಾಡಿ ಸಂವಿಧಾನವನ್ನು ರಚಿಸಿತು. ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದ ಕರಡು ರಚನಾ ಸಮಿತಿಯು 60 ಸಂವಿಧಾನಗಳ ತುಲನಾತ್ಮಕ ಅಧ್ಯಯನದ ನಂತರ ಸಂವಿಧಾನ ಸಭೆಯು ನವೆಂಬರ್ 26, 1949 ರಂದು ಸಂವಿಧಾನವನ್ನು ಅಂಗೀಕರಿಸಿತು. ಡಾ.ಅಂಬೇಡ್ಕರ್ ಅವರು 75 ವರ್ಷಗಳ ಹಿಂದೆಯೇ ಸಂವಿಧಾನವು ಭಾರತದ 'ವೈವಿಧ್ಯತೆ'ಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದೆ ಎಂದು ಹೇಳಿದ್ದಾರೆ. ಪ್ರಖ್ಯಾತ ಸಾಂವಿಧಾನಿಕ ತಜ್ಞ ಗ್ರಾನ್‌ವಿಲ್ಲೆ ಆಸ್ಟಿನ್ ಅವರು 'ಭಾರತದ ಸಂವಿಧಾನವು ಭಾರತದ ಜನರ ಶಾಶ್ವತ ಕನಸು' ಎಂದು ಬಣ್ಣಿಸಿದರು. ಸಂವಿಧಾನದ ರಚನೆಕಾರರು ಸಂವಿಧಾನದ ಉದ್ದೇಶಗಳು ಮತ್ತು ಆದರ್ಶಗಳನ್ನು ಪೀಠಿಕೆಯಲ್ಲಿ ಪ್ರತಿಷ್ಠಾಪಿಸಿದ್ದಾರೆ ಮಾತ್ರವಲ್ಲದೆ, ಸಂವಿಧಾನದ ಮೂರನೇ ಭಾಗದಲ್ಲಿ ಮೂಲಭೂತ ಹಕ್ಕುಗಳು ಮತ್ತು ಸಂವಿಧಾನದ ನಾಲ್ಕನೇ ಭಾಗದಲ್ಲಿ ನಿರ್ದೇಶನ ತತ್ವಗಳನ್ನು ಸೇರಿಸಿದ್ದಾರೆ. ಮೂಲಭೂತ ಹಕ್ಕುಗಳು, ಸ್ವಾತಂತ್ರ್ಯ, ಸ್ವಾತಂತ್ರ್ಯ ಮತ್ತು ನಿರ್ದೇಶನ ತತ್ವಗಳ ಮೂಲಕ ಕಲ್ಯಾಣ ರಾಜ್ಯ ಸ್ಥಾಪನೆಯಾಗಬೇಕು ಎಂದು ಅಂಬೇಡ್ಕರ್ ರವರ ಕರಡು ಸಮಿತಿಯ ಸದಸ್ಯರು ಅಭಿಪ್ರಾಯಪಟ್ಟರು. ಕಳೆದ 75 ವರ್ಷಗಳಲ್ಲಿ, ಸುಮಾರು 105 ಸಾಂವಿಧಾನಿಕ ತಿದ್ದುಪಡಿಗಳ ಮೂಲಕ, ಸಂವಿಧಾನಕ್ಕೆ ಅನೇಕ ಬದಲಾವಣೆಗಳು ಮತ್ತು ಸೇರ್ಪಡೆಗಳ ಹೊರತಾಗಿಯೂ ಭಾರತದ 'ವೈವಿಧ್ಯತೆ'ಯನ್ನು ಕಾಪಾಡುವಲ್ಲಿ ಮತ್ತು ದೇಶದ ಸಮಗ್ರತೆಯನ್ನು ಕಾಪಾಡುವಲ್ಲಿ ಸಂವಿಧಾನವು ಪ್ರಮುಖ ಪಾತ್ರ ವಹಿಸಿದೆ. ಈಗ ಸಂವಿಧಾನದ ಮೇಲೆಯೇ ದಾಳಿ ನಡೆಯುತ್ತಿದೆ.

ಮೂಲಸೌಕರ್ಯಕ್ಕೆ ಅಪಾಯ

1973ರ ಪ್ರಸಿದ್ಧ ಕೇಶವಾನಂದ ಭಾರತಿ ವರ್ಸಸ್ ಸ್ಟೇಟ್ ಆಫ್ ಕೇರಳ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ವೈ.ವಿ.ಚಂದ್ರಚೂಡ್ ನೇತೃತ್ವದ ಪೀಠವು ಸಂವಿಧಾನದ 'ಮೂಲ ರಚನೆ'ಯನ್ನು ವಿವರಿಸಿದೆ. ಕೇಶವಾನಂದ ಭಾರತಿ ಪ್ರಕರಣವು ಕಳೆದ 5 ದಶಕಗಳಿಂದ ಬಹಳ ಪ್ರಸಿದ್ಧವಾಗಿದೆ. ಈ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಸಂವಿಧಾನದ ಮೂಲಭೂತ ಸ್ವರೂಪವನ್ನು ವಿವರಿಸಿತು ಮತ್ತು 'ಫೆಡರಲಿಸಂ, ಜಾತ್ಯತೀತತೆ, ಸಂಸದೀಯ ಪ್ರಜಾಪ್ರಭುತ್ವ, ಸ್ವತಂತ್ರ ನ್ಯಾಯಾಂಗ' ಮುಂತಾದ ಅಂಶಗಳನ್ನು ಉಲ್ಲೇಖಿಸಿದೆ. ಕಳೆದ 50 ವರ್ಷಗಳಲ್ಲಿ, ಸುಪ್ರೀಂ ಕೋರ್ಟ್ ಹಲವಾರು ತೀರ್ಪುಗಳಲ್ಲಿ 'ಮೂಲಭೂತ ರೂಪ'ವನ್ನು ಪುನರುಚ್ಚರಿಸಿದೆ. ಈಗ ನರೇಂದ್ರ ಮೋದಿ ಸರ್ಕಾರ ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುವ ಪರಿಸ್ಥಿತಿಯನ್ನು ಸೃಷ್ಟಿಸುತ್ತಿದೆ.

ಸಾಂವಿಧಾನಿಕ ವ್ಯವಸ್ಥೆಗಳ ಮೇಲೆ ದಾಳಿ

ಕಳೆದ ಹತ್ತು ವರ್ಷಗಳಿಂದ ಸಾಂವಿಧಾನಿಕ ವ್ಯವಸ್ಥೆಗಳ ಮೇಲೆ ದಾಳಿ ನಡೆಸಿ, ಅವುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಮಾಂಟೆಸ್ಕ್ಯೂ ಪ್ರತಿಪಾದಿಸಿದ ಅಧಿಕಾರ ಪ್ರತ್ಯೇಕತೆಯ ಸಿದ್ಧಾಂತದ ಪ್ರಕಾರ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಇವುಗಳು ಸ್ವತಂತ್ರವಾಗಿ ಇದ್ದುಕೊಂಡು ಸಮನ್ವಯದಿಂದ ಕೆಲಸ ಮಾಡುತ್ತಾ ಪ್ರಜೆಗಳ ಆಶಯ ಮತ್ತು ಆಕಾಂಕ್ಷೆಗಳನ್ನು ಪೂರೈಸಬೇಕು. ಆದರೆ ಆಚರಣೆಯಲ್ಲಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಕಾರ್ಯಾಂಗ ಮೇಲುಗೈ ತೋರುತ್ತಿದೆಯೇ ಹೊರತು ಶಾಸಕಾಂಗಕ್ಕೆ ಪ್ರಾಧಾನ್ಯತೆ ನೀಡುತ್ತಿಲ್ಲ. ಸಂಸತ್ತಿನ ಅಧಿವೇಶನಗಳು ಕ್ರಮಬದ್ಧವಾಗಿ ನಡೆಯುತ್ತಿಲ್ಲ, ಅಧಿವೇಶನಗಳಲ್ಲಿ ಪ್ರಧಾನಿ ಮೋದಿ ಹೆಚ್ಚು ದಿನಗಳು ಹಾಜರಾಗುತ್ತಿಲ್ಲ. ಸಂಸತ್ ಅಧಿವೇಶನಗಳು ನಡೆಯುವಾಗ ಪ್ರಧಾನಿ ವಿದೇಶ ಪ್ರವಾಸಕ್ಕೆ ಹೋಗುತ್ತಿರುತ್ತಾರೆ. ಸಂಸತ್ತಿನಲ್ಲಿ ಮಸೂದೆಗಳ ಬಗ್ಗೆ ಸಮಗ್ರ ಚರ್ಚೆಯೇ ನಡೆಯುತ್ತಿಲ್ಲ. ಮೂರು ಕೃಷಿ ಕಾನೂನುಗಳ ಅಂಗೀಕಾರ ಇದಕ್ಕೊಂದು ಸಾಕ್ಷಿಯಾಗಿದೆ. ಮಸೂದೆಗಳನ್ನು ಆಯ್ಕೆ ಸಮಿತಿಗಳು ಅಥವಾ ಸ್ಥಾಯಿ ಸಮಿತಿಗಳಿಗೆ ವರದಿ ಮಾಡಲಾಗುವುದಿಲ್ಲ.



ಅನೇಕ ಸಾಂವಿಧಾನಿಕ ಸಂಸ್ಥೆಗಳನ್ನು ತಮ್ಮ ಹಿಡಿತಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ. ಸಂವಿಧಾನದ 324ನೇ ಪರಿಚ್ಛೇದದಡಿ ನೇಮಕಗೊಂಡಿರುವ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇಬ್ಬರು ಚುನಾವಣಾ ಆಯುಕ್ತರ ನೇಮಕ ಪ್ರಕ್ರಿಯೆ ಇತ್ತೀಚೆಗಷ್ಟೇ ಸಂಪೂರ್ಣ ಬದಲಾಗಿದ್ದು, ನೇಮಕ ಸಮಿತಿಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ತೆಗೆದುಹಾಕಲಾಗಿದೆ. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರು, ಸದಸ್ಯರು, ಕಂಟ್ರೋಲರ್ ಆಡಿಟರ್ ಜನರಲ್ ನೇಮಕದಲ್ಲಿ ಸಂಘಪರಿವಾರದ ಸಿದ್ಧಾಂತಗಳನ್ನು ಹೊಂದಿರುವವರನ್ನು ನೇಮಿಸಲಾಗುತ್ತಿದೆ. ಯುಜಿಸಿ, ಎನ್‌ಸಿಇಆರ್‌ಟಿಯಂತಹ ಎಲ್ಲಾ ಶಿಕ್ಷಣ ಸಂಸ್ಥೆಗಳು ಸ್ವಾಯತ್ತತೆಯನ್ನು ಕಳೆದುಕೊಂಡಿವೆ.

ಸಂವಿಧಾನದಲ್ಲಿರುವ 'ಜಾತ್ಯತೀತ' ಪದ ಸಂಘಪರಿವಾರದವರಿಗೆ ಸ್ವಲ್ಪವೂ ಇಷ್ಟವಿಲ್ಲ. ಸಂವಿಧಾನ ರಚನೆ ವೇಳೆ ಪೀಠಿಕೆಯಲ್ಲಿ ಜಾತ್ಯತೀತ ಎಂಬ ಪದ ಇರಲಿಲ್ಲ, 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಇದನ್ನು ಸೇರಿಸಲಾಗಿದೆ, ಅದನ್ನು ತೆಗೆದುಹಾಕಬೇಕು, ಜಾತ್ಯತೀತ ವ್ಯವಸ್ಥೆ ಬೇಡ ಎಂದು ಅವರು ಹೇಳುತ್ತಿದ್ದಾರೆ. 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣ ಮತ್ತು 1994ರಲ್ಲಿ ಎಸ್. ಆರ್. ಬೊಮ್ಮಾಯಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ 'ಜಾತ್ಯತೀತತೆ' ಎಂಬುದು ಭಾರತೀಯ ಸಂವಿಧಾನದ ಮೂಲ ರಚನೆಯ ಭಾಗವಾಗಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ಸಾಮಾಜಿಕ ನ್ಯಾಯದ ಅವಶ್ಯಕತೆ ಇಲ್ಲವೇ?

ಸಂವಿಧಾನ ರಚನೆಕಾರರು ಸಂವಿಧಾನದ ಪೀಠಿಕೆಯಲ್ಲಿ ಎಲ್ಲ ಪ್ರಜೆಗಳಿಗೂ 'ಸಾಮಾಜಿಕ ನ್ಯಾಯ' ಸಿಗಬೇಕು ಎಂದು ಹೇಳಿದ್ದಾರೆ. ಇದಕ್ಕಾಗಿ ಸಂವಿಧಾನದಲ್ಲಿ ಹಲವು ಅಂಶಗಳನ್ನು ಅಳವಡಿಸಿದ್ದಾರೆ. ಸಂವಿಧಾನವು 5 ಮತ್ತು 6 ಅನುಸೂಚಿಗಳಲ್ಲಿ ಆದಿವಾಸಿಗಳಿಗಾಗಿ ಅನೇಕ ರಕ್ಷಣೆಗಳನ್ನು ಒದಗಿಸಿದ್ದಾರೆ. ಪರಿಶಿಷ್ಟ ಪ್ರದೇಶದ ಜನರಿಗೆ ಹಲವು ಹಕ್ಕುಗಳನ್ನು ನೀಡಿದ್ದಾರೆ. ಸಂವಿಧಾನದ 16 ನೇ ವಿಧಿಯು ಪರಿಶಿಷ್ಟ ಜಾತಿಗಳು, ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ರಾಜಕೀಯ, ಶೈಕ್ಷಣಿಕ ಮತ್ತು ಉದ್ಯೋಗ ಮೀಸಲಾತಿಗಳನ್ನು ಒದಗಿಸಿದ್ದರೆ. ಈ ನಿಯಮಗಳ ಪ್ರಕಾರ ಮಂಡಲ್ ಆಯೋಗದ ನೇಮಕಾತಿಯನ್ನೂ ಮಾಡಲಾಗಿತ್ತು.

ಆದರೆ ಕಳೆದ ಹತ್ತು ವರ್ಷಗಳಿಂದ ಬಿಜೆಪಿ ನಾಯಕರು ಹಾಗೂ ಸಂಘಪರಿವಾರದ ನಾಯಕರು ನೀಡುತ್ತಿರುವ ಹೇಳಿಕೆಗಳನ್ನು ನೋಡಿದರೆ, ಸಾಮಾಜಿಕ ನ್ಯಾಯ ಮತ್ತು ಮೀಸಲಾತಿಗೆ ಇವರಲ್ಲಿ ಎಷ್ಟು ವಿರೋಧವಿದೆ ಎಂಬುದು ತಿಳಿಯುತ್ತದೆ. ಮನುವಾದ ಆಧಾರಿತ ಸಂವಿಧಾನ ಇರಬೇಕು ಎನ್ನುವುದು ಅವರ ಉದ್ದೇಶವಾಗಿದೆ. ದೇಶದ ಹಲವೆಡೆ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿವೆ. ಮೀಸಲಾತಿ ವಿರುದ್ಧ ಮಾತನಾಡುವುದಲ್ಲದೆ, ಮೀಸಲಾತಿ ವಿರೋಧಿ ಆಂದೋಲನಕ್ಕೂ ಬೆಂಬಲ ನೀಡುತ್ತಿದ್ದಾರೆ. ಮಣಿಪುರದಲ್ಲಿ ಕುಕಿಗಳು– ಮೆಯಿತೇಯಿ ಜನರ ನಡುವೆ ವರ್ಷದಿಂದ ಮೀಸಲಾತಿಯ ಹೆಸರಿನಲ್ಲಿ ಘರ್ಷಣೆಗಳು ನಡೆಯುತ್ತಿವೆ. ಮಣಿಪುರ ಸರ್ಕಾರ ಮತ್ತು ಕೇಂದ್ರ ಸರ್ಕಾರ ಜನರ ನಡುವಿನ ಘರ್ಷಣೆ ನಿಲ್ಲಿಸಲು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿಲ್ಲ. ಮಣಿಪುರ ಇನ್ನೂ ಉದ್ವಿಗ್ನ ಸ್ಥಿತಿಯಲ್ಲಿದೆ. ಶತಮಾನದಿಂದ ನಡೆದುಕೊಂಡು ಬಂದಿರುವ ದಬ್ಬಾಳಿಕೆಯನ್ನು ಸರಿಪಡಿಸುವಲ್ಲಿ ಸಾಮಾಜಿಕ ನ್ಯಾಯವನ್ನು ಸಂವಿಧಾನದ ರಚನೆಕಾರರು ಪ್ರಮುಖ ಅಂಶವಾಗಿ ನೋಡಿದ್ದರಿಂದ, ಮೀಸಲಾತಿಯನ್ನು ಜಾರಿಗೊಳಿಸಲು ಹಲವಾರು ಸಾಂವಿಧಾನಿಕ ತಿದ್ದುಪಡಿಗಳನ್ನು ಮಾಡಲಾಯಿತು. ಬಿಜೆಪಿಯ ಸಿದ್ಧಾಂತ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ.

ಸಂಘಪರಿವಾರಕ್ಕೆ ಸೆಕ್ಯುಲರ್ ನೀತಿ ಬೇಕಾಗಿಲ್ಲ

ಸಂಘಪರಿವಾರದ ನೀತಿಗಳು ಜಾತ್ಯತೀತ ವ್ಯವಸ್ಥೆಗೆ ವಿರೋಧಿಯಾಗಿವೆ. ಸಂವಿಧಾನದಲ್ಲಿರುವ 'ಜಾತ್ಯತೀತ' ಪದ ಅವರಿಗೆ ಸ್ವಲ್ಪವೂ ಇಷ್ಟವಿಲ್ಲ. ಸಂವಿಧಾನ ರಚನೆ ವೇಳೆ ಪೀಠಿಕೆಯಲ್ಲಿ ಜಾತ್ಯತೀತ ಎಂಬ ಪದ ಇರಲಿಲ್ಲ, 1976ರಲ್ಲಿ ಸಂವಿಧಾನದ 42ನೇ ತಿದ್ದುಪಡಿಯಲ್ಲಿ ಇದನ್ನು ಸೇರಿಸಲಾಗಿದೆ, ಅದನ್ನು ತೆಗೆದುಹಾಕಬೇಕು, ಜಾತ್ಯತೀತ ವ್ಯವಸ್ಥೆ ಬೇಡ ಎಂದು ಅವರು ಹೇಳುತ್ತಿದ್ದಾರೆ. 1973ರಲ್ಲಿ ಕೇಶವಾನಂದ ಭಾರತಿ ಪ್ರಕರಣ ಮತ್ತು 1994ರಲ್ಲಿ ಎಸ್.ಆರ್. ಬೊಮ್ಮಾಯಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ 'ಜಾತ್ಯತೀತತೆ' ಎಂಬುದು ಭಾರತೀಯ ಸಂವಿಧಾನದ ಮೂಲ ರಚನೆಯ ಭಾಗವಾಗಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಸಂವಿಧಾನದ ರಚನೆಕಾರರು 25 ರಿಂದ 28 ನೇ ವಿಧಿಗಳಲ್ಲಿ ಜನರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಒದಗಿಸಿದ್ದಾರೆ. 29, 30 ಅಲ್ಪಸಂಖ್ಯಾತರಿಗೆ ಅವರ ಶಿಕ್ಷಣ, ಭಾಷೆ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ಅವಕಾಶಗಳನ್ನು ಒದಗಿಸುತ್ತದೆ.

ಜಗತ್ತಿನಲ್ಲಿ ಆಧುನಿಕ ಸಾಮ್ರಾಜ್ಯಗಳು ಜಾತ್ಯತೀತ ರಾಜ್ಯಗಳಾಗಿವೆ. ಜಾತ್ಯತೀತತೆ ಇಲ್ಲದೆ ಯಾವುದೇ ದೇಶದಲ್ಲಿಯೂ ಪ್ರಜಾಪ್ರಭುತ್ವ ಉಳಿಯಲು ಸಾಧ್ಯವಿಲ್ಲ. ಧರ್ಮ ಹಿಡಿತ ಹೊಂದಿರುವ ಪ್ರಭುತ್ವ ಹೊಂದಿರುವ ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವದ ಕೊರತೆಯನ್ನು ಕಾಣಬಹುದು. ಸಂಘಪರಿವಾರದ ಸಿದ್ಧಾಂತವು ಭಾರತವನ್ನು 'ಹಿಂದೂ ಧಾರ್ಮಿಕ ಪ್ರಾಬಲ್ಯ' (ಹಿಂದುತ್ವ) ರಾಜ್ಯವಾಗಿ ಪರಿವರ್ತಿಸುವುದಾಗಿತ್ತು. ಆದ್ದರಿಂದ ಅವರು ಜಾತ್ಯತೀತತೆಯನ್ನು ವಿರೋಧಿಸುತ್ತಾರೆ.

ಧಾರ್ಮಿಕ ವಿಭಜನೆ

ಭಾರತ ದೇಶದಲ್ಲಿನ 5 ಸಾವಿರ ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಸಾಮಾನ್ಯ ಸಂಸ್ಕೃತಿ ರೂಪುಗೊಂಡಿದೆ. ಹಿಂದೂ ಧರ್ಮ, ಇಸ್ಲಾಂ, ಕ್ರಿಶ್ಚಿಯನ್ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಸಿಖ್ ಧರ್ಮ, ಪಾರ್ಸಿ ಮತ್ತು ಇತರ ಧರ್ಮಗಳು, ಪದ್ಧತಿಗಳು ಮತ್ತು ಸಂಪ್ರದಾಯಗಳು ಭಾರತೀಯ ಜೀವನ ವಿಧಾನವನ್ನು ರೂಪಿಸಿವೆ. 1857 ರ ದಂಗೆಯ ನಂತರ ಬ್ರಿಟಿಷ್ ಆಡಳಿತಗಾರರಿಗೆ 'ಹಿಂದೂ–ಮುಸ್ಲಿಂ' ಏಕತೆಯನ್ನು ಸಹಿಸಲಾಗಲಿಲ್ಲ. ಬ್ರಿಟೀಷರ ಒಡೆದು ಆಳುವ ನೀತಿಯು ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಂಘರ್ಷದ ವಾತಾವರಣವನ್ನು ಸೃಷ್ಟಿಸಿತು ಮತ್ತು ಕೋಮು ಭಿನ್ನಾಭಿಪ್ರಾಯಗಳನ್ನು ಉತ್ತೇಜಿಸಿತು. ಮುಸ್ಲಿಂ ಲೀಗ್, ಹಿಂದೂ ಮಹಾಸಭಾ ಮತ್ತು ಇತರ ಸಂಘಟನೆಗಳ ರಚನೆಗೆ ಬ್ರಿಟಿಷ್ ಆಡಳಿತಗಾರರ ನೀತಿಗಳು ಕಾರಣವಾಗಿವೆ. ಈ ಒಡಕು ಕ್ರಮೇಣ ಹೆಚ್ಚಿ 1947ರಲ್ಲಿ ದೇಶ ವಿಭಜನೆಗೆ ಕಾರಣವಾಯಿತು ಎನ್ನುವುದು ಇತಿಹಾಸದ ಸಾಕ್ಷಿಯಾಗಿ ನಮ್ಮ ಕಣ್ಣಮುಂದೆ ಇರುವ ಸತ್ಯ. ಬ್ರಿಟಿಷ್ ಆಡಳಿತಗಾರರಂತೆ ಸಂಘಪರಿವಾರವು ಜಮ್ಮು

ಪುಟ 14 ಕ್ಕೆ



'ಬೇಟಿ ಬಚಾವೊ, ಬೇಟಿ ಪಢಾವೋ' ಯೋಜನೆಯ ಶೇ.80 ಖರ್ಚು ಪ್ರಚಾರಕ್ಕೆ

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಕೊಚ್ಚಿಕೊಳ್ಳುತ್ತಿರುವುದೇನು?

"ಅಮ್ಮಂದಿರು ಮತ್ತು ಹೆಣ್ಣು ಮಕ್ಕಳು ಸದೃಢವಾಗಿದ್ದರೆ ಕುಟುಂಬವೂ ಸದೃಢವಾಗಿರುತ್ತದೆ, ಆದ್ದರಿಂದಲೇ ತಾಯಂದಿರು ಮತ್ತು ಹೆಣ್ಣುಮಕ್ಕಳು ನಮ್ಮ ಸರ್ಕಾರದ ಆದ್ಯತೆ" –ನರೇಂದ್ರ ಮೋದಿ

"ಎಲ್ಲ ಕುಟುಂಬಗಳ ಸಮಗ್ರ ಯೋಗಕ್ಷೇಮಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ, ಮತ್ತು ಇದು ಮಹಿಳೆಯರ ಆರೋಗ್ಯ ಮತ್ತು ಘನತೆಯ ಬದುಕಿನ ಮೇಲೆ ಅವಲಂಬಿಸಿರುತ್ತದೆ" –ನರೇಂದ್ರ ಮೋದಿ.

"ಮನೆಗಳಲ್ಲಿ ಶೌಚಾಲಯಗಳಿಲ್ಲದ ಕಾರಣದಿಂದ ನಮ್ಮ ಸೋದರಿಯರ ಘನತೆಗೆ ಕುಂದುಂಟಾಗುವ ಹಾಗು ನೋವಿನ ದಿನಗಳು ಮರೆಯಾಗಿ ಹೋದವು" –ನರೇಂದ್ರ ಮೋದಿ

"ನಮ್ಮ ನಡವಳಿಕೆಯಲ್ಲಿ ವಿಕೃತಿ ನುಸುಳಿದೆ, ಹಾಗೆಂದೇ ನಾವು ಕೆಲವೊಮ್ಮೆ ಮಹಿಳೆಯರನ್ನು ಅವಮಾನಿಸುತ್ತೇವೆ. ಮಹಿಳೆಯರ ಘನತೆಗೆ ಕುಂದುಂಟುಮಾಡುವ ನಡೆ ನುಡಿಗಳನ್ನು ನಾವು ಬಿಟ್ಟುಬಿಡಬೇಕು" –ನರೇಂದ್ರ ಮೋದಿ

"ಮಹಿಳೆಯರಿಗೆ ಕೊಡಬೇಕಾದ ಗೌರವ ಮತ್ತು ಸಮಾನತೆಯ ಭಾವನೆಯ ಮಟ್ಟದಲ್ಲಿ ಏರಿಕೆಯಾದರಷ್ಟೇ ಭಾರತ ಪ್ರಗತಿ ಹೊಂದಲು ಸಾಧ್ಯ. ಎಲ್ಲ ಮಹಿಳೆಯರಿಗೆ, ಅಕ್ಕ ತಂಗಿಯರಿಗೆ, ಹೆಣ್ಣು ಮಕ್ಕಳ ದಾರಿಗೆ ಅಡ್ಡಲಾಗುವ ಎಲ್ಲ ಅಡ್ಡಿ ಆತಂಕಗಳನ್ನು ದೃಢ ಮನಸ್ಸಿನಿಂದ ಕಿತ್ತೊಗೆಯಲು ಎಲ್ಲರೂ ಮುಂದಾಗಬೇಕೆಂದು ನಾನು ಕರೆ ನೀಡುತ್ತೇನೆ" –ನರೇಂದ್ರ ಮೋದಿ.

ಗರ್ಭಿಣಿ ಮಹಿಳೆಯರಿಗೆ ಉಚಿತ ಲಸಿಕೆ, ಗರ್ಭಿಣಿ ಸ್ತ್ರೀಯರಿಗೆ ಉಚಿತ ಆರೋಗ್ಯ ವ್ಯವಸ್ಥೆಗಳ ಸೌಲಭ್ಯ, ತಿಂಗಳಿಗೆ 5000 ರೂಪಾಯಿ, ಆಶಾ, ಅಂಗನವಾಡಿ ಇತ್ಯಾದಿ ಮುಂಚೂಣಿ ಕೆಲಸಗಾರರಿಗೆ 5 ಲಕ್ಷ ರೂಪಾಯಿಗಳ ಆರ್ಥಿಕ ಸಹಾಯ.

ಮಹಿಳೆಯರಿಗೆ ಪಕ್ಕಾ ಮನೆಗಳು ಮತ್ತು ಉಜ್ವಲಾ ಯೋಜನೆಯಡಿ ಗ್ಯಾಸ್ ಸಿಲಿಂಡರ್ ಗಳು,

ಮಹಿಳೆಯರ ಹೆಸರಿನಲ್ಲಿ ಶೇ.50 ಜನ ಧನ್ ಖಾತೆಗಳು

ಮುದ್ರಾ ಸಾಲ ನೀಡಿಕೆಯಲ್ಲಿ ಶೇ.65 ಮಹಿಳೆಯರಿಗೆ

10 ಕೋಟಿಗೂ ಮೀರಿದ ಸ್ವ ಸಹಾಯ ಸಂಘಗಳ ಮಹಿಳೆಯರು ಫಲಾನುಭವಿಗಳು, ಒಂದು ಕೋಟಿಗೂ ಮೀರಿ ಮಹಿಳೆಯರು 'ಲಕ್–ಪತಿ ದೀದೀ' ಗಳಾಗಿದ್ದಾರೆ. 3 ಕೋಟಿ ಮಹಿಳೆಯರನ್ನು 'ಲಕ್–ಪತಿ ದೀದಿ' ಗಳನ್ನಾಗಿ ಮಾಡುವುದು ನಮ್ಮ ಗುರಿ.

ವಾಸ್ತವವೇನು?

ಮಹಿಳೆಯರು ಮತ್ತು ಮಕ್ಕಳ ಕಲ್ಯಾಣದ ಕುರಿತು ಅತೀವ ಕಾಳಜಿ ತನ್ನ ಸರ್ಕಾರಕ್ಕಿದೆ ಎಂದು ಹೇಳಿಕೊಂಡ ಮೋದಿಯವರ ಮಾತು, ವಾಸ್ತವದಲ್ಲಿ ಸಂಪೂರ್ಣ ಟೊಳ್ಳು ಎಂಬುದು ಅವರ ಆಳ್ವಿಕೆಯಲ್ಲಿ ಮಹಿಳೆಯರ ಜೀವನದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿರುವುದನ್ನು ನೋಡಿದರೆ ತಿಳಿಯುತ್ತದೆ.

ವಿಶ್ವದಲ್ಲೇ ಅತಿ ಹೆಚ್ಚು ಹಸಿವು ಮತ್ತು ಅಪೌಷ್ಟಿಕತೆಯಿಂದ ನರಳುತ್ತಿರುವ ಮಹಿಳೆಯರು ಮತ್ತು ಮಕ್ಕಳು ಭಾರತದಲ್ಲಿದ್ದಾರೆ. ವಿಶ್ವದ ಹಸಿವಿನ ಸೂಚ್ಯಂಕದಲ್ಲಿ ಭಾರತ ಅತ್ಯಂತ ಕೆಳಗಿದೆ, ಇಲ್ಲಿರುವ ಸಾಮಾಜಿಕ ಕಟ್ಟಳೆಗಳ ಕಾರಣದಿಂದ ಮಹಿಳೆಯರು ಮತ್ತು ಮಕ್ಕಳು ಕುಟುಂಬಗಳಲ್ಲಿ ಹಸಿವಿನಿಂದ ಇರುವುದು ಸಹಜ ಎಂಬಂತೆ ಇದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 (ಡಿಸೆಂಬರ್ 2022)ರ ಪ್ರಕಾರ '5 ವರ್ಷದೊಳಗಿನ ಶೇ.36 ಮಕ್ಕಳು ಭಾರತದಲ್ಲಿ ಬೆಳವಣಿಗೆ ಕುಂಠಿತರಾದವರಿದ್ದಾರೆ. ಶೇ.19 ದುಃಸ್ಥಿತಿಯಲ್ಲಿರುವವರು, ಶೇ.32 ತೂಕ ಕಡಿಮೆ ಇರುವವರು ಇದ್ದಾರೆ.

ಇನ್ನೊಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ "5 ವರ್ಷದೊಳಗಿನ ಶೇ.44 ಮಕ್ಕಳು ತೂಕ ಕಡಿಮೆ ಇರುವವರಿದ್ದಾರೆ. ಶೇ.72 ಹಸುಳೆಗಳು ಮತ್ತು ಶೇ.52 ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಸಂಶೋಧನೆಗಳಿಂದ ದೃಢಪಟ್ಟಿರುವ ಅಂಶವೆಂದರೆ, ಗರ್ಭಿಣಿಯಾಗಿರುವಾಗ ಪೌಷ್ಟಿಕಾಂಶದ ಕೊರತೆ ಉಂಟಾದರೆ ಹುಟ್ಟುವ ಮಕ್ಕಳು ಭವಿಷ್ಯದಲ್ಲಿ ರೋಗಗಳಿಗೆ ತುತ್ತಾಗುವ, ದೈಹಿಕ ಬೆಳವಣಿಗೆಯ ಕುಂಠಿತತೆ, ಅರಿವಿನ ಸಾಮರ್ಥ್ಯದ ಕೊರತೆಗಳ ಅಪಾಯಗಳಿಗೆ ತುತ್ತಾಗುತ್ತಾರೆ."

ಪಿ.ಎಂ.ಪೋಷಣ್–ಮಧ್ಯಾಹ್ನದ ಬಿಸಿಯೂಟಕ್ಕೆ ಇಟ್ಟ ಹೊಸ ಹೆಸರಿನ ಯೋಜನೆಯ ಅನುದಾನದ ಬಳಕೆಯಲ್ಲಿ ತೀವ್ರ ಕೊರತೆಗಳಿವೆ. ಈ ಯೋಜನೆಗೆ ಹಣ ಹಂಚಿಕೆಯನ್ನೂ ಕಡಿಮೆ ಮಾಡಲಾಗಿದೆ. ಮೊದಲಿನ ಮಧ್ಯಾಹ್ನದ ಬಿಸಿಯೂಟವನ್ನು ಪಿ.ಎಂ.ಪೋಷಣ್ ಎಂದು ಮರು ನಾಮಕರಣ ಮಾಡಿ 2022–23 ರಲ್ಲಿ ಕೊಟ್ಟ 12,800 ಕೋಟಿ ರೂಪಾಯಿಗಳಿಗೆ ಬದಲಾಗಿ 2023–24 ಕ್ಕೆ 11,600 ಕೋಟಿ ರೂಪಾಯಿಗಳನ್ನು ನೀಡಲಾಯಿತು.

ಸಾರ್ವಜನಿಕ ಪಡಿತರ ವ್ಯವಸ್ಥೆ ಕೂಡಾ ಬಜೆಟ್ ನಲ್ಲಿ ಕಡಿತಗೊಂಡಿದೆ. ದೊಡ್ಡ ಸಂಖ್ಯೆಯಲ್ಲಿ ರೇಷನ್ ಕಾರ್ಡ್ ಗಳನ್ನು ರದ್ದುಮಾಡಲಾಗಿದೆ. ಬಹಳ ಕೊಚ್ಚಿಕೊಳ್ಳುತ್ತಿರುವ ಕುಟುಂಬದ ಸದಸ್ಯರಿಗೆ ತಲಾ 5 ಕೆ.ಜಿ. ಉಚಿತ ರೇಷನ್ ಪ್ರಮಾಣವೂ ಸಾಲದು ಮತ್ತು ಅದು ಕೂಡಾ ಸರಿಯಾಗಿ ತಲುಪುತ್ತಿಲ್ಲ.

ತಾಯಿಯ ಮತ್ತು ಶಿಶುಗಳ ಆರೋಗ್ಯದ ಕುರಿತಾದ ವಿಶ್ವ ಸಂಸ್ಥೆಯ ವರದಿ ಮೇ 2023ರ ಪ್ರಕಾರ 2015 ರಿಂದೀಚೆಗೆ ಗರ್ಭಾವಸ್ಥೆಯಲ್ಲಿ, ಹೆರಿಗೆಯ ಸಮಯದಲ್ಲಿ, ಹುಟ್ಟಿದ ಕೆಲವೇ ವಾರಗಳಲ್ಲಿ ಸಾಯುವ ಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ಪ್ರಗತಿ ಕಂಡುಬಂದಿದೆ.

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯ ಅಡಿ ಒಂದು ಬಾರಿ ಮಾತ್ರ ಕೊಡುವ 5000 ರೂಪಾಯಿಗಳ ಮೊತ್ತ 2017ರಿಂದ ಅಷ್ಟೇ ಇದೆ. ಇತ್ತೀಚೆಗಷ್ಟೇ ಇದನ್ನು 6000ಕ್ಕೆ ಏರಿಸಲಾಗಿದ್ದು ಅದು ಎರಡನೇ ಹೆಣ್ಣುಮಗುವಿಗೆ ಕೊಡಲಾಗುತ್ತದೆ. ಕೇವಲ ಶೇ.20 ಅರ್ಹ ಫಲಾನುಭವಿಗಳಿಗೆ ಈ ಯೋಜನೆ ದಕ್ಕುತ್ತಿದೆ. ಆಧಾರ ಲಿಂಕ್ ಕಡ್ಡಾಯ ಮಾಡಿದ ಮೇಲೆ 2022ರಲ್ಲಿ ಅದು ಶೇ.46 ರಷ್ಟು ಇಳಿದಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ 2023–24 ರ ಬಜೆಟ್ ನಲ್ಲಿ ಕೂಡಾ ಶೇ.17 ಕಡಿತ ಮಾಡಲಾಗಿದೆ. ಕೇವಲ ಶೇ.20 ಫಲಾನುಭವಿಗಳು ಎರಡೂ ಕಂತುಗಳನ್ನು ಪಡೆದಿದ್ದಾರೆ. ಇಲ್ಲಿ ಗಮನಿಸಬೇಕಾದ್ದು ಅಸ್ಸಾಂ, ಯು.ಪಿ, ಬಿಹಾರ್, ಮಧ್ಯಪ್ರದೇಶದಂತಹ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮಾತ್ರ ಮರಣದ ಪ್ರಮಾಣ ರಾಷ್ಟ್ರೀಯ ಪ್ರಮಾಣಕ್ಕಿಂತ ಬಹಳ ಹೆಚ್ಚಿದೆ. ಇದಕ್ಕೆ ವ್ಯತಿರಿಕ್ತವಾಗಿ ಕೇರಳದಲ್ಲಿ ಇದು 42 ಇದ್ದು ಅಭಿವೃದ್ಧಿ ಹೊಂದಿದ ದೇಶಗಳ ಗುಣಮಟ್ಟವನ್ನು ಸಾಧಿಸಿದೆ.

ಸಾವಿರಾರು ಸರ್ಕಾರಿ ಶಾಲೆಗಳ ವಿಲೀನ ಮತ್ತು ಮುಚ್ಚುವಿಕೆಯಿಂದಾಗಿ ಬಾಲಕಿಯರ ಶಿಕ್ಷಣದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಸ್ಮಾರ್ಟ್ ಫೋನ್‌ಗಳ ಅಲಭ್ಯತೆ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಿದ್ದ ಸ್ಕಾಲರ್ ಶಿಪ್ ಕೊಡುವುದನ್ನೂ ನಿಲ್ಲಿಸಲಾಗಿದೆ. ಈ ಎಲ್ಲದರಿಂದ ಬಾಲಕಿಯರು ಶಿಕ್ಷಣ ತ್ಯಜಿಸುವ ಸಂಖ್ಯೆ ಹೆಚ್ಚುತ್ತದೆ.

ಕೇಂದ್ರ ಸರ್ಕಾರದ ಬೇಟಿ ಬಚಾವೊ, ಬೇಟಿ ಪಢಾವೊ ಯೋಜನೆಗೆ 2016–19ರ ಅವಧಿಯಲ್ಲಿ ಬಿಡುಗಡೆಯಾದ 446.72 ಕೋಟಿ ರೂಪಾಯಿಗಳ ಶೇ.78.9 ಹಣ ಮಾಧ್ಯಮ ಪ್ರಚಾರಕ್ಕೆ ವೆಚ್ಚ ಮಾಡಲಾಗಿದೆ ಎಂದು ಸಂಸತ್ ಸಮಿತಿ ವರದಿ ಮಾಡಿದೆ.

ಉಜ್ವಲಾ ಯೋಜನೆಯಡಿ ಪಡೆವ ಸಿಲಿಂಡರ್ ಗಳ ಮರುಭರ್ತಿ ವೆಚ್ಚದಲ್ಲಿ ಏರಿಕೆಯಾದ ಕಾರಣದಿಂದ ಸಿಲಿಂಡರ್‌ಗಳು ಖಾಲಿ ಬಿದ್ದಿವೆ. 2021 ರಲ್ಲಿ 90 ಲಕ್ಷ ಫಲಾನುಭವಿಗಳು ತಮ್ಮ ಸಿಲಿಂಡರ್ ಗಳನ್ನು ಮರು ಭರ್ತಿ ಮಾಡಿಕೊಳ್ಳಲಿಲ್ಲ (ದಿ ಹಿಂದೂ); 1 ಕೋಟಿ ಸಿಲಿಂಡರ್‌ಗಳಿಗೆ ಒಮ್ಮೆ ಮಾತ್ರ ಮರುಭರ್ತಿ ಮಾಡಲಾಗಿದೆ.

ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುವಾಗ ಸರ್ಕಾರವೇ ಒಪ್ಪಿಕೊಂಡಂತೆ ಬಹುತೇಕ ಫಲಾನುಭವಿಗಳು ಕೇವಲ ಒಮ್ಮೆ ಮರುಭರ್ತಿ ಮಾಡಿಕೊಂಡಿದ್ದಾರೆ, ದೊಡ್ಡ ಸಂಖ್ಯೆಯಲ್ಲಿ ಸಿಲಿಂಡರ್‌ಗಳು ಮರು ಭರ್ತಿ ಮಾಡಿಕೊಂಡೇ ಇಲ್ಲ.

ಮಹಿಳೆಯರ ಮತ್ತು ಹೆಣ್ಣುಮಕ್ಕಳ ಸುರಕ್ಷತೆ ಮತ್ತು ಆರೋಗ್ಯದ ದೃಷ್ಟಿಯಿಂದ ಮನೆಗಳಲ್ಲಿ ಶೌಚಾಲಯವಿರುವುದು ತೀರ ಅಗತ್ಯ. 2017 ರ ಯುನಿಸೆಫ್ ವರದಿಯಂತೆ, ಬಹಿರ್ದೆಸೆಗೆ ಬಯಲು ಬಳಸುವವರು ಭಾರತದಲ್ಲಿ 62 ಕೋಟಿ ಜನರಿದ್ದು, ಅದು ವಿಶ್ವದಲ್ಲಿಯೇ ಅತಿ ಹೆಚ್ಚು (ಹಿಂದೂಸ್ತಾನ್ ಟೈಮ್ಸ್). 'ಎಲ್ಲರಿಗೂ 2019 ರ ಹೊತ್ತಿಗೆ ಶೌಚಾಲಯ' ಇದು ಮೋದಿಯ ಭರವಸೆ. ಮಾತಿಗೂ ಮತ್ತು ಕೃತಿಗೂ ಮಧ್ಯೆ ಇರುವ ವ್ಯತ್ಯಾಸಕ್ಕೆ ಅವರದೇ ಕ್ಷೇತ್ರ ವಾರಣಾಸಿಯಲ್ಲಿ ಶೌಚಾಲಯ ನಿರ್ಮಾಣದ ಗುರಿ ಇದ್ದುದು 2,34,489, ಆದರೆ ನಿರ್ಮಾಣವಾದದ್ದು 7327 ಮಾತ್ರ.

2023 ಸೆಪ್ಟೆಂಬರ್ ನಲ್ಲಿ ವಿಶ್ವ ಬ್ಯಾಂಕ್ "ಗ್ರಾಮೀಣ ಭಾರತದಲ್ಲಿ ನೈರ್ಮಲ್ಯದ ಪ್ರಗತಿ" ವಿವಿಧ ಪುರಾವೆಗಳನ್ನು ಸಮನ್ವಯಗೊಳಿಸುವ 'ಕುರಿತು ಬಿಡುಗಡೆ ಮಾಡಿದ ವರದಿಯ ಪ್ರಕಾರ ಮೋದಿ ಸರ್ಕಾರದ ಪ್ರಮುಖ ಯೋಜನೆಗಳಲ್ಲಿ ಒಂದಾದ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ, ಗ್ರಾಮೀಣ ಭಾರತದಲ್ಲಿ ನಿರ್ಮಿಸಿದ ಶೌಚಾಲಯಗಳ ಬಳಕೆಯಲ್ಲಿ, 2018–19 ಮತ್ತು 2020–21 ರ ನಡುವೆ ಶೇ.12 ರಷ್ಟು ಇಳಿಕೆ ಕಂಡಿದೆ.

ಈ ರೀತಿಯ ಇಳಿಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳಲ್ಲಿ ಶೇ.20 ಮತ್ತು ಶೇ.24 ರಷ್ಟಿದೆ. 2021 ರ ಹೊತ್ತಿಗೆ ಗ್ರಾಮೀಣ ಭಾಗದ ಜನಸಂಖ್ಯೆಯ ಶೇ.25 ನಿಯಮಿತವಾಗಿ ಶೌಚಾಲಯಗಳ ಬಳಕೆ ಮಾಡುತ್ತಿಲ್ಲ ಎಂಬ ಹಿನ್ನಡೆಯನ್ನು ಸೂಚಿಸುತ್ತಿದೆ.

ಜನ ಧನ್ ಯೋಜನೆಯ ಅಡಿ ತೆರೆಯಲಾದ ಖಾತೆಯ ಶೇ.50 ಮಹಿಳೆಯರೇ ಆಗಿದ್ದರೂ, ಅದರಲ್ಲಿ ಸಾಲ ಸೌಲಭ್ಯ ಪಡೆಯುವರಲ್ಲಿ ಶೇ.30 ಕ್ಕಿಂತಲೂ ಕಡಿಮೆಯಿದ್ದಾರೆ ಮತ್ತು ಪುರುಷರ ಶೇ.52ಕ್ಕೆ ಹೋಲಿಸಿದರೆ, ಅವರ ಠೇವಣಿಗಳ ಕೇವಲ ಶೇ.27ರಷ್ಟು ಮಾತ್ರ ಸಾಲ ಪಡೆಯುತ್ತಾರೆ. ಬಹುತೇಕ ಅವರ ಖಾತೆಗಳು ನಿಷ್ಕ್ರೀಯವಾಗಿವೆ ಅಥವಾ ಸರ್ಕಾರಿ ಯೋಜನೆಗಳಿಂದ ಪಡೆಯುವ ಸೌಲಭ್ಯಗಳಿಗಾಗಿ ಮಾತ್ರವೇ ಬಳಸಲಾಗುತ್ತದೆ.

ಸ್ವ–ಸಹಾಯ ಸಂಘಗಳಿಗೆ ದೊಡ್ಡ ಮಟ್ಟದ ಸಹಾಯ ಮಾಡುವುದಾಗಿ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ ವಾಸ್ತವದಲ್ಲಿ ಸಾಲ ಸೌಲಭ್ಯ ನೀಡುವುದನ್ನು ಅತ್ಯಂತ ಶೋಷಕ ಕಿರು ಹಣಕಾಸು (ಮೈಕ್ರೋ ಫೈನಾನ್ಸ್) ಸಂಸ್ಥೆಗಳಿಗೆ ವಹಿಸಿಕೊಡಲಾಗಿದೆ. ಎಷ್ಟೋ ಮಹಿಳೆಯರು ಸಾಲದ ಸುಳಿಗೆ ಸಿಕ್ಕು, ಕಿರು ಹಣಕಾಸು ಸಾಲ ವಸೂಲಿಗಾರರಿಂದ ಹಲವು ರೀತಿಯ ಕಿರುಕುಳ ಹಿಂಸೆಗಳಿಗೆ ಒಳಗಾಗುತ್ತಾರೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (**NCRB**) 2023 ರ ಪ್ರಕಾರ, 2021ರಲ್ಲಿ ಮಹಿಳೆಯರ ವಿರುದ್ಧ ನಡೆದ ಅಪರಾಧಗಳಿಗೆ ಹೋಲಿಸಿದರೆ, 2022 ರಲ್ಲಿ ಶೇ.2.13 ಏರಿಕೆಯಾಗಿದೆ. 2017 ರಲ್ಲಿ ಮಹಿಳೆಯರ ವಿರುದ್ಧ ಅಪರಾಧದ 3,15,215 ಪ್ರಕರಣಗಳು ದಾಖಲಾಗಿದ್ದವು. 2022 ರಲ್ಲಿ 3,65,300 ಕ್ಕೆ ಏರಿಕೆಯಾಯಿತು. ಕಳೆದ 6 ವರ್ಷಗಳ ಅವಧಿಯಲ್ಲಿ ಹೆಚ್ಚಳ ಶೇ.15.88 ಆಗಿದ್ದು ಗಣನೀಯ ಪ್ರಮಾಣದ ಏರಿಕೆಯನ್ನು ಕಂಡಿದೆ. 2014 ರಲ್ಲಿ ಮಹಿಳೆಯರ ವಿರುದ್ಧದ ಅಪರಾಧದ ದರವು, ಒಂದು ಲಕ್ಷ ಮಹಿಳಾ ಜನಸಂಖ್ಯೆಯಲ್ಲಿ 56.3 ಇದ್ದುದು 2022ರಲ್ಲಿ 66.4 ಕ್ಕೆ ಏರಿದೆ.

2017 ರಿಂದ 2022 ರ ಆರು ವರ್ಷಗಳ ದಾಖಲೆಯಲ್ಲಿ ಉತ್ತರ ಪ್ರದೇಶ ಮಹಿಳೆಯರ ವಿರುದ್ಧದ ದೌರ್ಜನ್ಯಗಳಲ್ಲಿ ಮೊದಲ ಸ್ಥಾನದಲ್ಲಿದೆ. 2022 ರಲ್ಲಿ ದೌರ್ಜನ್ಯಗಳು ಹೆಚ್ಚಿದ್ದ ರಾಜ್ಯಗಳಲ್ಲಿ ದೆಹಲಿ ಮತ್ತು ಹರ್ಯಾಣ ಇದ್ದವು.

ರಾಷ್ಟ್ರೀಯ ಅಪರಾಧ ಬ್ಯೂರೋ 2017 ರಿಂದೀಚೆಗೆ ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳಲ್ಲಿ ಶೇ.94.47 ಹೆಚ್ಚಳವಾಗಿರುವುದನ್ನು ದಾಖಲಿಸಿದೆ. 2022 ರಲ್ಲಿ ದಾಖಲಾದ 63,414 ಪ್ರಕರಣಗಳಲ್ಲಿ 8136 ಪ್ರಕರಣಗಳು ಉತ್ತರಪ್ರದೇಶದಲ್ಲಿ ದಾಖಲಾಗಿದ್ದು, ➚

ನರೇಂದ್ರ ಮೋದಿಯವರ ಕೋಮುವಾದಿ ಚುನಾವಣಾ ಪ್ರಚಾರಕ್ಕೆ ಹಾಕಿ ಬ್ರೇಕ್



ಪ್ರಕಾಶ್ ಕಾರತ್

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆಯುತ್ತಿರುವ ಬಿಜೆಪಿಯ ಚುನಾವಣಾ ಪ್ರಚಾರವು ಧರ್ಮದ ಆಧಾರದಲ್ಲಿ ಬಹಿರಂಗವಾಗಿ ಜನರಿಗೆ ಮನವಿ ಮಾಡುವ ಹಂತಕ್ಕೆ ಇಳಿದಿದೆ. ರಾಮ ಮಂದಿರವನ್ನು ಒಂದು ಚುನಾವಣಾ ಪ್ರಶ್ನೆಯನ್ನಾಗಿ ಮಾಡಿದ್ದು ಕೆಲವು ಪ್ರತಿಪಕ್ಷಗಳು ಮಂದಿರ ಮತ್ತು ಶ್ರೀ ರಾಮನಿಗೆ ವಿರುದ್ಧವಾಗಿವೆ ಎಂದು ಅದು ಹೇಳುತ್ತಿದೆ. ಇದು ಮಾದರಿ ನೀತಿ ಸಂಹಿತೆಯ ನಗ್ನ ಉಲ್ಲಂಘನೆಯಗಿದೆ. ಕೆಲವು ಭಾಷಣಗಳಂತೂ ದ್ವೇಷ ಭಾಷಣ ಮತ್ತು ಧಾರ್ಮಿಕ ಭಾವನೆಗಳನ್ನು ಉದ್ರೇಕಿಸಿದ್ದಕ್ಕಾಗಿ ಭಾರತೀಯ ದಂಡ ಸಂಹಿತೆಯ (ಐಪಿಸಿ) ನಿರ್ದಿಷ್ಟ ನಿಯಮಗಳ ವ್ಯಾಪ್ತಿಗೆ ಬರಬೇಕಾಗುತ್ತವೆ.

ಮೋದಿಯೇ ಮುಖ್ಯ ಆರೋಪಿ

ಈ ವಿಚಾರದಲ್ಲಿ ಮೋದಿಯೇ ಮುಖ್ಯ ಅಪರಾಧಿಯಾಗಿದ್ದಾರೆ. ಆಳುವ ಪಕ್ಷದ ಸರ್ವೋನ್ನತ ನಾಯಕ ಯಾವ ರೀತಿಯಲ್ಲಿ ಖುಲ್ಲಂ ಖುಲ್ಲಾ ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಿದ್ದಾರೆ ಎಂಬುದನ್ನು ನೋಡಲು ಅವರ ಕೆಲವು ಚುನಾವಣಾ ರ್‍ಯಾಲಿಯ ಭಾಷಣಗಳನ್ನು ಗಮನಿಸಬೇಕು.

ಏಪ್ರಿಲ್ 7ರಂದು ಬಿಹಾರದ ನವಾಡಾದ ಭಾಷಣದಲ್ಲಿ ಮೋದಿ ಈ ರೀತಿಯಾಗಿ ಆರೋಪಿಸಿದರು: 'ಅಯೋಧ್ಯೆಯಲ್ಲಿ ಭವ್ಯ ಮಂದಿರ ಕಟ್ಟುವುದನ್ನು ತಡೆಯಲು ಕಾಂಗ್ರೆಸ್ ಮತ್ತು ಆರ್‌ಜೆಡಿ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿವೆ'. ಅವುಗಳು 'ಪ್ರಾಣ ಪ್ರತಿಷ್ಠೆ'ಯನ್ನು ಬಹಿಷ್ಕರಿಸಿದವು ಎಂದು ಹೇಳಿದ ಮೋದಿ, ಶ್ರೀ ರಾಮನ ಬಗ್ಗೆ ಈ ಪರಿಯ ದ್ವೇಷವೇಕೆ ಎಂದು ಪ್ರಶ್ನಿಸಿದರು. 'ರಾಮ ನವಮಿ ಆಗಮಿಸುತ್ತಿದೆ' ಎಂದು ಸಭಿಕರಿಗೆ ನೆನಪಿಸಿದ ಮೋದಿ, 'ಪಾಪ ಮಾಡಿದವರು ಯಾರು ಎನ್ನುವುದನ್ನು ಮರೆಯಬೇಡಿ' ಎಂದು ಕರೆ ನೀಡಿದರು. ಇದು ಜನರ ಧಾರ್ಮಿಕ ಭಾವನೆಗಳೊಂದಿಗೆ ಆಟವಾಡಿ ಚಿತಾವಣೆ ಮಾಡುವುದಲ್ಲದೆ ಬೇರೇನೂ ಅಲ್ಲ. ಹಾಗೂ ಇದು ಪ್ರತಿಪಕ್ಷಗಳು ರಾಮನ ವಿರೋಧಿ ಎಂದು ಸುಳ್ಳು ಆರೋಪ ಮಾಡುವುದಲ್ಲದೆ ಇನ್ನೇನೂ ಅಲ್ಲ. ಇದು ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆ ಮಾತ್ರವಲ್ಲದೆ ದ್ವೇಷಕ್ಕೆ ಚಿತಾವಣೆ ಮಾಡಿದ್ದಕ್ಕಾಗಿ ಎಫ್‌ಐಆರ್ ದಾಖಲಿಸಲು ಅರ್ಹವಾದ ವಿಚಾರವೂ ಆಗಿದೆ.

ಅದಕ್ಕೂ ಮುನ್ನ ಏಪ್ರಿಲ್ 6ರಂದು ರಾಜಸ್ಥಾನದ ಅಜ್ಮೇರ್‌ನಲ್ಲಿ ಮಾಡಿದ ಭಾಷಣದಲ್ಲಿ ಮೋದಿ, ಅಯೋಧ್ಯೆಯ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ತನ್ನ ಸದಸ್ಯರನ್ನು ಕಾಂಗ್ರೆಸ್ ಪಕ್ಷ ಉಚ್ಚಾಟಿಸಿದೆ ಎಂದು ಸುಳ್ಳು ಸುಳ್ಳೇ ಆರೋಪ ಮಾಡಿದ್ದರು. ಹಾಗೂ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದ ವಿರೋಧವಾಗಿರುವವರು ಏಪ್ರಿಲ್ 19ರ ಮೊದಲ ಹಂತದ ಚುನಾವಣೆಯ ಕೇವಲ ಎರಡು ದಿನದ ಮುಂಚೆ ಬರುವ ರಾಮ ನವಮಿ ಆಚರಣೆಯನ್ನೂ ವಿರೋಧಿಸುತ್ತಾರೆಂಬ ಭಾವನೆ ಬರುವಂತೆ ಕುಚೇಷ್ಠೆಯನ್ನೂ ಮಾಡಿದ್ದರು. ಇದು ರಾಜಕೀಯ ವಿರೋಧಿಗಳ ವಿರುದ್ಧ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ನಗ್ನ ಪ್ರಯತ್ನವಾಗಿದೆ.

ಮೋದಿ ಉತ್ತರ ಪ್ರದೇಶದ ಪಿಲಿಭಿತ್‌ನಲ್ಲಿ ಏಪ್ರಿಲ್ 9ರಂದು ಮಾಡಿದ ಭಾಷಣದಲ್ಲೂ ಇದೇ ರೀತಿಯ ಅಂಶಗಳನ್ನು ಪ್ರಸ್ತಾಪಿಸಿದರು. ಅಯೋಧ್ಯೆಯ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಭಾಗವಹಿಸದಿದ್ದುದಕ್ಕೆ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಮೇಲೆ ದಾಳಿ ಮಾಡಿದರು. ಇದು ಶ್ರೀ ರಾಮನಿಗೆ ಅವಮಾನ ಎಂದು ಹೇಳಿದರು. 'ಇಂಡಿ ಮೈತ್ರಿ ಕೂಟದ ಜನರು ಬಹಳ ದೀರ್ಘ ಕಾಲದಿಂದ ರಾಮ ಮಂದಿರದ ಬಗ್ಗೆ ದ್ವೇಷವನ್ನು ಪೋಷಿಸಿಕೊಂಡು ಬಂದಿದ್ದಾರೆ' ಎಂದೂ ಮೋದಿ ಆರೋಪಿಸಿದರು. ಇಲ್ಲಿ ಕೂಡ ಮೋದಿ ಎರಡು ಪಕ್ಷಗಳು ರಾಮನಿಗೆ ಅವಮಾನ ಮಾಡಿವೆ ಎನ್ನುವ ಮೂಲಕ ಧಾರ್ಮಿಕ ಭಾವನೆಗಳನ್ನು ಕೆಣಕಲು ಪ್ರಯತ್ನಿಸಿರುವುದು ಸ್ಪಷ್ಟವಾಗಿದೆ. ಇಂಡಿಯಾ ಕೂಟದ ಸದಸ್ಯರು 'ರಾಮ ಮಂದಿರದ ವಿರುದ್ಧ ದ್ವೇಷವನ್ನು' ಪೋಷಿಸಿದ್ದಾರೆ ಎಂದು ಹೇಳಿ ಅವರು ದ್ವೇಷ ಭಾಷಣದಲ್ಲಿ ತೊಡಗಿದ್ದಾರೆ.

ಇವುಗಳು ಮೋದಿ ಭಾಷಣದ ವೈಖರಿಯ ಕೆಲವು ಸ್ಯಾಂಪಲ್‌ಗಳಷ್ಟೇ ಆಗಿವೆ. ಲೋಕಸಭೆ ಚುನಾವಣಾ ಪ್ರಚಾರದಲ್ಲಿ ಬಿಜೆಪಿಗೆ ಬೆಂಬಲವನ್ನು ಕ್ರೋಢೀಕರಿಸಲು ರಾಮ ಮತ್ತು ರಾಮ ಮಂದಿರವನ್ನು ಸತತವಾಗಿ ಬಳಸಿಕೊಳ್ಳುತ್ತಾ ಬಂದಿದೆ. ಉದಾಹರಣೆಗೆ, ಏಪ್ರಿಲ್ 6 ರಂದು ಗಾಜಿಯಾಬಾದ್‌ನಲ್ಲಿ ಮೋದಿ ಭಾಗವಹಿಸಿದ್ದ ರ್‌ ೋಡ್‌ ಶ್‌ ೋ ನ್‌ ಲ್ಲಿ ಕೆಲವು ಹಾಡುಗಳನ್ನು ನುಡಿಸಲಾಯಿತು. ಅದರ ಸಾಹಿತ್ಯ ಹೀಗಿತ್ತು. 'ಜೋ ರಾಮ್‌ಕೋ ಲಾಯೇ ಹೈಂ, ಹಮ್ ಉನ್ಕೋ ಲಾಯೇಂಗೆ' (ಅಂದರೆ, ನಮಗಾಗಿ ರಾಮನನ್ನು ತಂದವರನ್ನು ನಾವು ಅಧಿಕಾರಕ್ಕೆ ತರುತ್ತೇವೆ). 'ಭಾರತ್ ಕಾ ಬಚ್ಚಾ ಬಚ್ಚಾ ಜೈ ಶ್ರೀರಾಮ್ ಬೋಲೇಗಾ' ಎಂಬ ಘೋಷಣೆಯನ್ನು ಹಾಕಲಾಯಿತು. 'ಜೈ ಶ್ರೀರಾಮ್' ಎಂಬ ಧಾರ್ಮಿಕ ಘೋಷಣೆಯು ಬಿಜೆಪಿಯ ರಾಜಕೀಯ ಉದ್ದೇಶದ ಘೋಷಣೆಯಾಗಿ ಪರಿವರ್ತನೆಗೊಂಡಿದೆ.

ಅಮಿತ್ ಷಾ ಮತ್ತು ಆದಿತ್ಯನಾಥರಂಥ ಇತರ ಬಿಜೆಪಿ ನಾಯಕರು ಕೂಡ ಇದೇ ಧಾಟಿಯಲ್ಲಿ ಪ್ರಚೋದನಕಾರಿ ಭಾಷಣಗಳನ್ನು ಮಾಡುತ್ತಿದ್ದಾರೆ. ಆದರೆ ಅದಕ್ಕೆ ಶ್ರೀಕಾರ ಹಾಕಿದವರು ಸ್ವತಃ ಪ್ರಧಾನ ಮಂತ್ರಿ ಮೋದಿ.

ನೀತಿ ಸಂಹಿತೆ ಹೇಳುವುದೇನು?

ಚುನಾವಣೆಯ ಮಾದರಿ ನೀತಿ ಸಂಹಿತೆ ಹೀಗೆನ್ನುತ್ತದೆ: 'ಮತಗಳನ್ನು ಪಡೆಯಲಿಕ್ಕಾಗಿ ಜಾತಿ ಅಥವಾ ಧಾರ್ಮಿಕ ಭಾವನೆಗಳನ್ನು ಯಾವುದೇ ರೀತಿಯಲ್ಲಿ ಉದ್ದೀಪಿಸಬಾರದು. ಮಸೀದಿಗಳು, ಚರ್ಚುಗಳು, ದೇವಾಲಯಗಳು ಅಥವಾ ಇತರ ಯಾವುದೇ ಪೂಜಾ ಸ್ಥಳಗಳನ್ನು ಚುನಾವಣಾ ಪ್ರಚಾರದ ವೇದಿಕೆಗಳನ್ನಾಗಿ ಬಳಸಿಕೊಳ್ಳಬಾರದು'.

ಮೋದಿಯ ಭಾಷಣಗಳು ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟಿ ಪ್ರಾಣ ಪ್ರತಿಷ್ಠೆ ಮಾಡಿದವರಿಗೆ ಮತ ನೀಡಿ ಎಂದು ಮನವಿ ಮಾಡುತ್ತವೆ. ಅದಕ್ಕಿಂತ ಹೆಚ್ಚಾಗಿ, ಇದು ಚುನಾವಣೆ ಪ್ರಚಾರಕ್ಕೆ ಒಂದು ದೇವಾಲಯವನ್ನು ವೇದಿಕೆಯಾಗಿ ಬಳಸಿಕೊಳ್ಳುವ ಸಂಗತಿ ಮಾತ್ರವೇ ಅಲ್ಲ, ಆದರೆ ರಾಮ ಮಂದಿರವೇ ಬಿಜೆಪಿಯ ಚುನಾವಣಾ ಪ್ರಚಾರದ ಮುಖ್ಯ ವಿಷಯವಾಗಿದೆ.

ಸಿಪಿಐ(ಎಂ) ದೂರು

ಪ್ರಧಾನಿ ಮೋದಿಯ ಇಂಥ ಕೆಲವು ಚುನಾವಣಾ ಪ್ರಚಾರ ಭಾಷಣಗಳ ವಿರುದ್ಧ ಸಿಪಿಐ(ಎಂ) ಭಾರತ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ. 2019ರ ಲೋಕಸಭೆ ಚುನಾವಣೆ ಸಂದರ್ಭ ಮೋದಿ ಮತ್ತು ಅಮಿತ್ ಷಾರ ಕೆಲವು ಭಾಷಣಗಳ ವಿರುದ್ಧ ಚುನಾವಣೆ ಆಯೋಗಕ್ಕೆ ಸಿಪಿಐ(ಎಂ) ದಾಖಲಿಸಿದ್ದ ದೂರಿನ ಸಂಬಂಧ ಆಯೋಗ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಯಾವುದೇ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಆಯೋಗದ ಒಬ್ಬ ಆಯುಕ್ತರು ಭಿನ್ನಾಭಿಪ್ರಾಯ ಹೊಂದಿದ್ದರು ಎನ್ನುವುದು ಗೊತ್ತಾಗಿದೆ. ಆ ಆಯುಕ್ತರ ಹೆಸರು ಅಶೋಕ್ ಲಾವಸ. ನಂತರ ಲಾವಸ, ತನ್ನ ಪತ್ನಿ ಮತ್ತು ಮಗನನ್ನು ಆದಾಯ ತೆರಿಗೆ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿ ಕಿರುಕುಳ ನೀಡಿದ ಹಿನ್ನೆಲೆಯಲ್ಲಿ ರಾಜಿನಾಮೆ ಸಲ್ಲಿಸಿದ್ದರು.

ಪರೀಕ್ಷಾ ಕಾಲ

ಈ ಬಾರಿ ಚುನಾವಣೆ ಆಯೋಗಕ್ಕೆ ಪರೀಕ್ಷಾ ಸಮಯ ಎದುರಾಗಿದೆ. ಲೋಕಸಭೆ ಚುನಾವಣೆ ವೇಳಾ ಪಟ್ಟಿ ಪ್ರಕಟವಾಗುವ ಹೊಸ್ತಿಲಲ್ಲಿ ಇಬ್ಬರು ಚುನಾವಣಾ ಆಯುಕ್ತರನ್ನು (ಕಮಿಷನರ್) ವಿವಾದಾತ್ಮಕ ಚುನಾವಣಾ ಕಮಿಷನರ್‌ಗಳ ನೇಮಕಾತಿ ಕಾನೂನಿನನ್ವಯ ನೇಮಿಸಿದ ನಂತರ, ತಾನು ನಿಜವಾಗಿಯೂ ಒಂದು ಸ್ವತಂತ್ರ ಸಂಸ್ಥೆ ಹಾಗೂ ಕಾರ್ಯಾಂಗದ ಬಗ್ಗೆ ಯಾವುದೇ ಪಕ್ಷಪಾತಿಯಲ್ಲ ಎನ್ನುವುದನ್ನು ರುಜುವಾತು ಪಡಿಸುವ ಹೊಣೆ ಆಯೋಗದ್ದಾಗಿದೆ.

ಕೋಮುವಾದಿ ಅಜೆಂಡಾದೊಂದಿಗೆ ಮೇಲುಗೈ ಪಡೆದಿರುವ ಹಿಂದೂತ್ವ ಅಭಿಯಾನವನ್ನು ಸಹಜಗೊಳಿಸಲು ಆಳುವ ಪಕ್ಷ ಮತ್ತು ಪ್ರಧಾನಿ ಪ್ರಯತ್ನಿಸುತ್ತಿದ್ದಾರೆ. ಚುನಾವಣೆ ಆಯೋಗ ಇಂಥ ಒತ್ತಡಗಳಿಗೆ ಬಲಿ ಬೀಳಬಾರದು. ಚುನಾವಣೆ ಆಯೋಗ ದೃಢವಾಗಿ ಮಧ್ಯಪ್ರವೇಶಿಸಿ, ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸುವ ಹಾಗೂ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವ ವಾತಾವರಣವನ್ನು ಕೆಡಿಸುವ ಯಾವುದೇ ಪ್ರಯತ್ನಗಳನ್ನು ವಿಫಲಗೊಳಿಸಬೇಕು.

ಅನು: ವಿಶ್ವ

ಇಲ್ಲಿಯೂ ಅದು ಮೊದಲ ಸ್ಥಾನದಲ್ಲಿದೆ. 2017ರಲ್ಲಿ ಪೋಕ್ಸೋ–(ಅಪ್ರಾಪ್ತರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳು) ಅಡಿಯಲ್ಲಿ 32,608 ಪ್ರಕರಣಗಳು ದಾಖಲಾಗಿದ್ದರೆ, 2022ರಲ್ಲಿ ಶೇ.94 ಏರಿಕೆಯಾಗಿ, ಅದು 63,414 ಆಗಿದೆ. ಭಾರತದಲ್ಲಿ ಈಗಲೂ ಶಿಕ್ಷೆಯ ಪ್ರಮಾಣ ತೀರಾ ಕಡಿಮೆ ಇದ್ದು ಶೇ.23–25 ಇದೆ.

ತಮ್ಮ ಪಕ್ಷದವರಾದರೆ ಮಹಿಳೆಯರ ವಿರುದ್ಧ ದೌರ್ಜನ್ಯ, ಹಿಂಸಾಚಾರ ಮತ್ತಿತರ ಅಪರಾಧಗಳನ್ನು ಮಾಡಿದರೂ, ಅವರನ್ನು ರಕ್ಷಣೆ ಮಾಡಲು ಬಿಜೆಪಿ ಏನು ಬೇಕಾದರೂ ಮಾಡುತ್ತದೆ. ಉತ್ತರಪ್ರದೇಶದಲ್ಲಿ ಅಪ್ರಾಪ್ತೆಯ ಮೇಲೆ ಅತ್ಯಾಚಾರ ಮಾಡಿ, ಆಕೆಯ ತಂದೆಯನ್ನು ಕೊಲೆ ಮಾಡಿದ ಶಾಸಕ ಕುಲ್ದೀಪ್ ಸೇಂಗರ್ ನನ್ನು ರಕ್ಷಣೆ ಮಾಡಲು ತನ್ನ ಕೈಲಾದುದನ್ನೆಲ್ಲ ಮಾಡಿತ್ತು.

ಬಿಜೆಪಿಯ ಸಂಸದ ಬ್ರಿಜ್ ಭೂಷಣ್ ಸಿಂಗ್ ಕುಸ್ತಿ ಫೆಡರೇಷನ್ ನಲ್ಲಿ ತನಗಿರುವ ಅಧಿಕಾರ ದುರ್ಬಳಕೆ ಮಾಡಿಕೊಂಡು, ಬಂಗಾರದ ಪದಕ ವಿಜೇತ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ವಿರುದ್ಧ ದೊಡ್ಡ ಹೋರಾಟವೇ ನಡೆದರೂ ಬಿಜೆಪಿ ಆತನ ರಕ್ಷಣೆಗೆ ನಿಂತಿತ್ತು.

ಪ್ರಧಾನ ಮಂತ್ರಿಗಳ ಕ್ಷೇತ್ರ ವಾರಣಾಸಿಯಲ್ಲಿ ಐ.ಐ.ಟಿ./ಬಿ.ಎಚ್.ಯು ನಲ್ಲಿ ವಿದ್ಯಾರ್ಥಿನಿಯ ಮೇಲೆ ಮೂರು ಜನ ಬಿಜೆಪಿ ಕಾರ್ಯಕರ್ತರು ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಘಟನೆ ನಡೆದ ಕೆಲವೇ ಘಂಟೆಗಳಲ್ಲಿ ಆರೋಪಿಗಳು ಯಾರೆಂದು ತಿಳಿದರೂ ಎರಡು ತಿಂಗಳುಗಳ ಕಾಲ ಅವರನ್ನು ಬಂಧಿಸಿರಲಿಲ್ಲ.

ಹರ್ಯಾಣದಲ್ಲಿ ಬಿಜೆಪಿ ಸರ್ಕಾರದ ಮಂತ್ರಿಯಾಗಿದ್ದ ಸಂದೀಪ್ ಸಿಂಗ್ ರವರ ಮೇಲೆ ಸರ್ಕಾರಿ ಕೋಚ್ ರವರಿಂದಲೇ ಲೈಂಗಿಕ ಕಿರುಕುಳದ ದೂರು ದಾಖಲಾದರೂ ಅವರ ಮೇಲೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಮುಖ್ಯಮಂತ್ರಿ ಕಟ್ಟರ್ ರಾಜಿನಾಮೆ ಕೊಡುವವರೆಗೂ ಇವರೂ ಸಚಿವರಾಗಿಯೇ ಮುಂದುವರೆದಿದ್ದರು.

ಹತ್ರಾಸ್ ನಂತಹ ಭೀಕರ ಘಟನೆಯಲ್ಲಿಯೂ ಅಪರಾಧಿಗಳಿಗೆ ರಕ್ಷಣೆ ಸಿಕ್ಕಿದೆ. ಬಿಜೆಪಿ ಸರ್ಕಾರದಲ್ಲಿ, ಉತ್ತರ ಪ್ರದೇಶದ ಹತ್ರಾಸ್ ನಲ್ಲಿ ದಲಿತ ಯುವತಿಯ ಮೇಲೆ ನಾಲ್ಕು ಜನರು ಸಾಮೂಹಿಕ ಅತ್ಯಾಚಾರ ಮಾಡಿದ್ದರು. ಅವರೆಲ್ಲರೂ ಅಲ್ಲಿಯ ಮುಖ್ಯಮಂತ್ರಿಗಳ ಜಾತಿಯಾದ ಕ್ಷತ್ರಿಯ ಜಾತಿಗೆ ಸೇರಿದವರು. ಯುವತಿಯ ಸಾವಿನ ನಂತರ ಕುಟುಂಬದವರಿಗೆ ಶವ ದಹನಕ್ಕೂ ಅವಕಾಶ ಕೊಡದೇ ಜಿಲ್ಲಾಡಳಿತವೇ ಮಧ್ಯರಾತ್ರಿಯಲ್ಲಿ ಮಾಡಿತ್ತು. ನಂತರ ಜಿಲ್ಲಾ ನ್ಯಾಯಾಲಯವೂ ಸಂತ್ರಸ್ಥಳ ವಿರುದ್ಧವಾಗಿಯೇ ತೀರ್ಪುಕೊಟ್ಟ ನಂತರ ಅವರ ಕುಟುಂಬದವರು ತೀವ್ರ ಭಯದಲ್ಲಿಯೇ ಬದುಕುತ್ತಿದ್ದಾರೆ.

ಮಣಿಪುರದಲ್ಲಿ ಆದಿವಾಸಿ ಮತ್ತು ಕ್ರಿಶ್ಚಿಯನ್ ಸಮುದಾಯದ ಮಹಿಳೆಯರನ್ನು ಪೊಲೀಸರೇ ದಂಗೆ ಎದ್ದ ಗುಂಪಿನ ವಶಕ್ಕೆ ಒಪ್ಪಿಸಿದ್ದರು. ಗುಂಪು ಅವರನ್ನು ಬೆತ್ತಲೆ ಮಾಡಿ, ಅತ್ಯಂತ ಹೇಯವಾಗಿ ವರ್ತಿಸಿ ಲೈಂಗಿಕ ಕಿರುಕುಳ ನೀಡುತ್ತಲೇ ಸಾರ್ವಜನಿಕವಾಗಿ ಮೆರವಣಿಗೆ ಮಾಡಿದ್ದರು. ಮೂರು ತಿಂಗಳಾದರೂ ಪ್ರಧಾನ ಮಂತ್ರಿಗಳು, ರಾಜ್ಯದ ಮುಖ್ಯಮಂತ್ರಿಗಳು ಬಾಯಿ ಬಿಟ್ಟಿರಲಿಲ್ಲ.

ಬಿಲ್ಕಿಸ್ ಬಾನು ಪ್ರಕರಣದಲ್ಲಿ ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆಯನ್ನೂ ಮಾಡಿ, ಅಪರಾಧಿಗಳೆಂದು ಸಾಬೀತಾಗಿ ಶಿಕ್ಷೆ ಅನುಭವಿಸುತ್ತಿದ್ದವರನ್ನು ಗುಜರಾತ್ ಸರ್ಕಾರ ಸನ್ನಡತೆಯ ಹೆಸರಿನಲ್ಲಿ ಬಿಡುಗಡೆ ಮಾಡಿತ್ತು. ಅವರ ಬಿಡುಗಡೆಯನ್ನು ಸುಪ್ರೀಂ ಕೋರ್ಟ್ ನಲ್ಲಿ ಪ್ರಶ್ನೆ ಮಾಡಿದಾಗ ಗುಜರಾತ್ ಮತ್ತು ಕೇಂದ್ರ ಸರ್ಕಾರಗಳು ಅವರನ್ನು ರಕ್ಷಿಸಲು ತಮ್ಮ ಕೈಯಿಂದಾದ ಎಲ್ಲ ಪ್ರಯತ್ನ ಮಾಡಿದ್ದರು.

ಭಾರತದ ಮಹಿಳೆಯರು ಅತ್ಯಂತ ಅಸುರಕ್ಷತೆ, ದಾಳಿ, ದಬ್ಬಾಳಿಕೆ, ಹಿಂಸೆಗಳ ಬಲಿಪಶುಗಳಾಗಿದ್ದಾರೆ ಮತ್ತು ಅತ್ಯಂತ ನ್ಯಾಯ ವಂಚಿತರಾಗಿದ್ದಾರೆ

ಮಹಿಳೆಯರ ಸುರಕ್ಷತೆ ಮತ್ತು ಉತ್ತಮ ಬದುಕಿಗಾಗಿ! ಬಿ.ಜೆ.ಪಿ.ಯನ್ನು ಸೋಲಿಸಿ!

18ನೇ ಲೋಕಸಭಾ ಚುನಾವಣೆಯಲ್ಲಿ ದೇಶದ ಜನತೆ ಏನು ಮಾಡಬೇಕು?, ನಮ್ಮ ಮುಂದಿನ ಒಕ್ಕೂಟ ಸರ್ಕಾರದ ಕಾರ್ಯಭಾರವೇನಿರಬೇಕು? ಎಂಬುದನ್ನು ಆಲೋಚಿಸಿ ಮತ ಚಲಾಯಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಈ ಕೆಲವು ಪ್ರಮುಖ ವಿಷಯಗಳನ್ನು ಹಂಚಿಕೊಳ್ಳುತ್ತಿದೆ.

18 ನೇ ಲೋಕಸಭಾ ಚುನಾವಣೆ
ಜನತೆ ಮಾಡಬೇಕಾದುದೇನು?

ಯು.ಬಸವರಾಜ
ರಾಜ್ಯ ಕಾರ್ಯದರ್ಶಿ, ಸಿಪಿಐ(ಎಂ)

ಕಳೆದ 10 ವರ್ಷ ಅಧಿಕಾರ ನಡೆಸಲು ದೇಶದ ಜನತೆ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳಿಗೆ ಅನುವು ಮಾಡಿದರು. ಮಾತ್ರವಲ್ಲ, ಈ ಅವಧಿಯಲ್ಲಿ ಸರ್ಕಾರಕ್ಕೆ ಸುಮಾರು 200 ಲಕ್ಷ ಕೋಟಿ ರೂ.ಗಳಿಗೂ ಅಧಿಕ ತೆರಿಗೆಯನ್ನು ನಾವೆಲ್ಲಾ ನೀಡಿದೆವು. ಇದಲ್ಲದೇ, ಸು.105 ಲಕ್ಷ ಕೋಟಿ ರೂ.ಗಳಷ್ಟು ಸಾಲದ ಭಾರವನ್ನು ಮೋದಿಯವರ ಆಡಳಿತದಲ್ಲಿ ಹೊತ್ತೆವು. ದೇಶದ ಬಜೆಟ್‌ನಲ್ಲಿ ಶೇ.20 ರಷ್ಟು ಸಾಲದ ಕಂತು ಹಾಗೂ ಬಡ್ಡಿಗಾಗಿಯೇ ಮೀಸಲಿಡಲಾಗುತ್ತಿದೆ. ಆದರೂ, ಬಿಜೆಪಿಯು ದೇಶಕ್ಕೆ ನೀಡಿದ ವಾಗ್ದಾನ ಈಡೇರಿಸುವಂತಹ ಆಡಳಿತ ನಡೆಸಿದೆಯಾ? ಹಣ, ಉಡುಗೊರೆ, ಹೆಂಡದ ಅಮಿಷಗಳು ಮತ್ತು ಜಾತಿ–ಧರ್ಮದ ಭಾವನೆಗಳಿಗೆ ಬಲಿಯಾಗದೆ ಯೋಚಿಸಬೇಕಿದೆ.

ಕಪ್ಪುಹಣವೆಲ್ಲಿ? 15 ಲಕ್ಷ ರೂ. ಎಲ್ಲಿ?

ಬಿಜೆಪಿಯು ತನಗೆ ಅಧಿಕಾರ ನೀಡಿದರೆ ದೇಶಕ್ಕೆ ಶುಭ ದಿನಗಳನ್ನೂ ತರುವುದಾಗಿ, ಶ್ರೀಮಂತರು ಸರಕಾರಕ್ಕೆ ಆದಾಯ ತೆರಿಗೆ ನೀಡದೆ ಹೊಂದಿರುವ ಸು. 45 ಲಕ್ಷ ಕೋಟಿ ರೂ.ಗಳಷ್ಟಿರುವ ಕಪ್ಪು ಹಣವನ್ನು ಹೊರಗೆಳೆದು ಎಲ್ಲಾ ಬಡವರ ಖಾತೆಗೆ ತಲಾ 15 ಲಕ್ಷ ರೂ. ಹಾಕುವುದಾಗಿ ಭರವಸೆ ನೀಡಿತ್ತು! ಎಲ್ಲರ ಖಾತೆಗೆ ಅದು ಬಂದಿದೆಯಾ? ಹೋಗಲಿ, ದೇಶವನ್ನು ವಂಚಿಸಿ ವಿದೇಶಿ ಬ್ಯಾಂಕುಗಳಲ್ಲಿ ಬಚ್ಚಿಟ್ಟ ಕಪ್ಪು ಹಣವನ್ನೇನಾದರೂ ದೇಶಕ್ಕೆ ತಂದರಾ? ಅದೂ ಇಲ್ಲಾ! ಕಪ್ಪುಹಣ ಹೊರಗೆಳೆಯದೆ ಕಪ್ಪುಹಣದ ಖದೀಮರ ಜೊತೆ ಕೈಜೋಡಿಸಿದೆ.

ರೈತರ ಆದಾಯ ದ್ವಿಗುಣವಾಯಿತೇ?

ಅವರು ಮತ್ತೂ ಹೇಳಿದ್ದರು! ರೈತರ ಆದಾಯ ದ್ವಿಗುಣಗೊಳಿಸುವುದಾಗಿ. ಅದಕ್ಕಾಗಿ, ರೈತರು ಬೆಳೆದ ಬೆಳೆಗೆ ಡಾ॥ ಎಂ.ಎಸ್. ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಉತ್ಪಾದನಾ ವೆಚ್ಚಕ್ಕೆ ಶೇ. 50 ಲಾಭಾಂಶ ಸೇರಿಸಿ ಕನಿಷ್ಟ ಬೆಂಬಲ ಬೆಲೆ ನೀಡಲಾಗುವುದು! ಮಾತ್ರವಲ್ಲಾ, ರೈತರ ಸಾಲ ಮನ್ನಾ ಮಾಡಲಾಗುವುದು ಹಾಗೂ ಅವರ ಆತ್ಯಹತ್ಯೆಗಳನ್ನು ತಡೆಯಲಾಗುವುದು ಎಂದು! ಇದನ್ನಾದರೂ ಈಡೆರಿಸಿದ್ದಾರಾ?!.

ಮೋದಿಯವರ ಈ 10 ವರ್ಷಗಳ ಆಡಳಿತ ಅವಧಿಯಲ್ಲಿ 1 ಲಕ್ಷ 475 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂದರೆ ಪ್ರತಿ ದಿನ 35 ಜನ ರೈತರು!! ಆದಾಯ ದ್ವಿಗುಣವಾಗಿದ್ದರೆ ರೈತರೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಸುಪ್ರೀಂ ಕೋರ್ಟ್ ಮುಂದೆ ಪ್ರಮಾಣ ಪತ್ರ ಸಲ್ಲಿಸಿ, ಡಾ॥ ಸ್ವಾಮಿನಾಥನ್ ಸಲಹೆಯಂತೆ ಬೆಂಬಲ ಬೆಲೆ ನೀಡಲಾಗದೆಂದು, ರೈತರ ಸಾಲ ಮನ್ನಾ ಮಾಡಲು ಹಣವಿಲ್ಲ ಎಂದಿತು ಸರಕಾರ. ಇದಲ್ಲದೇ, ಸುಗ್ಗಿಯ ಸಂದರ್ಭದಲ್ಲಿ ಕೃತಕವಾಗಿ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿಯುವಂತೆ ಮಾಡಿ ದೇಶದ ಬಹುದೊಡ್ಡ ಸಂಖ್ಯೆಯ ಶ್ರಮವನ್ನು ಲೂಟಿ ಮಾಡುವ ಕಾರ್ಪೋರೇಟ್ ಸಂಸ್ಥೆಗಳ ಜೊತೆ ನಿಂತರು.

2022 ರಲ್ಲಿ ಕರ್ನಾಟಕದ ಸುಮಾರು 50 ಲಕ್ಷಕ್ಕೂ ಅಧಿಕ ರೈತರಿಂದ, ಸುಗ್ಗಿಯ ಸಂದರ್ಭದಲ್ಲಿ ಅವೈಜ್ಞಾನಿಕವಾಗಿ ನಿಗದಿಸಿದ ಬೆಂಬಲ ಬೆಲೆಗಿಂತಲೂ ಕೆಳಕ್ಕೆ ಕುಸಿದ ದರಗಳಿಗೆ ಭತ್ತ, ಜೋಳ, ರಾಗಿ, ತೊಗರಿ, ಮುಂತಾದ ರಾಜ್ಯದ ಪ್ರಮುಖ 8 ಕೃಷಿ ಉತ್ಪನ್ನಗಳಿಂದ ಸುಮಾರು 15 ಸಾವಿರ ಕೋಟಿ ರೂ.ಗೂ ಅಧಿಕ ಮೊತ್ತ ಲೂಟಿ ಮಾಡಲು ಬಿಟ್ಟರು.

ಈ ಲೋಕಸಭಾ ಚುನಾವಣೆಯಲ್ಲಿ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಮತ್ತು ಹಿಂದುತ್ವ ಕೋಮುವಾದಿ ಸರ್ವಾಧಿಕಾರದ ಕಡೆ ದೇಶವನ್ನು ತಳ್ಳುವ ಸಂಚನ್ನು ಸೋಲಿಸಲು ಬಿಜೆಪಿ ಹಾಗೂ ಅದರ ಮಿತ್ರ ಪಕ್ಷ ಜೆಡಿ(ಎಸ್) ಅನ್ನು ನಿರ್ಣಾಯಕವಾಗಿ ಸೋಲಿಸಲು ಮತ ಚಲಾಯಿಸುವಂತೆ ಜನತೆಯನ್ನು ಅಣಿನೆರೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

2 ಕೋಟಿ ಉದ್ಯೋಗವೆಲ್ಲಿ?

ಪ್ರತಿ ವರ್ಷ ವಿದ್ಯಾವಂತ ಯುವಜನರಿಗೆ 2 ಕೋಟಿ ಉದ್ಯೋಗ ನೀಡುವುದಾಗಿ ಹೇಳಿದ್ದರು! ಆದರೆ ಪ್ರತಿ ವರ್ಷ 80 ಲಕ್ಷ ವಿದ್ಯಾವಂತರು ಶಿಕ್ಷಣ ಮುಗಿಸಿ, ನಿರುದ್ಯೋಗಿಗಳಾಗಿ ಹೊರಬರುತ್ತಿದ್ದಾರೆ! ನಿರುದ್ಯೋಗ ಬೆಳೆಯುತ್ತಿದೆ! ಹೋಗಲಿ, ಈ ವಿದ್ಯಾವಂತ ಯುವಜನರಿಗೆ ನಿರುದ್ಯೋಗ ಭತ್ಯೆ ಏನಾದರೂ ಕೊಟ್ಟಿದ್ದಾರಾ? ಇಲ್ಲ.

ಕೋವಿಡ್ ಬಿಕ್ಕಟ್ಟಿನ ಮೂರು ವರ್ಷಗಳಲ್ಲಿ ಕೋಟ್ಯಾಂತರ ಉದ್ಯೋಗಿಗಳು ಉದ್ಯೋಗ ಕಳೆದುಕೊಂಡು ವಾಪಾಸು ತಮ್ಮ ಮನೆಗಳನ್ನು, ಹಳ್ಳಿಗಳನ್ನು ಸೇರಿಕೊಂಡರು. ಅವರಿಗೇನಾದರೂ ನಿರುದ್ಯೋಗ ಭತ್ಯೆ ನೀಡಿದರಾ? ಇಲ್ಲಾ! ಬದಲಿಗೆ ಖಾಲಿ ಇರುವ ಹುದ್ದೆಗಳನ್ನು ರದ್ದು ಮಾಡಿದರು. ಇಲ್ಲವೆ ಖಾಲಿ ಇಟ್ಟರು.! ಮಾತ್ರವಲ್ಲಾ, ಪರ್ಮನೆಂಟ್ ಹುದ್ದೆಗಳ ಬದಲಿಗೆ ಹೊರ ಗುತ್ತಿಗೆ, ಒಳಗುತ್ತಿಗೆ, ನಿಶ್ಚಿತ ಅವಧಿಯ ಕೆಲಸಗಾರರೆಂದು ಕನಿಷ್ಠ ವೇತನವಿಲ್ಲದ ನಿಕೃಷ್ಠ ವೇತನಕ್ಕೆ ದುಡಿಸಿಕೊಂಡರು. ಮಾತ್ರವಲ್ಲಾ! ಖಾಸಗಿ ಕಂಪನಿಗಳು ಇದೇ ರೀತಿ ನಿರುದ್ಯೋಗಿಗಳ ಶ್ರಮ ಹೀರಲು ಅನುವು ಮಾಡಿದರು.!

ನಾನು ತಿನ್ನೋದಿಲ್ಲ ಮತ್ತು ತಿನ್ನೋದಕ್ಕೆ ಬಿಡೋದಿಲ್ಲ.

ಪ್ರಧಾನಿ ಮೋದಿಯವರು, ನಾನು ತಿನ್ನೋದಿಲ್ಲ! ತಿನ್ನೋದಕ್ಕೂ ಬಿಡೋದಿಲ್ಲ!! ಎಂದು ಘೋಷಿಸಿದ್ದರು. ಈಗ ಚುನಾವಣಾ ಬಾಂಡ್ ಹಗರಣಗಳು ಬಯಲುಗೊಂಡಿವೆ. ಅವರ ನಡೆ ಅವರ ಹೇಳಿಕೆಗೆ ತದ್ವಿರುದ್ದವಾಗಿದೆ. ಕಾಯ್ದೆಗೆ ತಿದ್ದುಪಡಿ ತಂದು ಚುನಾವಣಾ ಬಾಂಡ್ ಪಡೆಯುವ ಪ್ರಸ್ತಾಪ ಸಂಸತ್‌ನಲ್ಲಿ ಬಂದಾಗಲೆ ಸಿಪಿಐ(ಎಂ) ಇದು ಭ್ರಷ್ಠಾಚಾರವನ್ನು ಕಾನೂನು ಬದ್ದವಾಗಿಸಲಿದೆ, ಸಂವಿಧಾನಕ್ಕೆ ವಿರುದ್ದವಾದ ವಿಚಾರವೆಂದು ಹೇಳಿತ್ತು. ಮಾತ್ರವಲ್ಲಾ! ತಾನು ಚುನಾವಣಾ ಬಾಂಡ್ ಪಡೆಯುವುದಿಲ್ಲವೆಂದು ಘೋಷಿಸಿತ್ತು. ಅದನ್ನು ಸುಪ್ರಿಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಇದೀಗ ಸುಪ್ರಿಂ ಕೋರ್ಟ್ ಚುನಾವಣಾ ಬಾಂಡ್ ಪಡೆಯುವ ವಿಚಾರ ಅಸಂವಿಧಾನಿಕವೆಂದು ಘೋಷಿಸಿದೆ. ಸುಮಾರು 16,000 ಕೋಟಿ ರೂ.ಗಳ ಬಾಂಡ್‌ಗಳಲ್ಲಿ ಸು. ಅರ್ಧದಷ್ಟು ಬಿಜೆಪಿ ಪಡೆದಿದೆ. ಇದೀಗ ಯಾರಿಂದ ಎಷ್ಟು ಯಾವ ಯಾವ ಸಂದರ್ಭಗಳಲ್ಲಿ ಚುನಾವಣಾ ಬಾಂಡ್ ಪಡೆಯಲಾಗಿದೆ ಎಂಬುದು ಮಾದ್ಯಮಗಳಲ್ಲಿ ಪ್ರತಿನಿತ್ಯ ಬಯಲಾಗುತ್ತಿದೆ. ಇದರಲ್ಲಿ ಅಧಿಕಾರ ದುರುಪಯೋಗ, ಅಮಿಷ, ಈಡಿ, ಐಟಿ, ಸಿಬಿಐಗಳಂತಹ ಸ್ವಾಯತ್ತ ಸಂಸ್ಥೆಗಳ ದುರ್ಬಳಕೆ ಎಲ್ಲವೂ ಬೆಳಕಿಗೆ ಬಂದಿವೆ. ಸುಪ್ರಿಂ ಕೋರ್ಟ್ ಸುಪರ್ಧಿಯಲ್ಲಿ ನ್ಯಾಯಾಂಗ ತನಿಖೆ ಮಾತ್ರವೆ ಈ ಬ್ರಹ್ಮಾಂಡ ಭ್ರಷ್ಠಾಚಾರವನ್ನು ಬಯಲಿಗಿಡಲಿದೆ.



ಕೋವಿಡ್ ಹೋಯ್ತಾ?
ಜನಗಳ ಪ್ರಾಣ ಹೋಯ್ತಾ?

ಕೋವಿಡ್ ಬಿಕ್ಕಟ್ಟಿನ ಕಾಲದಲ್ಲಿ ಜನತೆ ಭಯ ಭೀತರಾಗಿರುವಾಗ, ಮೋದಿಯವರು ದೀಪ ಹಚ್ಚಿ! ತಟ್ಟೆ ಬಾರಿಸಿ!! ಎಂದು ಕರೆ ಕೊಟ್ಟರು. ಕೋವಿಡ್ ಹೊಯಿತಾ? ಅಥವಾ ಜಗತ್ತಿನ ಮುಂದೆ ದೇಶದ ಮಾನ ಹೋಯಿತಾ? ದೇಶದಲ್ಲಿ ಅಧಿಕೃತವಾಗಿ 5.33 ಲಕ್ಷ ಜನ (ವಿಶ್ವ ಆರೋಗ್ಯ ಸಂಸ್ಥೆಯ ವರದಿಯಂತೆ 45 ಲಕ್ಷ ಜನ) ಪ್ರಾಣ ಕಳೆದುಕೊಂಡರು. ವ್ಯಾಕ್ಸಿನ್ ಅನ್ನು ಜನರು ಖರೀದಿಸಬೇಕು ಅಥವಾ ರಾಜ್ಯ ಸರಕಾರಗಳು ಖರೀದಿಸಿ ಜನರಿಗೆ ನೀಡಬೇಕು ಎಂದಿತು ಸರಕಾರ. ಸುಪ್ರೀಂ ಕೋರ್ಟ್ ತರಾಟೆ ತೆಗೆದುಕೊಂಡ ಮೇಲಷ್ಟೆ ಉಚಿತವಾಗಿ ವ್ಯಾಕ್ಸಿನ್ ನೀಡಲು ಆರಂಭಿಸಲಾಯಿತು. ಆಗಲೂ ಲೂಟಿಕೋರ ಔಷಧಿ ಕಂಪನಿಗಳು ಸಂಕಷ್ಠದಲ್ಲಿರುವ ಜನತೆಯನ್ನು ಲೂಟಿ ಮಾಡಲು ಬೆಂಬಲಿಸಿದರು.

ಶ್ರೀಮಂತರು ಭಾರೀ ಶ್ರೀಮಂತರಾದರೆ ಬಡವರು ಕಡು ಬಡವರಾಗಿದ್ದಾರೆ

ಮೋದಿಯವರ ಆಡಳಿತ ಮಾಡಿದ್ದಿಷ್ಟೇ? ಬಡವರನ್ನೂ ಅತ್ಯಂತ ಕಡು ಬಡವರನ್ನಾಗಿಸಿದ್ದು! ಶ್ರೀಮಂತರನ್ನೂ ಭಾರೀ ಶ್ರೀಮಂತರನ್ನಾಗಿಸಿದ್ದು. ದೇಶದ ಭಾರೀ ಶ್ರೀಮಂತರಾದ ಅಂಬಾನಿ ಹಾಗೂ ಅದಾನಿ ಕುಟುಂಬಗಳು ಈಗ ಜಗತ್ತಿನ 20 ಶ್ರೀಮಂತ ಕುಟುಂಬಗಳಲ್ಲಿ ಸ್ಥಾನ ಪಡೆದಿವೆ! 60–70 ಸಾವಿರ ಕೋಟಿ ಆಸ್ತಿ ಹೊಂದಿದ್ದವರು ಇದೀಗ ದಶಲಕ್ಷಾಂತರ ಕೋಟಿ ಆಸ್ತಿ ಗಳಿಸಿದ್ದಾರೆ! ದೇಶದ ಸಂಪತ್ತಿನ ಶೇ.55 ಕ್ಕಿಂತಲು ಅಧಿಕ ಸಂಪತ್ತು ಶೇ.1 ರಷ್ಠಿರುವ ಶ್ರೀಮಂತರ ಕೈನಲ್ಲಿದೆ. ಅದೇ ಶೇ.50 ಬಡ ಜನರ ಕೈನಲ್ಲಿ ಕೇವಲ ಶೇ.3 ರಷ್ಟು ಸಂಪತ್ತು ಮಾತ್ರವೆ ಇದೆ.

ಶ್ರೀಮಂತರು ಭಾರೀ ಶ್ರೀಮಂತರಾದುದು ಹೇಗೆ?

ದೇಶಕ್ಕೆ ಅನ್ನವನ್ನು ಮತ್ತು ಕೈಗಾರಿಕೆಗಳಿಗೆ ಕಚ್ಚಾ ಮಾಲು ಒದಗಿಸುವ ರೈತ ತನ್ನ ಕೃಷಿ ಉತ್ಪನ್ನಗಳಿಗೆ ಬೆಲೆ ದೊರೆಯದೇ ನಷ್ಠಕ್ಕೀಡಾಗಿ, ಉತ್ಪಾದನೆ ಮುಂದುವರೆಸಲು ಸಾಲಕ್ಕಾಗಿ ಅಂಗಲಾಚುತ್ತಿದ್ದಾನೆ. ಆತನ ಸಾಲ ತೀರಿಸಲಾಗದೆ ಹನುಮಂತನ ಬಾಲದಂತೆ ಬೆಳೆಯುತ್ತಲೆ ಇದೆ. ಬ್ಯಾಂಕುಗಳು, ಸಹಕಾರಿ ಸಂಘಗಳ ಸಾಲ ಮುಗಿದು, ಖಾಸಗೀ ಸಾಲವೂ ಬೆಳೆದು ಕುಟುಂಬದ ಮಹಿಳೆಯರು ಸ್ತ್ರೀ ಶಕ್ತಿ ಸಂಘಗಳ ಮೂಲಕ ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಸಾಲ ಎತ್ತಿ ತೀರಿಸಲಾಗದೆ ಮಾನಕಳೆದು ಕೊಳ್ಳುತ್ತಿದ್ದರೂ ಒಕ್ಕೂಟ ಸರಕಾರ ರೈತರ, ಕೂಲಿಕಾರರ, ದಲಿತರ, ಮಹಿಳೆಯರ ಈ ಸಾಲ ಮನ್ನಾ ಮಾಡಲಿಲ್ಲ.

ಕೋಟಿಗಳ ಸಂಖ್ಯೆಯಲ್ಲಿರುವ ಅಂಗನವಾಡಿ, ಬಿಸಿಯೂಟ, ಆಶಾ, ಸಂಜೀವಿನಿ ಮುಂತಾದ ಸ್ಕೀಂ ಕೆಲಸಗಾರರು, ಅತಿಥಿ ಹಾಗೂ ಗೌರವಧನದ ಶಿಕ್ಷಕರನ್ನು ಬಿಟ್ಟಿ ದುಡಿಸಿಕೊಳ್ಳುವ ಬದಲು ಕನಿಷ್ಠ ವೇತನ ನಿಗದಿಸಿರೆಂದರೆ ಸರಕಾರ ಹಣವಿಲ್ಲವೆನ್ನುತ್ತದೆ.

ದಲಿತರು, ಗ್ರಾಮೀಣ ಮಹಿಳೆಯರು ತಮ್ಮ ಸ್ವಾವಲಂಬಿ ಬದುಕಿಗಾಗಿ ತಲಾ ಐದು ಎಕರೆ ನೀರಾವರಿ ಜಮೀನಿಗಾಗಿ ಬಾಯ್ಬಿಡುತ್ತಿದ್ದರೆ, ಕೋಟ್ಯಾಂತರ ವಸತಿಹೀನರು ತುಂಡು ನಿವೇಶನದ ಕಡೆ ಆಶೆಗಣ್ಣಿಂದ ನೋಡುತ್ತಿದ್ದರೆ ಅವರಿಗೆಲ್ಲ ಭೂಮಿ ಲಭ್ಯವಿಲ್ಲವೆನ್ನಲಾಗುತ್ತಿದೆ.

ಆದರೆ ದೇಶದ 100 ಶ್ರೀಮಂತರ ಸು.17.5 ಲಕ್ಷ ಕೋಟಿ ರೂ. ಸಾಲ ಮನ್ನಾ ಮಾಡಲಾಗಿದೆ. ಸು.10 ಲಕ್ಷ ಕೋಟಿ ರೂ. ಗಳಷ್ಟು ಕಂಪನಿಗಳು ನೀಡಬೇಕಾದ ತೆರಿಗೆ ಬಾಕಿ ಕೈಬಿಡಲಾಗಿದೆ ಮತ್ತು ಕಡಿತ ಮಾಡಲಾಗಿದೆ. ಗೋದ್ರೇಜ್ ಹಾಗೂ ಪತಂಜಲಿ ಕಂಪನಿಗಳಿಗೆ ತಾಳೆ ಗಿಡ ಬೆಳೆಯಲು ಲಕ್ಷಾಂತರ ಎಕರೆ ಜಮೀನು ಉಚಿತವಾಗಿ ನೀಡಲಾಗಿದೆ.

ಅಗತ್ಯ ವಸ್ತುಗಳ ಬೆಲೆಗಳ ಮೇಲಿನ ಬೆಲೆ ನಿಯಂತ್ರಣ ತೆಗೆದು ಮನಸೋ ಇಚ್ಚೆ ಬೆಲೆ ಏರಿಕೆ ಮಾಡಲು ಮತ್ತು ಕಾಳಸಂತೆ ವ್ಯಾಪಾರಕ್ಕೆ ಅನುವು ಮಾಡಿಕೊಡಲಾಗಿದೆ. ಸಾರ್ವಜನಿಕ ಉದ್ಯಮಗಳಾದ ರೈಲ್ವೆ, ವಿಮಾನಯಾನ, ಬಂದರು, ಹೆದ್ದಾರಿ ನಿರ್ಮಾಣ, ಹಣಕಾಸು ಮುಂತಾದ ಸಂಸ್ಥೆಗಳ ಖಾಸಗೀಕರಣವು ಅವುಗಳ ನಿಜ ಮೌಲ್ಯಕ್ಕಿಂತ ಕಳಪೆ ಬೆಲೆಗೆ ಮಾರಾಟ ಮಾಡಿರುವುದು, ಶಿಕ್ಷಣ ಹಾಗೂ ಆರೋಗ್ಯದ ಖಾಸಗೀಕರಣ ಮುಂತಾದ ಎಲ್ಲವೂ ಶ್ರೀಮಂತರನ್ನು ಭಾರೀ ಶ್ರೀಮಂತರನ್ನಾಗಿಸಿದೆ.

ಬಡವರು ಕಡುಬಡವರಾದರು ಹೇಗೆ?

ಜನರು ಅಗತ್ಯ ವಸ್ತುಗಳ ಭಾರಿ ಬೆಲೆಏರಿಕೆಯಿಂದ

ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳು ರಾಜ್ಯದಲ್ಲಿ ದುರ್ಬಲವಾಗಿರುವಾಗ ಸರ್ವಾಧಿಕಾರದ ಕಡೆ ದೇಶ ಚಲಿಸದಂತೆ ತಡೆಯಲು ಕಾಂಗ್ರೆಸ್‌ಗೆ ಮತ ನೀಡುವುದು ಅನಿವಾರ್ಯ ಅಗತ್ಯವಾಗಿದೆ. ಸಿಪಿಐ(ಎಂ) ಪಕ್ಷ ಸ್ವತಂತ್ರವಾಗಿ ಪ್ರಚಾರ ಕೈಗೊಂಡು ಚುನಾವಣಾ ಹೋರಾಟ ನಡೆಸುತ್ತದೆ.

ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ! 2014 ರಲ್ಲಿ 450 ರೂ.ಗೆ ದೊರೆಯುತ್ತಿದ್ದ ಗ್ಯಾಸ್ ಸಿಲೆಂಡರ್ ದರ ಇದೀಗ 1200 ರೂ.ಗೆ ಹೆಚ್ಚಳಗೊಂಡು ಮರಳಿ 1000 ರೂ.ಗೆ ಇಳಿದಿದೆ! 60 ರೂ. ಇದ್ದ ಪೆಟ್ರೋಲ್, ಡೀಸೆಲ್ 100 ರ ಗಡಿ ದಾಟಿದೆ! ಬೀಜ, ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬೆಲೆಗಳು ಈ ಅವಧಿಯಲ್ಲಿ ಶೇ.70 ರಷ್ಟು ಹೆಚ್ಚಳಗೊಂಡಿವೆ. ಔಷಧಿಗಳ ಬೆಲೆಗಳು ಭಾರಿ ಏರಿಕೆ ಕಂಡಿವೆ! ಒಂದೆಡೆ ಅಗತ್ಯವಿರುವಷ್ಟು ಉದ್ಯೋಗವಿಲ್ಲ, ಇನ್ನೊಂದೆಡೆ ಕನಿಷ್ಠ ವೇತನ ವೆಂಬುದು ನಿಕೃಷ್ಟವಾಗಿದೆ. ಇಂತಹ ಎಲ್ಲವುಗಳು ಬಡವರನ್ನು ಕಡು ಬಡವರನ್ನಾಗಿಸುತ್ತಿವೆ.

ಕಾರ್ಪೋರೇಟ್ ಕೃಷಿ

ರೈತರಿಗೆ ನೀವು ವ್ಯವಸಾಯ ಮಾಡಬೇಡಿ, ನಿಮ್ಮ ಜಮೀನುಗಳನ್ನು ಮಾರಿಬಿಡಿ ಇಲ್ಲವೆ ಗುತ್ತಿಗೆಗೆ ಬಿಡಿ, ವ್ಯವಸಾಯವನ್ನೂ ದೊಡ್ಡ ದೊಡ್ಡ ಕಂಪನಿಗಳು ಮಾಡಲಿವೆ ಎಂದು ಕಾಯ್ದೆ ಮಾಡುತ್ತಿದ್ದಾರೆ! ರೈತರನ್ನು ಬಲವಂತವಾಗಿ ಒಕ್ಕಲೆಬ್ಬಿಸುತ್ತಿದ್ದಾರೆ! ಬಲವಂತವಾಗಿ ಭೂ ಸ್ವಾಧೀನ ಮಾಡುತ್ತಿದ್ದಾರೆ!

ಮಾಲೀಕರ ಪರ ಕಾರ್ಮಿಕ ಸಂಹಿತೆ

ಸ್ವಲ್ಪವಾದರೂ ಕಾರ್ಮಿಕರ ಪರವಾಗಿದ್ದ 29 ಕಾರ್ಮಿಕ ಕಾಯ್ದೆಗಳನ್ನೂ ಬದಲಾಯಿಸಿ ಮಾಲಿಕರ ಪರವಾದ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುತ್ತಿದ್ದಾರೆ! ಕಾರ್ಮಿಕರು ಸಂಘಟನೆ, ಚಳುವಳಿ ಮಾಡದಂತೆ, ಮಾಲಿಕರ ಜೊತೆ ಸಂಧಾನ ನಡೆಸಲು ಸಾಧ್ಯವಾಗದೆ ಮತ್ತು ಮಾಲೀಕರು ಕಾರ್ಮಿಕರನ್ನೂ ಗುಲಾಮರಂತೆ ನಡೆಸಿಕೊಳ್ಳಲು ಅನುಕೂಲವಾಗುವಂತೆ ಕಾಯ್ದೆ ತಂದಿದ್ದಾರೆ!

'ಗ್ರಾಮೀಣ ಉದ್ಯೋಗ ಖಾತ್ರಿ' ದುರ್ಬಲ

ಈ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದವರಿಗೆ ಉದ್ಯೋಗ ದೊರೆಯದಿದ್ದರೆ ನಿರುದ್ಯೋಗ ಭತ್ಯೆ ಪಡೆಯುವ ನೀತಿಯನ್ನು ಕಡಿತಗೊಳಿಸಿದ್ದಾರೆ. ಕೂಲಿಯನ್ನು ಹೆಚ್ಚಳ ಮಾಡುತ್ತಿಲ್ಲ. 100 ದಿನದ ಉದ್ಯೋಗ ಪೂರ್ಣವಾಗಿ ಕೊಡುತ್ತಿಲ್ಲ. ಕರ್ನಾಟಕದಲ್ಲಿ ಈಗಲೂ ಸರಾಸರಿ 45 ದಿನ ಮಾತ್ರವೇ ಕೂಲಿ ಕೆಲಸ! ಬಾಕಿ ವೇತನ ನೀಡದೆ, ಉದ್ಯೋಗ ನೀಡದೆ ಸತಾಯಿಸುವುದು ಮುಂದುವರೆದಿದೆ.

ಈ ಸಂಕಷ್ಟಗಳಿಂದ ಜನತೆ ಪಾರಾಗಲು ಹೋರಾಟದ ಹಾದಿ ಹಿಡಿದಿರುವುದನ್ನು ತಡೆಯಲು ಶ್ರೀಮಂತ ಜನ ಸಮುದಾಯಗಳು ಜಾತಿ ಹಾಗೂ ಧಾರ್ಮಿಕ ತಾರತಮ್ಯಕ್ಕೆ ಕುಮ್ಮಕ್ಕು ನೀಡಿ ಜನರ ನಡುವೆ ವಿಭಜನೆ ತರುವ ಕೆಲಸ ಮಾಡುತ್ತಿವೆ. ಮತಾಂಧರು, ಅವರ ಪರವಾದ ಸರಕಾರದ ಕುಮ್ಮಕ್ಕಿನಿಂದ ಹೋರಾಟ ನಿರತರನ್ನು, ನ್ಯಾಯ ಕೇಳುವವರನ್ನು, ಸೌಹಾರ್ದ ಬಯಸುವವರನ್ನು ದೇಶದ್ರೋಹಿಗಳೆಂದು, ನಕ್ಸಲರೆಂದು, ಪಾಕಿಸ್ಥಾನಿಯರು, ಖಾಲಿಸ್ಥಾನಿಗಳೆಂದು ಜರೆಯಲಾಗುತ್ತಿದೆ. ಅಂತಹ ಕೆಲ ಚಿಂತಕರನ್ನು ಕೊಲ್ಲಲಾಗಿದೆ. ಹಲವರಿಗೆ ಜೀವ ಬೆದರಿಕೆ ಒಡ್ಡಲಾಗುತ್ತಿದೆ. ಜೈಲಿಗೆ ತಳ್ಳಲಾಗಿದೆ.

ಇವುಗಳ ಜೊತೆ ಬಡವ ಕಡು ಬಡವನಾಗುವುದು ಶ್ರೀಮಂತ ಭಾರೀ ಶ್ರೀಮಂತನಾಗುವ ಕ್ರಿಯೆಯು ಬಡ ಮಹಿಳೆಯರು, ದಲಿತರು, ದುರ್ಬಲರು, ಅಲ್ಪ ಸಂಖ್ಯಾತರ ಮೇಲೆ ಶ್ರೀಮಂತರ, ಕೋಮುವಾದಿ ಹಾಗು ಜಾತಿವಾದಿಗಳ ದೌರ್ಜನ್ಯವನ್ನು ವ್ಯಾಪಕವಾಗಿ ಹೆಚ್ಚಿಸುತ್ತದೆ.

ದೇಶದಲ್ಲಿ ಈಗಲೂ ಪ್ರತಿ ನಿಮಿಷಕ್ಕೆ 9–10 ಜನರು ಹಸಿವಿನ ಸಾವುಗಳಿಗೆ ತುತ್ತಾಗುತ್ತಿದ್ದಾರೆ! ಜಾಗತಿಕ ಹಸಿವಿನ ಸೂಚ್ಯಾಂಕದಲ್ಲಿ 125 ರಾಷ್ಟ್ರಗಳ ಪೈಕಿ ಭಾರತ 111 ಸ್ಥಾನಕ್ಕೆ ಕುಸಿದಿದೆ. ಪ್ರತಿ 2 ನಿಮಿಷಕ್ಕೊಬ್ಬ ಮಹಿಳೆಯ ಮೇಲೆ ದೌರ್ಜನ್ಯ ನಡೆಯುತ್ತಿದೆ. ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ, ಅಮಾನವೀಯ ದೌರ್ಜನ್ಯ ನಡೆದು ಭಾರತ ಜಗತ್ತಿನ ನಾಗರಿಕರಿಂದ ಛೀಮಾರಿ ಹಾಕಿಸಿಕೊಂಡಿದೆ. ದಲಿತರ ಮೇಲೆ ಪ್ರತಿ 9 ನಿಮಿಷಕ್ಕೆ ಒಂದು ದೌರ್ಜನ್ಯ ನಡೆಯುತ್ತಿದೆ.

ವ್ಯಾಪಕಗೊಂಡ ಸಂವಿಧಾನದ ಮೇಲಿನ ದಾಳಿಗಳು

ದೇಶದ ಹಾಗೂ ಜಗತ್ತಿನ ಕಾರ್ಪೊರೇಟ್ ಕಂಪನಿಗಳು ದೇಶದ ಮೇಲೆ ತಮ್ಮ ಹಿಡಿತವನ್ನು ಹೆಚ್ಚಿಸಿಕೊಂಡು ದೇಶದ ಎಲ್ಲ ಸಾರ್ವಜನಿಕ ಸಂಪನ್ಮೂಲಗಳ ಯಥೇಚ್ಛ ಲೂಟಿಗೆ ಅನುಕೂಲವಾಗುವಂತೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿ ಸರ್ವಾಧಿಕಾರವನ್ನು ವ್ಯಾಪಕಗೊಳಿಸುವ ಸಂಚು ನಡೆಸಿವೆ. ಜನತೆಯನ್ನು ಒಡೆದಾಳಲು ಮುಖ್ಯವಾಗಿ ಹಿಂದುತ್ವವಾದಿ ಶಕ್ತಿಗಳ ಜೊತೆ ಕೈ ಜೋಡಿಸುತ್ತಿವೆ. ಹಿಂದುತ್ವವಾದಿಗಳು ಈ ಸಂದರ್ಭವನ್ನು ಬಳಸಿಕೊಂಡು ದೇಶವನ್ನು ಮನುವಾದಿ ದೇಶವನ್ನಾಗಿಸಲು ಸಂಚು ನಡೆಸಿವೆ. ಈ ಕಾರಣಗಳಿಂದ ಈ ದೇಶದ ಸಂವಿಧಾನದ 4 ಆಧಾರಸ್ತಂಭಗಳಾದ ಜಾತ್ಯಾತೀತ ಪ್ರಜಾಪ್ರಭುತ್ವ, ಆರ್ಥಿಕ ಸೌರ್ವಭೌಮತೆ, ಒಕ್ಕೂಟವಾದ, ಸಾಮಾಜಿಕ ನ್ಯಾಯ ಇವುಗಳ ಮೇಲೆ ಗಂಭೀರ ಧಾಳಿಯನ್ನು ನಡೆಸಲಾಗುತ್ತಿದೆ!

ಧರ್ಮ ನಿರಪೇಕ್ಷತೆ

ಸಂವಿಧಾನವು ಬಹಳ ಸ್ಪಷ್ಟವಾಗಿ ಪ್ರಭುತ್ವ ಮತ್ತು ರಾಜಕೀಯದಿಂದ ಧರ್ಮವನ್ನು ದೂರವಿಡಬೇಕೆಂದು ಧರ್ಮ ನಿರಪೇಕ್ಷ ತತ್ವವನ್ನೂ ಸಾರುತ್ತಿದ್ದರೂ. ಬಿಜೆಪಿಯ ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು ರಾಮಮಂದಿರ ಪೂರ್ಣಗೊಳ್ಳುವ ಮುಂಚೆಯೇ ಜನರ ಭಾವನಾತ್ಮಕತೆಯನ್ನು ಚುನಾವಣೆಗಾಗಿ ಬಳಸಿಕೊಳ್ಳಲು ಅದರ ಉದ್ಘಾಟನೆಯಲ್ಲಿ ತೊಡಗುತ್ತಾರೆ.!!

ಹೊಸ ಪಾರ್ಲಿಮೆಂಟ್ ಭವನವನ್ನು ಹೋಮ, ಹವನಗಳ ಮೂಲಕ ಉದ್ಘಾಟನೆ ಮಾಡಲಾಗುತ್ತದೆ. ಜನತೆಯ ಬದುಕುವ ಹಾಗೂ ಆಹಾರದ ಮತ್ತು ಉದ್ಯೋಗದ ಹಕ್ಕಿನ ಮೇಲೆ ಧಾಳಿ ನಡೆಸುವ ಜಾನುವಾರು ಹತ್ಯೆ ನಿಷೇಧ ತಿದ್ದುಪಡಿ ಕಾಯ್ದೆ ರೂಪಿಸಿ, ಜಾರಿಗೆ ತರಲಾಗಿದೆ.

ಮಾಂಸ ಮಾರಾಟ, ಚರ್ಮೋದ್ಯಮ ಮುಂತಾದ ವೃತ್ತಿಯಲ್ಲಿ ತೊಡಗಿರುವ ಮುಸ್ಲಿಮರು, ದಲಿತರ ಮೇಲೆ ಗೋಮಾಂಸ ಬಳಸುವ ಕುಟುಂಬಗಳ ಮೇಲೆ, ಹೈನುಗಾರರು ಮುಂತಾದವರ ಮೇಲೆ ದಾಳಿ ನಡೆಸಲಾಗುತ್ತಿದೆ. ನಮ್ಮ ಸಂವಿಧಾನವು ವ್ಯಕ್ತಿಯ ಧಾರ್ಮಿಕ ಹಕ್ಕನ್ನು ಮನ್ನಿಸಿದೆ. ಈ ದೇಶದ ಪ್ರಜೆಗಳು ತಮಗೆ ಒಪ್ಪಿತವಾದ ಯಾವುದೆ ಧಾರ್ಮಿಕ ಆಚರಣೆಯಲ್ಲಿ ತೊಡಗಲು ಮತ್ತು ಮತವನ್ನು ಬದಲಾಯಿಸಲು ಅವಕಾಶ ನೀಡಿದೆ. ಹೀಗಿದ್ದರೂ ಮತಾಂತರ ನಿಷೇಧವನ್ನು ಹೇರಲಾಗುತ್ತಿದೆ. ಮರ್ಯಾದೆಯ ಹೆಸರಿನಲ್ಲಿ ಅಂತರ್ಜಾತೀಯ ವಿವಾಹಿತರ ಕೊಲೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

ಹಿಂದೂ ದೇವಸ್ಥಾನಗಳ ಕೆಡವಿ ಕಟ್ಟಲಾಗಿದೆಯೆಂದು ಹೇಳಿ ಮಸೀದಿ ಒಡೆಯಲು, ಮುಸ್ಲಿಂ ಅಲ್ಪ ಸಂಖ್ಯಾತರನ್ನು ದಾಳಿಗೆ ಗುರಿ ಮಾಡಲು ಕುಮ್ಮಕ್ಕು ಸಿಗುತ್ತಿದೆ. ನಮ್ಮ ಪೌರತ್ವ ಕಾಯ್ದೆಯು ಯಾವುದೇ ದೇಶದ ನಿರಾಶ್ರಿತರು 11 ವರ್ಷ ವಾಸವಿದ್ದರೆ ಪೌರತ್ವ ನೀಡಬಹುದೆನ್ನುತ್ತದೆ. ಆದರೆ ಪೌರತ್ವ ತಿದ್ದುಪಡಿ ಕಾಯ್ದೆಯು ಪೌರತ್ವ ನೀಡುವಾಗ ಸಂವಿಧಾನದ ಧರ್ಮ ನಿರಪೇಕ್ಷ ಸ್ವರೂಪಕ್ಕೆ ತದ್ವಿರುದ್ಧವಾಗಿ ಧಾರ್ಮಿಕ ನೆಲೆಯಲ್ಲಿ ತಾರತಮ್ಯವೆಸಗುತ್ತಿದೆ. ಪಾಕಿಸ್ತಾನ, ಅಫ್ಘಾನಿಸ್ತಾನ, ಬಾಂಗ್ಲಾ ದೇಶಗಳ ಮುಸ್ಲಿಮೇತರ ನಿರಾಶ್ರಿತರಿಗೆ ಮಾತ್ರ ಪೌರತ್ವವೆನ್ನಲಾಗುತ್ತಿದೆ.

ಆರ್ಥಿಕ ಸಾರ್ವಭೌಮತೆ

ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸಿ, ಇರುವ ಸಾರ್ವಜನಿಕ ಉದ್ದಿಮೆಗಳನ್ನು ಬಲ ಪಡಿಸುವ ಮೂಲಕ ಮತ್ತು ದೇಶದ ಆಹಾರ ಭದ್ರತೆಯನ್ನು, ರೈತಾಪಿ ಆಧಾರಿತ ಕೃಷಿಯನ್ನು ಉಳಿಸಿ ಬೆಳಸುವ ಮೂಲಕ ದೇಶದ ಆರ್ಥಿಕ ಸಾರ್ವಭೌಮತೆಯನ್ನು ಬಲಪಡಿಸಬಹುದಾಗಿದೆ. ಆದರೆ ಒಕ್ಕೂಟ ಸರಕಾರ ತದ್ವಿರುದ್ಧವಾಗಿ ಕೆಲಸ ಮಾಡುತ್ತಿದೆ.

ಆದ್ದರಿಂದ ಈ ಲೋಕಸಭಾ ಚುನಾವಣೆಯಲ್ಲಿ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಮತ್ತು ಹಿಂದುತ್ವ ಕೋಮುವಾದಿ ಸರ್ವಾಧಿಕಾರದ ಕಡೆ ದೇಶವನ್ನು ತಳ್ಳುವ ಸಂಚನ್ನು ಸೋಲಿಸಲು ಬಿಜೆಪಿ ಹಾಗೂ ಅದರ ಮಿತ್ರ ಪಕ್ಷ ಜೆಡಿ(ಎಸ್) ಅನ್ನು ನಿರ್ಣಾಯಕವಾಗಿ ಸೋಲಿಸಲು ಮತ ಚಲಾಯಿಸುವಂತೆ ಜನತೆಯನ್ನು ಅಣಿನೆರೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಕರ್ನಾಟಕದಲ್ಲಿ ಬಿಜೆಪಿ ಹಾಗೂ ಮಿತ್ರ ಪಕ್ಷ ಜೆಡಿ(ಎಸ್)ಗಳನ್ನು ಸೋಲಿಸಬೇಕು. ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಸಿಪಿಐ(ಎಂ) ಅಭ್ಯರ್ಥಿಯನ್ನು ಮತ್ತು ಇತರೆ ಕ್ಷೇತ್ರಗಳಲ್ಲಿ ಎಡ ಮತ್ತು ಜಾತ್ಯತೀತ ಪಕ್ಷಗಳು ದುರ್ಬಲವಾಗಿರುವುದರಿಂದ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ದೇಶದಲ್ಲಿ ಜಾತ್ಯತೀತ ಸರಕಾರ ರಚನೆಗೆ ಅವಕಾಶ ಮಾಡಿ ಕೊಡಬೇಕು.

ಮಾತ್ರವಲ್ಲಾ! ರಾಜ್ಯದ ಜನತೆ ಜನವಿರೋಧಿ ಜಾಗತೀಕರಣದ ನೀತಿಗಳಿಂದ ತಮ್ಮ ಬದುಕನ್ನು ಉಳಿಸಿಕೊಳ್ಳಲು ಮತ್ತು ಕೋಮು ಸೌಹಾರ್ದತೆ ಹಾಗೂ ಪ್ರಜಾಪ್ರಭುತ್ವವನ್ನು ಹಾಗೂ ಸಾಮಾಜಿಕ ನ್ಯಾಯ, ಭಾರತದ ಒಕ್ಕೂಟ ಸ್ವರೂಪವನ್ನು ಉಳಿಸಿಕೊಳ್ಳಲು ವ್ಯಾಪಕವಾದ ಚಳುವಳಿಯಲ್ಲಿ ತೊಡಗಬೇಕಿದೆ.



ಒಕ್ಕೂಟವಾದ

ಕೇಂದ್ರದ ಅಧಿಕಾರ ಹಾಗೂ ಸಂಪನ್ಮೂಲಗಳ ವಿಕೇಂದ್ರೀಕರಣದ ಬದಲು ರಾಜ್ಯಗಳ ಸೀಮಿತ ಅಧಿಕಾರ ಹಾಗೂ ಸಂಪನ್ಮೂಲಗಳನ್ನೂ ಕಿತ್ತುಕೊಳ್ಳಲಾಗುತ್ತಿದೆ. ಅಗತ್ಯ ತೆರಿಗೆ ಪಾಲು ನೀಡಲಾಗುತ್ತಿಲ್ಲ! ರಾಜ್ಯಪಾಲರುಗಳನ್ನೂ ಸರ್ಕಾರದ ವಿರುದ್ಧ ಬಳಸಲಾಗುತ್ತದೆ. ವಿರೋಧಿಗಳನ್ನು ಬೆದರಿಸಲು ಈ.ಡಿ., ಐ.ಟಿ., ಸಿ.ಬಿ.ಐ.ಗಳನ್ನು ದುರ್ಬಳಕೆ ಮಾಡಲಾಗುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಸೌಹಾರ್ಧತೆ, ನ್ಯಾಯ ಕೇಳುವವರನ್ನು ಪಾಕಿಸ್ಥಾನಿಗಳೂ, ದೇಶ ದ್ರೋಹಿಗಳೆಂದು ಜರಿದು, ಜೈಲಿಗೆ ತಳ್ಳಲಾಗುತ್ತಿದೆ. ಪ್ರಾಣ ಬೆದರಿಕೆ ಒಡ್ಡಲಾಗುತ್ತಿದೆ.

ಸಾಮಾಜಿಕ ನ್ಯಾಯ

ಸಾಮಾಜಿಕ ನ್ಯಾಯ ತಿರುವು ಮುರುವಾಗಿದೆ. ಮೇಲ್ಜಾತಿಗಳ ಶ್ರೀಮಂತರಿಗೆ ಮೀಸಲಾತಿ ಒದಗಿಸಿ ಸಾರ್ವಜನಿಕ ರಂಗದ ಖಾಸಗೀಕರಣದ ಮೂಲಕ ದುರ್ಬಲರಿಗೆ ಶಿಕ್ಷಣ ಹಾಗೂ ಉದ್ಯೋಗ ನಿರಾಕರಿಸಿದೆ.

ಸಿಪಿಐ(ಎಂ) ಅನ್ನು ಯಾಕೆ ಗೆಲ್ಲಿಸಬೇಕು

ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಪ್ರಾತಿನಿಧ್ಯ ಹೆಚ್ಚುವುದು ಜನತೆಯ ರಕ್ಷಣೆಗೆ ಬಲವನ್ನು ತರಲಿದೆ. ಒಳ್ಳೆಯ ಪ್ರಾತಿನಿಧ್ಯವಿದ್ದಾಗ ಅವು ಎರಡು ಪ್ರಮುಖ ಕರ್ತವ್ಯಗಳನ್ನು ನಿರ್ವಹಿಸಿದ್ದನ್ನು ಇಲ್ಲಿ ಗಮನಿಸಬೇಕು.

ಒಂದು, ಕೋಮುವಾದಿ ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆದು ಜಾತ್ಯತೀತ ಸರಕಾರ ರಚನೆಗೆ ಕ್ರಮವಹಿಸಿದ್ದು. ಎರಡನೆಯದು, ಯುಪಿಎ–1 ಸರಕಾರದ ಮೇಲೆ ಒತ್ತಡ ಹೇರಿ ಆ ಸರಕಾರದ ಕನಿಷ್ಠ ಕಾರ್ಯಕ್ರಮದಲ್ಲಿದ್ದ ಬಡ ರೈತರು ಹಾಗೂ ಕಸುಬುದಾರರು ಮತ್ತು ಗ್ರಾಮೀಣ ಕೂಲಿಕಾರರನ್ನು ಸಂರಕ್ಷಿಸುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮಿಣ ಉದ್ಯೋಗ ಖಾತ್ರಿ ಕಾಯ್ದೆ ಹಾಗೂ ಅರಣ್ಯ ಹಕ್ಕು ಕಾಯ್ದೆ, ಮಾಹಿತಿ ಹಕ್ಕು ಕಾಯ್ದೆಗಳನ್ನು ಜಾರಿಗೊಳಿಸಿದ್ದು. ಅದರಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಅಲ್ಲಿಂದ ಇಲ್ಲಿಯವರೆಗೆ ಹಲವು ದಶಲಕ್ಷ ಕೋಟಿ ರೂ.ಗಳ ಅನುದಾನ ದೊರೆತಿದೆ. ದೇಶದ ಸಾರ್ವಭೌಮತೆಗೆ ಧಕ್ಕೆ ತರುವ ಹಾಗೂ ತೀವ್ರ ವಿದ್ಯುತ್ ಬೆಲೆ ಏರಿಕೆಗೆ ಕಾರಣವಾಗುವ ಅಮೇರಿಕಾದ ಜೊತೆಗಿನ ಅಣು ಒಪ್ಪಂದಕ್ಕೆ ಸರಕಾರ ಮುಂದಾದಾಗ ಅದನ್ನು ತಡೆಯಲು ಪ್ರಯತ್ನಿಸಿತು.

ಜನವಿರೋಧಿ ಹಾಗೂ ಲೂಟಿಕೋರ ಕಾರ್ಪೋರೇಟ್ ಸಂಸ್ಥೆಗಳ ಪರವಾದ ಜಾಗತೀಕರಣದ ನೀತಿಗಳಿಗೆ ಪ್ರತಿರೋಧ ಒಡ್ಡಲು ಮತ್ತು ದೇಶದ ಸೌಹಾರ್ದತೆ ಹಾಗೂ ಪ್ರಜಾಪ್ರಭುತ್ವ ರಕ್ಷಣೆಗಾಗಿ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಗೆಲುವಿಗೆ ಮತ ಚಲಾಯಿಸಬೇಕಾಗಿದೆ.

ಜಾತ್ಯತೀತ ಸರಕಾರ ರಚನೆಗಾಗಿ, ಕಾಂಗ್ರೆಸ್ ಪಕ್ಷದ ನೀತಿಗಳಿಗೆ ಅಸಮಾಧಾನದ ನಡುವೆಯು ಚಿಕ್ಕಬಳ್ಳಾಪುರ ಹೊರತು ಪಡಿಸಿ, ಬಿಜೆಪಿ ಕೂಟವನ್ನು ನಿರ್ಣಾಯಕವಾಗಿ ಸೋಲಿಸಲು ಕಾಂಗ್ರೆಸ್‌ಗೆ ಮತ ನೀಡಿ ಗೆಲ್ಲಿಸುವುದು ಅಗತ್ಯವಿದೆ.

ಹೌದು ಕಾಂಗ್ರೆಸ್ ಪಕ್ಷ ಜಾರಿಗೆ ತಂದ ಜನ ವಿರೋಧಿ ಜಾಗತೀಕರಣದ ಆರ್ಥಿಕ ನೀತಿಗಳು ಮತ್ತು ಕೋಮುವಾದದ ಕುರಿತಂತೆ ಅದರ ಮೆದು ಧೋರಣೆಯು ಕೂಡಾ ಜನತೆಯ ಇಂದಿನ ದುಸ್ಥಿತಿಗೆ ಕಾರಣವಾಗಿದೆ ಎನ್ನುವುದನ್ನು ಮರೆಯಲಾಗದು. ಕಾಂಗ್ರೆಸ್ ಪಕ್ಷ ಅದೆ ಕಾರಣಕ್ಕೆ ದುರ್ಬಲವಾಗುತ್ತಿದೆ. ಅನುಭವದಿಂದ ಅದು ಪಾಠ ಕಲಿಯುತ್ತಿಲ್ಲ. ಆದಾಗಲು ಎಡ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳು ರಾಜ್ಯದಲ್ಲಿ ದುರ್ಬಲವಾಗಿರುವಾಗ ಸರ್ವಾಧಿಕಾರದ ಕಡೆ ದೇಶ ಚಲಿಸದಂತೆ ತಡೆಯಲು ಕಾಂಗ್ರೆಸ್‌ಗೆ ಮತ ನೀಡುವುದು ಅನಿವಾರ್ಯ ಅಗತ್ಯವಾಗಿದೆ. ಸಿಪಿಐ(ಎಂ) ಪಕ್ಷ ಸ್ವತಂತ್ರವಾಗಿ ಪ್ರಚಾರ ಕೈಗೊಂಡು ಚುನಾವಣಾ ಹೋರಾಟ ನಡೆಸುತ್ತದೆ.

ಲೋಕಸಭಾ ಚುನಾವಣೆ: ಮುಖ್ಯ ಪ್ರಶ್ನೆಗಳು

ಕೋವಿಡ್‌ನಲ್ಲಿ ಉದ್ಯೋಗ ಕಳೆದುಕೊಂಡ ಮಹಿಳೆಯರಲ್ಲಿ ಶೇ.47 ಶಾಶ್ವತವಾಗಿ ಕಳೆದುಕೊಂಡರು

ಘೋಷಣೆಗಳು

* ಮಹಿಳೆಯರಿಗೆ ದೇಶದ ಶ್ರಮಶಕ್ತಿಯ ಭಾಗವಾಗಲು ಮತ್ತು ವಿಕಸಿತ ಭಾರತದ ಅಭಿವೃದ್ಧಿಗೆ ಕೊಡುಗೆ ನೀಡಲು ಸಾಧ್ಯ ಆಗುವಂತೆ ಒಂದು ಸುರಕ್ಷಿತ, ಆರೋಗ್ಯಕರ ಮತ್ತು ಸಹಕಾರಿಯಾದ ವಾತಾವರಣ ನಿರ್ಮಾಣ ಮಾಡಲು–ಕಾರ್ಮಿಕ ಮತ್ತು ಔದ್ಯೋಗಿಕ ಸಚಿವಾಲಯ.
* ಕಾರ್ಮಿಕ ಸಂಹಿತೆಯು ದುಡಿಮೆಗಾರರ ಅದರಲ್ಲೂ ಅಸಂಘಟಿತ ವಲಯದ ಕೆಲಸಗಾರರ ದುಡಿಮೆಯ ಸ್ಥಿತಿಗತಿಗಳನ್ನು ಉತ್ತಮಗೊಳಿಸಲಿವೆ.
* “ಹತ್ತು ಜನಕ್ಕಿಂತ ಹೆಚ್ಚಿನ ಕೆಲಸಗಾರರನ್ನು ಹೊಂದಿರುವ ಪ್ರತೀ ಸಂಸ್ಥೆಯೂ ಲೈಂಗಿಕ ಪ್ರಕರಣದ ದೂರುಗಳನ್ನು ಪರಿಶೀಲಿಸಲು ಆಂತರಿಕ ಸಮಿತಿಗಳನ್ನು ರಚಿಸಲೇಬೇಕು” –2022 ರಲ್ಲಿ ಕಾರ್ಮಿಕ ಮಂತ್ರಿಗಳು ಸಂಸತ್ತಿನಲ್ಲಿ.
* “ಅಂಗನವಾಡಿ ಕೆಲಸಗಾರರ ಕೆಲಸದ ಸ್ಥಿತಿಗತಿಗಳನ್ನು ಪರಿಶೀಲಿಸಿ ಅವರ ಸಂಭಾವನೆಯನ್ನು ಹೆಚ್ಚಿಸುವುದು” ಬಿಜೆಪಿ ತನ್ನ 2014 ರ ಚುನಾವಣಾ ಪ್ರಣಾಳಿಕೆಯಲ್ಲಿ.
* “ನಾವು ಆಶಾ ಮತ್ತು ಅಂಗನವಾಡಿ ನೌಕರರ ಸಂಭಾವನೆಯನ್ನು ಗಣನೀಯವಾಗಿ ಹೆಚ್ಚಿಸಿದ್ದೇವೆ” – ಬಿಜೆಪಿ ತನ್ನ 2019 ರ ಚುನಾವಣಾ ಪ್ರಣಾಳಿಕೆಯಲ್ಲಿ.
* ಸಂಬಳ ಸಹಿತ ಹೆರಿಗೆ ರಜೆಯನ್ನು 12 ವಾರಗಳಿಂದ 26 ವಾರಗಳಿಗೆ ಹೆಚ್ಚಿಸಲು ತಾಯ್ತನ ಸೌಲಭ್ಯ ಕಾನೂನು 2017 ಕ್ಕೆ ತಿದ್ದುಪಡಿ ಮಾಡಲಾಗಿದೆ.

ವಾಸ್ತವ

ಕೋವಿಡ್‌ನ ಮಹಾಸಾಂಕ್ರಾಮಿಕ ಕಾಲದಲ್ಲಿ ಮಾರ್ಚ್ ನಿಂದ ಡಿಸೆಂಬರ್ 2020 ರ ಅವಧಿಯಲ್ಲಿ ಉದ್ಯೋಗ ಕಳೆದು ಕೊಂಡವರಲ್ಲಿ, ಶೇ.7 ರಷ್ಟು ಪುರುಷರು ಉದ್ಯೋಗಗಳನ್ನು ಶಾಶ್ವತವಾಗಿ ಕಳೆದುಕೊಂಡರೆ, ಶೇ.47ರಷ್ಟು ಮಹಿಳೆಯರು ಶಾಶ್ವತವಾಗಿ ಉದ್ಯೋಗದಿಂದ ವಂಚಿತರಾದರು.

ಇಡೀ ಜಗತ್ತಿನಲ್ಲೇ ಶ್ರಮ ಶಕ್ತಿಯಲ್ಲಿ ಅತೀ ಕಡಿಮೆ ಮಹಿಳೆಯರ ಭಾಗವಹಿಸುವಿಕೆಯಿರುವ ದೇಶ ಭಾರತ. ಇತ್ತೀಚೆಗೆ ಶೇ.37ಕ್ಕೆ ಅದು ಏರಿಕೆಯಾಗಿದೆ. ಬಹು ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗಗಳಲ್ಲಿ ಆಗಿರುವ ಶೇ.70 ರಷ್ಟು ಬೆಳವಣಿಗೆಯಿಂದ. ಅವರಲ್ಲಿ ಬಹುತೇಕರು ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. ಸುಮಾರು ಶೇ.40 ರಷ್ಟು ಮಹಿಳೆಯರು ಸಂಭಾವನಾ ರಹಿತ ಕಾರ್ಮಿಕರು. ಕೇವಲ ಶೇ.10 ರಷ್ಟು ಮಾತ್ರವೇ ನಿಯಮಿತ ಸಂಬಳ ಹೊಂದಿರುವವರು. ನಿಯಮಿತ ಸಂಬಳ ಹೊಂದಿರುವ ಕೆಲಸಗಾರರರಲ್ಲಿ ಯಾವುದೇ ಸಾಮಾಜಿಕ ಸುರಕ್ಷ ಯೋಜನೆಗಳು ಲಭ್ಯವಿರದವರ ಪ್ರಮಾಣವು, ಗ್ರಾಮೀಣ ಪ್ರದೇಶಗಳಲ್ಲಿ ಶೇ.58 ಕ್ಕೆ ಮತ್ತು ನಗರ ಪ್ರದೇಶಗಳಲ್ಲಿ ಶೇ.51 ಕ್ಕೆ ಏರಿಕೆಯಾಗಿದೆ. ಇದರರ್ಥ ಅನಿಶ್ಚಿತತೆಯ ಕೆಲಸಗಳು ಮತ್ತು ಅಭದ್ರ ಜೀವನೋಪಾಯಗಳಿಂದ ದುಡಿಯುವ ಮಹಿಳೆಯರ ಸಂಕಷ್ಟಗಳು ಇನ್ನಷ್ಟು ಹೆಚ್ಚಿವೆ ಎಂಬುದು.

ಸರ್ಕಾರವು ಸಂಗ್ರಹಿಸಿರುವ “ಕಾಲ ಉಪಯೋಗ” ಅಂಕಿ ಅಂಶಗಳ ಪ್ರಕಾರ, ಶೇ.92 ರಷ್ಟು ಮಹಿಳೆಯರು ದಿನವೊಂದಕ್ಕೆ 5 ಘಂಟೆಗಳ ಕಾಲ ಸಂಭಾವನಾ (ಸಂಬಳ) ರಹಿತ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಇಂತಹ ಕೆಲಸಗಳಲ್ಲಿ ತೊಡಗಿಕೊಂಡ ಪುರುಷರ ಪ್ರಮಾಣ ಶೇ.29. ಈ ಕಠಿಣ ಕೆಲಸದಿಂದ ಅವರನ್ನು ಮುಕ್ತಗೊಳಿಸಲು ಆಲೋಚಿಸುವ ಯಾವುದೇ ನೀತಿ ನಿರೂಪಣೆಯಿಲ್ಲ. ಶುದ್ಧ ಕುಡಿಯುವ ನೀರಿನ ಲಭ್ಯತೆ ಒಂದು ಸವಾಲೇ ಸರಿ. ಅಡುಗೆ ಅನಿಲದ ಸಿಲಿಂಡರಿನ ಬೆಲೆ ರೂ.900 ಕ್ಕೆ ಏರಿರುವುದೂ ಅವರ ಮೇಲೆ ಹೆಚ್ಚಿನ ಹೊರೆ ಹೊರಿಸಿದೆ.

ವೇತನ ಸಂಹಿತೆ 2019 ನ್ನು ಜಾರಿ ಮಾಡಿದ್ದರೂ, ಪುರುಷ ಮತ್ತು ಮಹಿಳೆಯರ ನಡುವಿನ ವೇತನ ಅಂತರವು ನಿಯಮಿತ ಸಂಬಳವಿರುವ ಕೆಲಸಗಳಲ್ಲಿ ಶೇ.34, ಹಂಗಾಮಿ ಕೆಲಸಗಳಲ್ಲಿ ಶೇ.50 ಮತ್ತು ಸ್ವಯಂ–ಉದ್ಯೋಗಗಳಲ್ಲಿ ಶೇ.160 ರಷ್ಟಿದೆ.

ಔದ್ಯೋಗಿಕ ಸುರಕ್ಷೆ, ಆರೋಗ್ಯ ಮತ್ತು ಸಾಮಾಜಿಕ ಸುರಕ್ಷೆ ಸಂಹಿತೆಗಳು (2020) ಅಸಂಘಟಿತ ವಲಯದ ನೌಕರರಿಗೆ ರಕ್ಷಣೆ ನೀಡಬೇಕು. ಆದರೆ ಅದರ ಹಲವಾರು ವಿಭಾಗಗಳು, ಉದಾಹರಣೆಗೆ ಮಹಿಳೆಯರು ಹೆಚ್ಚಾಗಿ (ಪ್ರಾಯಶಃ ಬಹುಸಂಖ್ಯಾತರು) ಇರುವ ಮನೆಗೆಲಸಗಾರರಿಗೆ ಈ ಸಂಹಿತೆಗಳು ಕನಿಷ್ಠ ವೇತನ ಮತ್ತು ಸಾಮಾಜಿಕ ಸುರಕ್ಷೆಯನ್ನು ನಿರಾಕರಿಸುತ್ತದೆ.

ಅಧ್ಯಯನ ಒಂದರ ಪ್ರಕಾರ 10 ರಲ್ಲಿ 9 ಮನೆಗೆಲಸಗಾರರು ತಾವು ಒಪ್ಪಿಕೊಂಡ ಕೆಲಸಗಳನ್ನೂ ಮೀರಿ ಇತರ ಸಂಬಳ ರಹಿತ ಕೆಲಸಗಳನ್ನು ಕಡ್ಡಾಯವಾಗಿ ಮಾಡಬೇಕಾಗುತ್ತದೆ. ಜೊತೆಗೇ ಉಳಿದುಕೊಳ್ಳುವ ಮನೆಗೆಲಸಗಾರರು ಹೆಚ್ಚಾಗಿ ದೈಹಿಕ ಹಿಂಸೆ ಮತ್ತು ದೌರ್ಜನಕ್ಕೆ ಒಳಗಾಗುತ್ತಾರೆ. ಹಲವಾರು ಖಾಸಗಿ ಸದಸ್ಯರ ಕರಡು ಮಸೂದೆಗಳ ಸಲ್ಲಿಕೆಯಾಗಿದ್ದರೂ ಮೋದಿ ಸರ್ಕಾರವು ಮನೆಗೆಲಸಗಾರರ ಹಕ್ಕುಗಳ ರಕ್ಷಣೆಗೆ ಯಾವುದೇ ಕಾನೂನು ಜಾರಿ ಮಾಡಲು ತನ್ನ ಈ ಸಂಪೂರ್ಣ ಅವಧಿಯಲ್ಲಿ ನಿರಾಕರಿಸಿದೆ.

ಗೃಹಾಧಾರಿತ ಕೆಲಸಗಳಲ್ಲಿ ಕನಿಷ್ಠ 2 ಕೋಟಿ ಮಹಿಳೆಯರು ತೊಡಗಿಕೊಂಡಿದ್ದಾರೆ. ಅವರು ಅರೆಕಾಸಿಗೆ ದುಡಿಯುತ್ತಿದ್ದಾರೆ. ಹೆಚ್ಚಾಗಿ ಕುಟುಂಬದ ಎಲ್ಲ ಮಹಿಳೆಯರೂ ಇಂತಹ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ. ಪ್ರತೀ ನಿರ್ದಿಷ್ಟ ಕೆಲಸದ ಭಾಗಕ್ಕೂ (ಪೀಸ್ ವರ್ಕ್) ನ್ಯಾಯ ಬೆಲೆ ಒದಗಿಸಲು ಸಲ್ಲಿಸಲಾಗಿರುವ ರಾಷ್ಟ್ರೀಯ ನೀತಿ ಕರಡನ್ನೂ ಮೋದಿ ಸರ್ಕಾರವು ನಿರ್ಲಕ್ಷಿಸಿದೆ.

ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯದ ವಿಚಾರದಲ್ಲಿ ಮೋದಿ ಸರ್ಕಾರದ ನಿಲುವೇನು ಎಂಬುದನ್ನು ನಮ್ಮ ಮಹಿಳಾ ಕುಸ್ತಿ ಪಟುಗಳು, ಕುಸ್ತಿ ಫೆಡರೇಶನ್‌ನ ಅಧ್ಯಕ್ಷರೂ ಆಗಿದ್ದ ಬಿಜೆಪಿಯ ಸಂಸದರ ವಿರುದ್ಧ ಬೀದಿಗಿಳಿದ ಪ್ರಕರಣದ ವಿಚಾರದಲ್ಲಿ ಅದು ನಡೆದುಕೊಂಡ ರೀತಿಯೇ ಬಯಲಿಗೆಳೆದಿದೆ.

ಲೈಂಗಿಕ ದೌರ್ಜನ್ಯದ ದೂರುಗಳಲ್ಲಿ ನಿರಂತರ ಏರಿಕೆಯಾಗುತ್ತಿದೆ. 2024ರ ಸಮೀಕ್ಷೆಯಲ್ಲಿ ಮಾತನಾಡಿದ ಶೇ.59 ರಷ್ಟು ಮಹಿಳೆಯರು ‘ಲೈಂಗಿಕ ದೌರ್ಜನ್ಯ ವಿರೋಧಿ ಮತ್ತು ರಕ್ಷಣಾ ಕಾಯ್ದೆ’ (PoSH Act 2013) ಅಡಿ ಕಡ್ಡಾಯವಾಗಿರುವ ಆಂತರಿಕ ದೂರು ಸಮಿತಿಗಳನ್ನು ತಮ್ಮ ಕೆಲಸದ ಸ್ಥಳಗಳಲ್ಲಿ ರಚಿಸಿಲ್ಲವೆಂದು ತಿಳಿಸಿದ್ದಾರೆ. ಆದರೆ ಸರ್ಕಾರವು ಈ ಸಂಸ್ಥೆಗಳ ವಿರುದ್ಧ ಕ್ರಮಕೈಗೊಳ್ಳುವಲ್ಲಿ ಸೋತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ಈ ನಿಯಮಗಳನ್ನು ಉಲ್ಲಂಘಿಸಿರುವ ಬಹುದೊಡ್ಡ ಆಪಾದಿತರು. ಏಕೆಂದರೆ ಅವರ ಇಲಾಖಾ ಕಛೇರಿಗಳಲ್ಲೇ ಈ ಕಾನೂನನ್ನು ಜಾರಿಮಾಡಿಲ್ಲ. ಶೇ.40 ರಷ್ಟು ಮಹಿಳಾ ನೌಕರರು ಲೈಂಗಿಕ ದೌರ್ಜನ್ಯದ ಕಾರಣದಿಂದ ಅಭದ್ರತೆಯನ್ನು ಅನುಭವಿಸುತ್ತಿದ್ದರೆ, ಶೇ.30 ರಷ್ಟು ಮಹಿಳೆಯರು ಇಂತಹ ಪ್ರಕರಣಗಳನ್ನು ಚಾಪೆಯಡಿ ತಳ್ಳಿ ಬಿಡಲಾಗುತ್ತದೆಯೆಂದು ತಿಳಿಸಿದ್ದಾರೆ ಎಂದು ಈ ಸಮೀಕ್ಷಾ ವರದಿ ತಿಳಿಸುತ್ತದೆ.

ಅಂಗನವಾಡಿ ನೌಕರರು 2018 ರಿಂದ ಕೇಂದ್ರ ಸರ್ಕಾರದಿಂದ ಯಾವುದೇ ಹೆಚ್ಚಳವನ್ನೂ ಪಡೆದಿಲ್ಲ. ಈಗ, ಕೇಂದ್ರ ಸರ್ಕಾರವು ಅಂಗನವಾಡಿ ನೌಕರರಿಗೆ ರೂ.4,500, ಕಿರಿ ಅಂಗನವಾಡಿ ನೌಕರರಿಗೆ ರೂ.3,500 ಮತ್ತು ಸಹಾಯಕರಿಗೆ ರೂ.2,500 ‘ಗೌರವಧನ’ ನೀಡುತ್ತಿದೆ. ಆಶಾ ನೌಕರರಿಗೆ ನೀಡುತ್ತಿರುವ ರೂ.2,000 ಗೌರವಧನ ಸಹ 2018ರಿಂದಲೂ ಹೆಚ್ಚಿಲ್ಲ. ಬಿಸಿಯೂಟದ ನೌಕರರಿಗೆ 2009 ರಿಂದ ಯಾವುದೇ ಹೆಚ್ಚಳ ನೀಡಿಲ್ಲ! ಕೋವಿಡ್‌ನ ಮೂರು ಅಲೆಯ ಸಂದರ್ಭಗಳಲ್ಲಿ ತಮ್ಮ ಜೀವವನ್ನೂ ಒತ್ತೆಯಿಟ್ಟು ಕ್ವಾರಂಟೈನ್ ಕೇಂದ್ರಗಳಿಂದ ಹಿಡಿದು, ಲಸಿಕೆ ನೀಡುವವರೆಗಿನ ಎಲ್ಲ ಕೆಲಸಗಳನ್ನು ನಿರ್ವಹಿಸಿಯೂ ಅವರಿಗೆ ದೊರಕಿರುವ ಪ್ರತಿಫಲವಿದು. ಅವರ ‘ಗೌರವಧನ’ದಲ್ಲಿ ಉಂಟಾಗಿರುವ ಅಲ್ಪಸ್ವಲ್ಪ ಹೆಚ್ಚಳವೂ ತೀವ್ರ ಕಠಿಣ ಹೋರಾಟಗಳ ಮೂಲಕ ರಾಜ್ಯ ಸರ್ಕಾರದಿಂದ ಗಳಿಸಿರುವುದಾಗಿದೆಯೇ ವಿನಃ ಕೇಂದ್ರ ಸರ್ಕಾರದಿಂದ ನೀಡಲಾಗಿರುವುದಲ್ಲ.

ಭಾರತದ ವಿವಿಧ ಯೋಜನೆಗಳಡಿ ದುಡಿಯುತ್ತಿರುವ ಮಹಿಳೆಯರು ಬಹುಸಂಖ್ಯಾತರಾಗಿರುವ ಸುಮಾರು 80 ಲಕ್ಷ ಕೆಲಸಗಾರರನ್ನು, ಕನಿಷ್ಠ “ಕಾರ್ಮಿಕರು” ಎಂದು ಗುರುತಿಸಲಾಗುತ್ತಿಲ್ಲ. 45 ಮತ್ತು 46 ನೆಯ ಭಾರತ ಕಾರ್ಮಿಕ ಸಮ್ಮೇಳನಗಳ “ಅಂಗನವಾಡಿ, ಬಿಸಿಯೂಟ, ಆಶಾ, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯೂ ಸೇರಿದಂತೆ ಎಲ್ಲ ಯೋಜನಾ ಕೆಲಸಗಾರರನ್ನೂ “ಕಾರ್ಮಿಕರು” ಎಂದು ಪರಿಗಣಿಸಬೇಕು, ಅವರಿಗೆ ಕನಿಷ್ಠ ವೇತನ ಮತ್ತು ಇತರ ಸಾಮಾಜಿಕ ಸುರಕ್ಷ ಯೋಜನೆಗಳನ್ನು ನೀಡಬೇಕು” ಎಂಬ ಸಹಮತದ ಶಿಫಾರಸ್ಸನ್ನೂ ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಅಂಗನವಾಡಿ ನೌಕರರಿಗೆ ಗ್ರಾಚೂಯಿಟಿ ನೀಡಬೇಕೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಎರಡು ವರ್ಷಗಳ ನಂತರವೂ ಜಾರಿ ಮಾಡಿಲ್ಲ.



ಮಹಿಳೆಯರೇ ಬಹುತೇಕವಾಗಿ ಕೆಲಸ ಮಾಡುವ ಐ.ಸಿ.ಡಿ.ಎಸ್., ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಬಿಸಿಯೂಟದಂತಹ ಯೋಜನೆಗಳಿಗೆ ಬಜೆಟಿನಲ್ಲಿ ಮೀಸಲಿಡುವ ಮೊತ್ತವನ್ನು ಮೋದಿಯವರ ಆಡಳಿತಾವಧಿಯಲ್ಲಿ ತೀವ್ರವಾಗಿ ಕಡಿತಗೊಳಿಸಲಾಗಿದೆ. ಐ.ಸಿ.ಡಿ.ಎಸ್. ಗೆ ಶೇ.55, ಬಿಸಿಯೂಟಕ್ಕೆ ಶೇ.30 ರಷ್ಟು ಮತ್ತು ಆರೋಗ್ಯ ಮಿಷನ್‌ಗೆ ಶೇ.20 ರಷ್ಟು ಕಡಿತ ಮಾಡಲಾಗಿದೆ. ಸರ್ಕಾರವು ಈ ಯೋಜನೆಗಳನ್ನು ಭಗ್ನಗೊಳಿಸಲು ಪ್ರಯತ್ನಿಸುತ್ತಿದೆ. ಅವುಗಳನ್ನು ಕಾರ್ಪೊರೇಟ್ ಸಂಸ್ಥೆಗಳಾದ ವೇದಾಂತ, ಪೆಪ್ಸಿಕೊ, ಪತಂಜಲಿ ಮತ್ತು ಇಸ್ಕಾನ್ ನಂತಹ ಸಂಸ್ಥೆಗಳಿಗೆ ವಹಿಸುವ ಮೂಲಕ ಖಾಸಗೀಕರಣ ಮಾಡಲು ಪ್ರಯತ್ನಿಸುತ್ತಿದೆ.

ಹೆಚ್ಚು ಹೆಚ್ಚು ಮಹಿಳೆಯರನ್ನು ತಾಯ್ತನದ ಸೌಲಭ್ಯಗಳ ಕಾಯಿದೆ ಅನ್ವಯ ಆಗದಿರುವ ಅಸಂಘಟಿತ, ಕೃಷಿ ಮತ್ತು ವೇತನ ರಹಿತ ಕ್ಷೇತ್ರಗಳ ಕೆಲಸಗಳಿಗೆ ತಳ್ಳುವ ಮೂಲಕ ಸರ್ಕಾರವು ಅವರನ್ನು ತಾಯ್ತನದ ಸೌಲಭ್ಯಗಳಿಂದ ವಂಚಿಸುತ್ತಿದೆ. ತಾಯ್ತನದ ಸೌಲಭ್ಯಗಳನ್ನು ವಿಸ್ತರಿಸುವ ಸರಕಾರದ ಘೋಷಣೆಗಳು ಎಷ್ಟು ಬೊಗಳೆ ಎಂದು ಇದರಿಂದಲೇ ತಿಳಿಯುತ್ತದೆ. ಖಾಸಗೀ ವಲಯದಲ್ಲಿ ಬಹುತೇಕ ಮಹಿಳೆಯರು ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಾಗಿದ್ದು ಅವರು ಈ ಕಾಯ್ದೆಯ ವ್ಯಾಪ್ತಿಯ ಹೊರಗೇ ಉಳಿದಿದ್ದಾರೆ. ಕಾಯಿದೆ ಅನ್ವಯವಾಗುವ ಕ್ಷೇತ್ರಗಳಲ್ಲೂ ನಿರೀಕ್ಷಣಾ ವ್ಯವಸ್ಥೆಯನ್ನು ದುರ್ಬಲಗೊಳಿಸಿರುವುದರಿಂದ ಮಸೂದೆಯ ಜಾರಿ ಇನ್ನಷ್ಟು ದುರ್ಬಲವಾಗಲಿದೆ. ಸರ್ಕಾರವು ತನ್ನದೇ ಯೋಜನೆಗಳನ್ನು ಜಾರಿ ಮಾಡುವ ಆಶಾ ಮತ್ತು ಬಿಸಿಯೂಟದ ನೌಕರರಿಗೇ ಈ ತಾಯ್ತನದ ಸೌಲಭ್ಯಗಳನ್ನು ನಿರಾಕರಿಸುತ್ತಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕು.

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯು ಒಂದೇ ಬಾರಿ ನೀಡುವ 5,000 ರೂ.ಗಳ ನಗದು ಪಾವತಿ 2017ರಿಂದಲೂ ಹೆಚ್ಚಾಗಿಲ್ಲ. “ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ” (2013) ಇದು ಕನಿಷ್ಠ ರೂ.6,000 ಇರಬೇಕೆಂದು ನಿಗದಿ ಪಡಿಸಿದ್ದಾಗ್ಯೂ ಆ ಮೊತ್ತವನ್ನು ಏರಿಸಿಲ್ಲ. ಕೇವಲ ಶೇ.20 ರಷ್ಟು ಅರ್ಹ ಫಲಾನುಭವಿಗಳು ಮಾತ್ರವೇ ಈ ಸೌಲಭ್ಯ ಪಡೆಯುವುದು ಸಾಧ್ಯವಾಗಿದೆ. ಈ ಯೋಜನೆಗೆ “ಆಧಾರ್” ಜೋಡಿಸಿದ ನಂತರವಂತೂ ಇದು ಇನ್ನಷ್ಟು ಜನರಿಗೆ ದುರ್ಲಭವಾಗಿದೆ. ಸೌಲಭ್ಯ ಪಡೆಯುತ್ತಿರುವವರ ಸಂಖ್ಯೆಯ 2022 ರಲ್ಲಿ ಶೇ.46 ರಷ್ಟು ಇಳಿಮುಖವಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದಲ್ಲಿ 2023–24 ರಲ್ಲಿ ಮೀಸಲಿಟ್ಟ ಬಜೆಟಿನ ಮೊತ್ತವು ಶೇ. 17 ರಷ್ಟು ಇಳಿಕೆ ಕಂಡಿದೆ. ಕೇವಲ ಶೇ. 29 ರಷ್ಟು ಫಲಾನುಭವಿಗಳು ಮಾತ್ರವೇ ಎರಡೂ ಕಂತುಗಳನ್ನು ಪಡೆದಿದ್ದಾರೆ.

ತಮ್ಮ ಮತ್ತು ತಮ್ಮ ಕುಟುಂಬಗಳ ಕನಿಷ್ಠ, ನಿಕೃಷ್ಟ ಅಸ್ತಿತ್ವಕ್ಕಾಗಿ ಮಹಿಳಾ ಕೆಲಸಗಾರರು ವೇತನ ರಹಿತ ಮತ್ತು ಕನಿಷ್ಠ ವೇತನದ ದುಡಿಮೆಯಲ್ಲಿ ಬಹುಮುಖಿ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಇದು ಅವರ ಕ್ಷೇಮ ಮತ್ತು ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ.

ದುಡಿಯುವ ಮಹಿಳೆಯರ ಹಕ್ಕುಗಳನ್ನು ರಕ್ಷಿಸಿ!
ಬಿಜೆಪಿಯನ್ನು ಸೋಲಿಸಿ!

ಜನರು ಜೀವನ ಸಾಗಿಸಲು ಅವಶ್ಯಕವಾದ ಆಹಾರ, ಹಾಲು, ನೀರು, ಅನಾರೋಗ್ಯದಿಂದ ಇರುವ ಜನರಿಗೆ ಔಷಧಿ, ಚಿಕಿತ್ಸೆ ಇವುಗಳಿಗೆ ಯಾವುದೇ ವ್ಯವಸ್ಥೆ ಮಾಡದೆ, ವಲಸೆ ಕಾರ್ಮಿಕರು ತಮ್ಮ ಸ್ವಂತ ಊರುಗಳಿಗೆ ಹೋಗಲು ಸಾರಿಗೆ ವ್ಯವಸ್ಥೆ ಮಾಡದೆ, ಯಾವುದೇ ಪೂರ್ವಸಿದ್ಧತೆ ಇಲ್ಲದೆ, ಪೂರ್ವಸಿದ್ಧತೆ ಮಾಡಿಕೊಳ್ಳಲು ಜನತೆಗೂ ಅವಕಾಶ ಕೊಡದೆ, ಯಾವ ತಜ್ಞರ ಜೊತೆಗೂ ಸಮಾಲೋಚನೆ ನಡೆಸದೆ, ಪ್ರಧಾನಿ ನರೇಂದ್ರ ಮೋದಿಯವರು ಅವೈಜ್ಞಾನಿಕವಾಗಿ, ಏಕಾಏಕಿ ಲಾಕ್ ಡೌನ್ ಘೋಷಣೆ ಮಾಡುವ ಮೂಲಕ, ದೇಶದ 140 ಕೋಟಿ ಜನರನ್ನು ಹಲವು ತಿಂಗಳುಗಳ ಕಾಲ ಗೃಹಬಂಧನದಲ್ಲಿ ಇರಿಸಿದರು. ಜನರು ಹಸಿವಿನಿಂದ ನರಳುತ್ತಿದ್ದಾಗ, ಜೀವಭಯದಿಂದ ಸಂಕಷ್ಟದ ದಿನಗಳನ್ನು ಕಳೆಯುತ್ತಿದ್ದಾಗ, ಜನತೆಯ ಕ್ರೋಧ ತಮ್ಮ ಮೇಲೆ ಬೀಳುವುದನ್ನು ತಪ್ಪಿಸಲು ಸಂಘಪರಿವಾರ ಮತ್ತು ಬಿಜೆಪಿ ಆಯ್ಕೆ ಮಾಡಿಕೊಂಡ 'ಗುರಾಣಿ' ಎಂದರೆ ಮುಸ್ಲಿಂ ಅಲ್ಪಸಂಖ್ಯಾತರು. ಇವರು ತಮ್ಮ ಹಿಂದುತ್ವ ಸಿದ್ಧಾಂತವನ್ನು ಜಾರಿಗೆ ತರಲು ಇದೇ ಸಂದರ್ಭವನ್ನು ಬಳಸಿಕೊಂಡರು. ತಮಗೆ ತಮ್ಮ ಹಿಂದುತ್ವದ ಗುರಿ ಮತ್ತು ಮುಕ್ತ ಆರ್ಥಿಕ ನೀತಿಗಳ ಜಾರಿ ಹಾಗೂ ದೊಡ್ಡ ಉದ್ಯಮಿಗಳ ಸಂಪತ್ತು ವೃದ್ಧಿಯೇ ಮುಖ್ಯ, ಈ ಗುರಿ ಸಾಧನೆಗಾಗಿ ದೇಶ ಮತ್ತು ಜನತೆ ಎಂತಹ ಸಂಕಷ್ಟದಲ್ಲಿ ಸಿಲುಕಿದ್ದರೂ, ಎಂತಹ ಸಂದರ್ಭಗಳನ್ನಾದರೂ ದುರುಪಯೋಗ ಪಡಿಸಿಕೊಳ್ಳಲು ತಾವು ಹಿಂಜರಿಯುವುದಿಲ್ಲ ಎಂಬುದನ್ನು ಹಿಂದುತ್ವವಾದಿಗಳು ಜಗತ್ತಿಗೆ ತೋರಿಸಿಕೊಟ್ಟರು.

ಕೋವಿಡ್–19 ರ ತೀವ್ರ ಸಂಕಷ್ಟದ ಸಂದರ್ಭವನ್ನೂ ಕೋಮು ದ್ವೇಷ ಹರಡಲು ಬಳಸಿಕೊಂಡ ಬಿಜೆಪಿ ಮತ್ತು ಸಂಘಪರಿವಾರ

ಸಿ. ಸಿದ್ದಯ್ಯ

"ಬೆಂಗ್ಳೂರು ಜನರೇ ಎಚ್ಚರ – ಕೊರೊನಾ ಅಡ್ಡವಾಗ್ತಿದೆ ಪಾದರಾಯನಪುರ" ಇದು ಪಬ್ಲಿಕ್ ಟಿವಿ ಸುದ್ದಿ.

"ಬೆಂಗಳೂರಿನ ಪಾದರಾಯನಪುರ ಆಗ್ತಿದ್ಯಾ ಕೊರೊನಾ ಕಾರ್ಖಾನೆ?" ಇದು ಟಿವಿ 9 ಸುದ್ದಿ.


"ಮಾತ್ರೆ ತಗೊಂಡು ಜ್ವರ ಮುಚ್ಚಿಟ್ಟಿದ್ರಾ ಪಾದರಾಯನಪುರ ಪುಂಡರು?" ಇದು PublicNext ಎಂಬ ಮಾಧ್ಯಮದಲ್ಲಿನ ಸುದ್ದಿವೊಂದರ ತಲೆಬರಹ.

ಎಲ್ಲೆಡೆ ಕೊರೊನ ಹರಡುವ 'ಸೂಪರ್ ಸ್ಪ್ರೆಡರ್' ಆಗಿದ್ದಾರೆ ಪಾದರಾಯನಪುರ ಜನರು ಇದು ಮತ್ತೊಂದು ಸುದ್ದಿ ಮಾಧ್ಯಮದ ಬರಹ.

ಹೀಗೆ ಸುದ್ದಿ ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮುಸ್ಲೀಮರ ವಿರುದ್ಧ ವ್ಯಾಪಕ ಅಪಪ್ರಚಾರ ನಡೆಯುತ್ತಿತ್ತು. ಇದರ ಜೊತೆಗೆ ಸುವರ್ಣ ನ್ಯೂಸ್ ಕನ್ನಡ ಚಾನಲ್ ಕೂಡ ಮುಸ್ಲೀಮರ ವಿರುದ್ಧ ನೇರ ಯುದ್ಧವನ್ನೇ ಸಾರಿತ್ತು. ದಿನದ 24 ಗಂಟೆಗಳೂ ಮುಸ್ಲೀಮರ ವಿರುದ್ಧ ದ್ವೇಷ ಬಿತ್ತುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡತೊಡಗಿತ್ತು.

ಪಾದರಾಯನಪುರವೇ ಏಕೆ?

ಬೆಂಗಳೂರು ನಗರದಲ್ಲಿ COVID-19 ರ ಮೊದಲ ಹಾಟ್ಸ್ಪಾಟ್ ಎಂದು ಪಾದರಾಯನಪುರವನ್ನು ಏಪ್ರಿಲ್ ಮಧ್ಯದಲ್ಲಿ ಘೋಷಿಸಲಾಯಿತು. ಪಾದರಾಯನಪುರವನ್ನು ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿದಾಗ ಅಲ್ಲಿ ಐದು ಕೋವಿಡ್ –19 ಪಾಸಿಟಿವ್ ಕಂಡುಬಂದಿತ್ತು. ಇದರ ಜೊತೆಗೆ ಪಕ್ಕದ ಬಾಪೂಜಿನಗರದಲ್ಲೂ ಕಂಟೈನ್‌ಮೆಂಟ್ ವಲಯ ಎಂದು ಘೋಷಿಸಿದರು. ಇದೇ ಸಮಯದಲ್ಲಿ ಬೆಂಗಳೂರಿನ ಅಜಾದ್ ನಗರದಲ್ಲಿ 5 ಪಾಸಿಟಿವ್, ಸಿಂಗಸಂದ್ರ, ಜೆಪಿ ನಗರ ಮತ್ತು ರಾಧಾಕೃಷ್ಣ ಟೆಂಪಲ್ ವಾರ್ಡ್ ಇವುಗಳಲ್ಲಿ ತಲಾ 4 ಪಾಸಿಟಿವ್



ವರದಿಯಾಗಿದ್ದವು. ಈ ಎಲ್ಲಾ ಪ್ರದೇಶಗಳನ್ನು ಬಿಟ್ಟು, ನಮ್ಮ ಮಾಧ್ಯಮಗಳು, ಬಿಬಿಎಂಪಿ ಅಧಿಕಾರಿಗಳು ಮತ್ತು ಸಂಘಪರಿವಾರದವರಿಗೆ ಮುಸ್ಲೀಮರು ಹೆಚ್ಚಿನ ಸಂಖ್ಯೆಯಲ್ಲಿದ್ದ ಪಾದರಾಯನಪುರದ ಮೇಲೆಯೇ ಏಕೆ ಕಣ್ಣು ಬಿತ್ತು ಎಂಬ ಪ್ರಶ್ನೆಗೆ ಉತ್ತರ ಬಹಳ ಸ್ಪಷ್ಟವಾಗಿ ಗೋಚರಿಸುತ್ತದೆ.

ಪೊಲೀಸರ ಕೆಲಸವನ್ನು ಮಾಧ್ಯಮದವರೇ ಮಾಡಿದರು

ಸಂಘಪರಿವಾರದವರು ಮಾಧ್ಯಮಗಳ ಮೂಲಕ 'ಕೊರೊನಾ ಪಾದರಾಯನಪುರದಿಂದ ಹರಡುತ್ತಿದೆ' ಎಂಬಂತೆ ಪ್ರಚಾರ ಮಾಡಿದರು. ಕೆಲವೊಮ್ಮೆ ಇಲ್ಲಿ ಪೊಲೀಸರ ಕೆಲಸವನ್ನು ಮಾಧ್ಯಮದವರೇ ಮಾಡಿದರು. ಜನರು ಮನೆಯ ಬಾಗಿಲು ತೆರೆದು ಹೊರಬರುವುದನ್ನೇ ಕಾಯುತ್ತಾ ವಿಡಿಯೋ ಚಿತ್ರೀಕರಿಸಿ ಪ್ರಸಾರ ಮಾಡಿದರು. ಹೊರಬಂದವರನ್ನು ನಡುರಸ್ತೆಯಲ್ಲೇ ಅಡ್ಡಗಟ್ಟಿ ಪ್ರಶ್ನಿಸಿದರು, 'ಸೋಂಕು ಹರಡಲೆಂದೇ ಬರುತ್ತಿರುವಿರಿ' ಎಂದು ಆರೋಪಿಸಿದರು. ಮಕ್ಕಳಿಗೆ ಹಾಲು ತರಲು, ಊಟಕ್ಕೆ ಬೇಕಾದ ದವಸ, ಧಾನ್ಯ, ತರಕಾರಿ ತರಲೂ ಮನೆಯಿಂದ ಹೊರಬರುವಂತಿರಲಿಲ್ಲ. ಆಡಳಿತವೂ ಜನರಿಗೆ ಬದುಕಲು ಅವಶ್ಯಕವಾದ ಪದಾರ್ಥಗಳನ್ನು ಇವರ ಮನೆಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಿರಲಿಲ್ಲ. ಕೆಲವು ಸಂಘ ಸಂಸ್ಥೆಗಳು ಈ ಕೆಲಸ ಮಾಡುತ್ತಿದ್ದರೂ, ಇದು ಎಲ್ಲರ ಮನೆಗಳಿಗೆ ತಲುಪುತ್ತಿರಲಿಲ್ಲ.

ಕಂಟೈನ್‌ಮೆಂಟ್ ವಲಯದಲ್ಲಿ ಏನನ್ನೂ ಮಾರಾಟ ಮಾಡಲು ಅವಕಾಶ ಇರಲಿಲ್ಲವಾದ ಕಾರಣ, ಅನಿವಾರ್ಯವಾಗಿ ಪೊಲೀಸರ ಕಣ್ಣು ತಪ್ಪಿಸಿ, ಆ ಪ್ರದೇಶದ ಗಡಿಯಲ್ಲಿ ಅಡ್ಡಲಾಗಿ ಇಟ್ಟಿದ್ದ ತಡೆಗೋಡೆಗಳನ್ನು ದಾಟಿ ಹೊರಬಂದು, ತಮಗೆ ಬೇಕಾದ ಪದಾರ್ಥಗಳನ್ನು ಖರೀದಿಸುವುದು ಇಲ್ಲಿನ ನಿವಾಸಿಗಳಿಗೆ ಅನಿವಾರ್ಯವಾಗಿತ್ತು. ಇವರಲ್ಲಿ ಹಿಂದೂ, ಮುಸ್ಲೀಂ, ಕ್ರೈಸ್ತ ಧರ್ಮಕ್ಕೆ ಸೇರಿದವರೂ ಇದ್ದರು. ಮಹಿಳೆಯರೂ ಮನೆಯಿಂದ ಹೊರಬಂದು ಅಗತ್ಯ ವಸ್ತುಗಳನ್ನು ಕೊಳ್ಳುವ ಸಾಹಸ ಮಾಡುತ್ತಿದ್ದರು. ಏಕೆಂದರೆ, ಅವರು ತಮ್ಮ ಹಸಿವನ್ನು ನೀಗಿಸಿಕೊಳ್ಳಬೇಕಿತ್ತು. ತಮ್ಮ ಮನೆಯಲ್ಲಿರುವ ಸಕ್ಕರೆ ಖಾಯಿಲೆ, ರಕ್ತದೊತ್ತಡ ಇಂತಹ ಬೇರೆ ಬೇರೆ ಖಾಯಿಲೆಯುಳ್ಳ ರೋಗಿಗಳಿಗೆ ಔಷಧಿ ಖರೀದಿಸುವ ಅನಿವಾರ್ಯತೆ ಇತ್ತು. ಮಾಧ್ಯಮಗಳು ಈ ರೀತಿ ಬ್ಯಾರಿಕೇಡ್ ದಾಟುವ ಮಹಿಳೆಯರ ವಿಡಿಯೋ ಚಿತ್ರೀಕರಿಸಿ, ಅಂತಹ ಮಹಿಳೆಯರನ್ನು ನಿಂದಿಸಿ 'ಕೊರೊನಾ ಹರಡಲೆಂದೇ ಹೊರಗೆ ಬರುತ್ತಿದ್ದಾರೆ' ಎಂದು ಪ್ರಸಾರ ಮಾಡಿದರು. ಬೆಂಗಳೂರಿನ ಇತರೆ ಪ್ರದೇಶಗಳಲ್ಲಿಯೂ ಕೊರೊನಾ ಸೊಂಕಿತರಿದ್ದರೂ ಈ ಮಾಧ್ಯಮಗಳ ಸಿಬ್ಬಂದಿಗಳು ಮುಸ್ಲೀಮರನ್ನೇ ಗುರಿಯಾಗಿಸಿಕೊಂಡು ಕ್ಯಾಮರಾ ಹಿಡಿದು ಕಾಯುತ್ತಿದ್ದರು.

ವೈರಸ್ ಹರಡಲು 'ಎಂಜಲು ಸವರುತ್ತಿದ್ದಾರೆ' ಎಂದರು


ಬದುಕು ಸಾಗಿಸಲು ಬೀದಿ ಬದಿ ವ್ಯಾಪಾರ ಮಾಡಲು ಬರುವ ಮುಸ್ಲೀಮರ ವಿರುದ್ಧ 'ಕೊರೊನಾ ಹರಡಲು ರಸ್ತೆಗೆ ಬಂದಿದ್ದಾರೆ', 'ಇವರು ಮಾರುವ ಹಣ್ಣುಗಳಿಗೆ ಎಂಜಲು ಸವರುವ ಮೂಲಕ ಕೊರೊನಾ ಹರಡುತ್ತಿದ್ದಾರೆ', 'ನೋಟುಗಳಿಗೆ ಎಂಜಲು ಸವರುತ್ತಿದ್ದಾರೆ', ಎನ್ನುವ ಹಲವು ಬಗೆಯ ಅಸತ್ಯದ ಕತೆ ಕಟ್ಟಿ ಸುದ್ದಿ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿದರು. ಹಣ್ಣಿನ ವ್ಯಾಪಾರಿಯೊಬ್ಬ ನೆಲಕ್ಕೆ ಉಗುಳಿದಾಗ 'ಕೊರೊನಾ ಹರಡೊಕೆ ಹೀಗೆಲ್ಲಾ ಮಾಡುತ್ತಿರುವೆ' ಎನ್ನುತ್ತಾ ಆತನ ಮೇಲೆ ಹಲ್ಲೆ ನಡೆಸಿದರು. ಇದನ್ನೂ ವ್ಯಾಪಕವಾಗಿ ಪ್ರಚಾರ ಮಾಡಿದರು.

'ನಿಜವಾಗಿಯೂ ಅವರು ಸೋಂಕಿತರಾಗಿದ್ದರೆ, ಅವರು ವ್ಯಾಪಾರ ಮಾಡಲು ರಸ್ತೆಗೆ ಬರಲು ಸಾಧ್ಯವಾಗುತ್ತಿತ್ತೇ? ಅಂಥವರು ಅನಾರೊಗ್ಯದಿಂದ ನರಳುತ್ತಾ ಮಲಗುತ್ತಿದ್ದರಲ್ಲವೇ? ಯಾರಾದರೂ ತಮಗೆ ಕೊರೊನಾ ಸೋಂಕು ತಗುಲಿರುವುದನ್ನು ಮುಚ್ಚಿಡಲು ಸಾಧ್ಯವೇ? ಸೋಂಕು ತಗುಲಿ, ಚಿಕಿತ್ಸೆ ಪಡೆಯದಿದ್ದರೆ ಇವರೂ ಸಾಯುತ್ತಾರಲ್ಲವೇ? ಇಷ್ಟಕ್ಕೂ ಬೇರೆಯವಿಗೆ ಸೋಂಕು ತಗುಲಿಸಿ ಇವರಿಗೆ ಬರುವ ಲಾಭವಾದರೂ ಏನು?' ಹೀಗೆ ಯಾವುದನ್ನೂ ಯೋಚಿಸದ ಕೆಲವರು ಇಂತಹ ಸುಳ್ಳುಗಳನ್ನು ನಿಜ ಎಂದೇ ತಾವೂ ನಂಬಿ, ಇತರರಿಗೂ ಪ್ರಚಾರ ಮಾಡಿದರು. ಇಂಥವರ ಮೆದುಳು ಕೋಮು ವಿಷದಿಂದ ತುಂಬಿಹೋಗಿತ್ತು.

ಎಲ್ಲಾ 25,000 ಜನರನ್ನೂ ಪರೀಕ್ಷೆಗೆ ಒಳಪಡಿಸಲು ಮುಂದಾದರು

ಪಾದರಾಯನಪುರದಲ್ಲಿ ವಾಸಿಸುವ ಎಲ್ಲಾ 25 ಸಾವಿರ ಜನರನ್ನು ಕೊರೊನಾ ಟೆಸ್ಟ್ ಗೆ ಒಳಪಡಿಸಲು ಬಿಬಿಎಂಪಿ ಮುಂದಾಯಿತು. ಅಧಿಕಾರಿಗಳನ್ನು, ಆರೋಗ್ಯ ಕಾರ್ಯಕರ್ತರನ್ನು ಆ ಪ್ರದೇಶಕ್ಕೆ ಕಳುಹಿಸಿ, ಮೊದಲಿಗೆ ಸೋಂಕಿತರ ಎರಡನೆಯ ಸಂಪರ್ಕಗಳನ್ನು ಗುರುತಿಸಿ, ಅವರನ್ನೂ ಬಲವಂತವಾಗಿ ಕ್ವಾರಂಟೈನ್ ಮಾಡಲು ಪ್ರಾರಂಭಿಸಿದಾಗ, ಪ್ರದೇಶದ ಜನರು ಭಯಭೀತರಾದರು, ಇದು ಘರ್ಷಣೆಗೆ ಕಾರಣವಾಯಿತು. ಕೆಲವು ಅಶಿಸ್ತಿನ ಯುವಕರು ಪೊಲೀಸ್ ಬ್ಯಾರಿಕೇಡ್ ಗಳನ್ನು ಮುರಿದು ಆರೋಗ್ಯ ಕಾರ್ಯಕರ್ತರನ್ನು ಥಳಿಸಿದರು. ನಂತರ ಆ ಪ್ರದೇಶದಲ್ಲಿ ಪೊಲೀಸರ ದೊಡ್ಡ ಪಡೆಯನ್ನು ನಿಯೋಜಿಸಲಾಯಿತು.

ಇದು ಪಾದರಾಯನಪುರಕ್ಕೆ ಮಾತ್ರ ಸೀಮಿತವಾಗಿರದೆ, ಮುಸ್ಲೀಮರ ಸಂಖ್ಯೆ ಹೆಚ್ಚಾಗಿರುವ ಶಿವಾಜಿ ನಗರ, ಗೋರಿಪಾಳ್ಯ, ಹಳೆ ಗುಡ್ಡದಹಳ್ಳಿ ಮೇಲೂ ಹಿಂದುತ್ವವಾದಿ ಮನಸ್ಥಿತಿಯ ಮಾಧ್ಯಮಗಳ ಕ್ಯಾಮರಾ ಕಣ್ಣುಗಳು ದೃಷ್ಟಿ ನೆಟ್ಟಿದ್ದವು.



ಜಗತ್ತನ್ನೇ ಆವರಿಸಿಕೊಂಡಿದ್ದ ಕೋವಿಡ್–19 ಎಂಬ ಸಾಂಕ್ರಾಮಿಕವನ್ನು ತಡೆಗಟ್ಟಲು ಮೋದಿ ಸರ್ಕಾರ ಎಷ್ಟೊಂದು ವಿಫಲವಾಯಿತು ಎಂಬುದನ್ನು ನಾವಿಲ್ಲಿ ನೋಡಬೇಕಿದೆ. ಇಂತಹ ಭೀಕರವಾದ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಸಾಂಕ್ರಾಮಿಕ ಹರಡುವಿಕೆಯನ್ನು ತಡೆಯಲು ಮತ್ತು ಸೋಂಕಿತರನ್ನು ಪ್ರಾಣಾಪಾಯದಿಂದ ರಕ್ಷಿಸಲು ಆಡಳಿತ ಯಂತ್ರ ಎಲ್ಲರ ಸಹಕಾರದೊಂದಿಗೆ ಯುದ್ಧೋಪಾದಿಯಲ್ಲಿ ಮುಂದಾಗಬೇಕಿತ್ತು. ಆದರೆ, ಮೋದಿ ಸರ್ಕಾರ ಮತ್ತು ಹಿಂದುತ್ವವಾದಿಗಳು ಇಂತಹ ಸಂಕಷ್ಟದ ಸಮಯವನ್ನೂ ತಮ್ಮ ಹಿಂದುತ್ವದ ಅಜೆಂಡಾ ಜಾರಿಗೆ ತರಲು ಬಳಕೆಮಾಡಿಕೊಂಡರು. ತಮ್ಮಲ್ಲಿ ಮಾನವೀಯತೆ ಎಂಬುದೇ ಇಲ್ಲ ಎನ್ನುವುದನ್ನು ಈ ಮೂಲಕ ಜಗತ್ತಿಗೆ ತೋರಿಸಿಕೊಟ್ಟರು.

ಮೋದಿ–10 ವರ್ಷಗಳು / ಭಾಗ–45

ಭಾರತದಲ್ಲಿ ವೈರಸ್ ಹರಡುವಿಕೆ ನಿಯಂತ್ರಿಸಲಿಲ್ಲ

ಭಾರತಕ್ಕೆ ಕೊರೋನಾ ವೈರಸ್ ಬಂದದ್ದು 2020ರ ಮಾರ್ಚ್ ತಿಂಗಳಿನಲ್ಲಿ. ಆದರೆ, ಈ ವೈರಸ್ ನ "ಕೊವಿಡ್–19" ಎಂಬ ಹೆಸರೇ ಸೂಚಿಸುವಂತೆ ಇದರ ಹುಟ್ಟು ಡಿಸೆಂಬರ್ 2019ರ ಆರಂಭದಲ್ಲಿ. ಚೀನಾದಲ್ಲಿ ಮೊದಲ ಬಾರಿಗೆ ಇದು ಕಾಣಿಸಿಕೊಂಡಿತು. ಹುಬೈ ಪ್ರಾಂತ್ಯದ ರಾಜಧಾನಿಯಾದ ವುಹಾನ್‌ನಲ್ಲಿ ಅಜ್ಞಾತ ಮೂಲದ ಮೊದಲ ನ್ಯುಮೋನಿಯಾ ಪ್ರಕರಣಗಳನ್ನು ಗುರುತಿಸಲಾಯಿತು. ನಂತರ ಕೊರೊನಾ ವೈರಸ್ ಕಾಯಿಲೆ ಚೀನಾದಾದ್ಯಂತ ವೇಗವಾಗಿ ಹರಡಿತು. ಇದು ಭಾರತ ಸೇರಿದಂತೆ ಇಡೀ ಜಗತ್ತಿಗೇ ತಿಳಿದಿತ್ತು. ಭಾರತದ ಮಾಧ್ಯಮಗಳಲ್ಲಿಯೂ ಚೀನಾದಲ್ಲಿ ಕೊರೊನಾ ಸೋಂಕಿನಿಂದ ನರಳುವವರ, ಇದ್ದಕ್ಕಿಂತೆ ಕುಸಿದು ಬಿದ್ದು ಸಾಯುವವರ ಮನಕಲಕುವ ದೃಶ್ಯಗಳು ಬಿತ್ತರವಾಗುತ್ತಿದ್ದವು. ವೈರಸ್ ವ್ಯಾಪಕವಾಗಿ ಹರಡುವ ಬಗ್ಗೆ, ಅದರ ಭೀಕರ ಅಪಾಯದ ಬಗ್ಗೆ ಚೀನಾ ಜಗತ್ತಿಗೆ ಎಚ್ಚರಿಕೆಯನ್ನೂ ಕೊಟ್ಟಿತ್ತು. ಆದರೆ, ಅಮೆರಿಕಾದಂತೆ ಭಾರತವೂ ಮತ್ತು ಜಗತ್ತಿನ ಬಹುತೇಕ ದೇಶಗಳು ಚೀನಾದ ಎಚ್ಚರಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ನಂತರ ಇದು ಜಗತ್ತಿನ ಕೋಟ್ಯಾಂತರ ಜನರ ಪ್ರಾಣ ಬಲಿತೆಗೆದುಕೊಂಡಿತು.

ಚೀನಾದ ಹುನಾನ್ ಪ್ರಾಂತ್ಯದಲ್ಲಿ ಕೊರೊನಾ ವೈರಸ್ ಹಾವಳಿ ನಡೆಸುವಾಗ ಭಾರತ ಸೇರಿದಂತೆ ಜಗತ್ತಿನ ಬಹುತೇಕ ರಾಷ್ಟ್ರಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿಲ್ಲ. ಚೀನಾ ದಾಟಿ ಅಮೆರಿಕ ಸೇರಿದಂತೆ ಇತರೆ ರಾಷ್ಟ್ರಗಳಿಗೆ ವೈರಸ್ ದಾಳಿ ಇಟ್ಟಾಗ, ಭಾರತದ ಆಳುವ ಮಂದಿ ಅದು ಭಾರತಕ್ಕೆ ಪ್ರವೇಶ ಮಾಡದಂತೆ ತಡೆಯಲು ಯಾವುದೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿಲ್ಲ. 2020ರ ಜನವರಿ 30 ರಂದು ಭಾರತದಲ್ಲಿ (ಕೇರಳದಲ್ಲಿ) ಮೊದಲ ಸೋಂಕಿತರು ಕಂಡುಬಂದರು. ಆ ನಂತರವೂ ಭಾರತ ಸರ್ಕಾರ ಎಚ್ಚೆತ್ತುಕೊಳ್ಳಲಿಲ್ಲ. ಅಂತರರಾಷ್ಟ್ರೀಯ ವಿಮಾನ ಹಾರಾಟಕ್ಕೆ, ಹಡಗುಗಳ ಸಂಚಾರಕ್ಕೆ ಸರ್ಕಾರ ನಿರ್ಭಂದ ಹೇರಲಿಲ್ಲ.

ಪುಟ 15 ಕ್ಕೆ

ನಾಡನ್ನೇ ಸರ್ವನಾಶ ಮಾಡಿದ ಬಿಜೆಪಿ ಉಳಿಯುವ ಸಾಧ್ಯತೆ ಇಲ್ಲ–ಪರಕಾಲ ಪ್ರಭಾಕರ್

ಭಾರತ ಈಗ ನಿರ್ಣಾಯಕ ಘಟ್ಟದಲ್ಲಿದೆ. ಸಂಘಪರಿವಾರದ ಬೆದರಿಕೆ ಮತ್ತು ಸರ್ವಾಧಿಕಾರಕ್ಕೆ ಹಿಂದೂ ಧರ್ಮ ಶರಣಾಗಬೇಕೇ ಎಂಬುದು ಇಂದಿನ ಪ್ರಶ್ನೆಯಾಗಿದೆ. ಇವರಿಗೆ ನಾವು ಬಾಗಿದರೆ ನಮ್ಮ ದೇಶವೇ ಬಾಗಿದಂತಾಗುತ್ತದೆ. ಮೋದಿ–ಅಮಿತ್ ಷಾ–ಬಿಜೆಪಿ–ಆರ್.ಎಸ್.ಎಸ್. ಮೈತ್ರಿಯೊಂದಿಗೆ ರಾಜಿ ಮಾಡಿಕೊಂಡು, ಚೌಕಾಸಿ ಮಾಡಿ, ಸಣ್ಣಪುಟ್ಟ ಸ್ಥಾನ ಗಿಟ್ಟಿಸಿಕೊಳ್ಳುವವರು ದೇಶದ ಸ್ಥಿತಿಯನ್ನು ಅಧೋಗತಿಗೆ ತಳ್ಳುತ್ತಿದ್ದಾರೆ.

ಪರಕಾಲ ಪ್ರಭಾಕರ್ ಆರ್ಥಿಕ ವಿಶ್ಲೇಷಕರಾಗಿ, ರಾಜಕೀಯ ವೀಕ್ಷಕರಾಗಿ ಮತ್ತು ಸಾಮಾಜಿಕ ಚಿಂತಕರಾಗಿ ಪ್ರಸಿದ್ಧರಾಗಿದ್ದಾರೆ. ಅವರ ಪತ್ನಿ ನಿರ್ಮಲಾ ಸೀತಾರಾಮನ್ ಅವರು ನರೇಂದ್ರ ಮೋದಿ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದಾರೆ ಎಂಬುದು ಇಲ್ಲಿ ಗಮನಾರ್ಹ. ಆದರೆ ಪರಕಾಲ ಪ್ರಭಾಕರ್ ಅವರು ಮೋದಿ ಸರ್ಕಾರ ಮತ್ತು ಅವರ ಆಡಳಿತದ ಅವಧಿಯಲ್ಲಿ ದೇಶದ ಆರ್ಥಿಕತೆಯ ಅಧಃಪತನವನ್ನು ತೀವ್ರವಾಗಿ ಟೀಕಿಸುತ್ತಿದ್ದಾರೆ. 'ದೇಶಾಭಿಮಾನಿ' ಪತ್ರಿಕೆಯ ಪಿ.ವಿ.ಜೀಜೋ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಕಟುವಾಗಿ ಟೀಕಿಸಿದ್ದಾರೆ.

ನಮ್ಮ ದೇಶ ಜಗತ್ತಿನ ಸೂಪರ್ ಪವರ್ ಆಗಲಿದೆ ಎಂದು ಪ್ರಧಾನಿ ಮೋದಿ ಹಾಗೂ ಸಂಘಪರಿವಾರದವರು ಸುಳ್ಳು ಹೇಳತೊಡಗಿದ್ದಾರೆ. ಆದರೆ, ರಾಷ್ಟ್ರೀಯ ಆರ್ಥಿಕ ಮುನ್ನಡೆಯಲ್ಲಿ ಶೇಕಡಾ 19 ರಷ್ಟು ಕುಸಿತ ಕಂಡುಬಂದಿದೆ. ಆಕ್ಸ್‌ಫ್ಯಾಮ್, ವಿಶ್ವ ಬ್ಯಾಂಕ್, ವಿಶ್ವಸಂಸ್ಥೆ ಭಾರತದ ಪರಿಸ್ಥಿತಿ ಹದಗೆಟ್ಟಿದೆ ಎಂದು ವರದಿ ಮಾಡಿವೆ. ಭಾರತದ ಮೆಗಾ–ಬಿಲಿಯನೇರ್‌ಗಳು ಹೆಚ್ಚಾದರು. ಅವರ ಆರ್ಥಿಕ ಅಭಿವೃದ್ಧಿಯನ್ನು ದೇಶದ ಅಭಿವೃದ್ಧಿ ಎಂದು ನೋಡಬಹುದೇ? 2020 ರಲ್ಲಿ, 102 ಬಿಲಿಯನೇರ್‌ಗಳಿದ್ದರು. ಆಕ್ಸ್‌ಫ್ಯಾಮ್‌ನ ಇತ್ತೀಚಿನ ಅಧ್ಯಯನವು ಮುಂದಿನ ವರ್ಷ ಇದು 142 ಆಗಲಿದೆ ಎಂದು ಹೇಳಿದೆ.

ಮರೆಯಬಾರದು

2021–22ರ ವೇಳೆಗೆ ಭಾರತವು 75 ಲಕ್ಷ ಹಸಿದ ಜನರನ್ನು ಸೃಷ್ಟಿಸಿದೆ. ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ಪ್ರಕಟಿಸಿದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಾವು 134 ನೇ ಸ್ಥಾನದಲ್ಲಿದ್ದೇವೆ. ಆಳುವವರು ಅದನ್ನು ಸೂಪರ್ ಆರ್ಥಿಕ ಶಕ್ತಿ ಎಂದು ಉಲ್ಲೇಖಿಸುತ್ತಾರೆ. ಆದರೆ, ಅಭಿವೃದ್ಧಿ ಸೂಚ್ಯಂಕದಲ್ಲಿ ಕೇವಲ 18 ದೇಶಗಳು ಮಾತ್ರ ನಮ್ಮ ಹಿಂದೆ ಉಳಿದಿರುವುದು ಮೋದಿ ಸರಕಾರದ ಸುಳ್ಳು ಪ್ರಚಾರದ ಪೊಳ್ಳುತನವನ್ನು ತೋರಿಸುತ್ತದೆ. 2022 ರ ವಿಶ್ವ ಹಸಿವಿನ ಸೂಚ್ಯಂಕದಲ್ಲಿ ನಮ್ಮ ದಾಖಲೆಯು ಹೆಮ್ಮೆಪಡುವಂಥದ್ದಲ್ಲ. ಈ ಪಟ್ಟಿಯಲ್ಲಿ ಭಾರತ 107ನೇ ಸ್ಥಾನದಲ್ಲಿದೆ. ಈ ಪಟ್ಟಿಯಲ್ಲಿ ಕೇವಲ 121 ದೇಶಗಳಿವೆ ಎಂಬುದನ್ನು ಮರೆಯಬಾರದು.

ಬಡವರ ಹಸಿವು ಮತ್ತು ಕೋಟ್ಯಾಧಿಪತಿಗಳ ಬೆಳವಣಿಗೆ

ನಿರುದ್ಯೋಗ, ಸಾಕ್ಷರತೆ, ಆರೋಗ್ಯ ಇತ್ಯಾದಿ ವಿಚಾರದಲ್ಲಿ ಬಿಜೆಪಿ ಸರಕಾರ ನಮ್ಮನ್ನು ಇನ್ನಷ್ಟು ಕೆಳಗಿಳಿಸಿದೆ. ಅಧ್ಯಯನಗಳ ಪ್ರಕಾರ, ಜಗತ್ತಿನಲ್ಲಿ ಹಸಿವಿನಿಂದ ಮತ್ತು ಅಪೌಷ್ಟಿಕತೆಯಿಂದ ನರಳುತ್ತಿರುವ ಜನರ ಅರ್ಧದಷ್ಟು ಜನರು ಭಾರತದಲ್ಲಿದ್ದಾರೆ. ಈ ಸತ್ಯವನ್ನು 'ಸೂಪರ್ ಪವರ್' ಎಂಬ ಅಭಿಯಾನ ಮುಚ್ಚಿಹಾಕಿದೆ. ವಾಸ್ತವವಾಗಿ, 'ಭಾರತ ಸೂಪರ್ ಪವರ್ ಅಲ್ಲ, ಇದು ಸೂಪರ್ ಬಡ ದೇಶ'. ಮೋದಿ ಆಡಳಿತದಲ್ಲಿ ದೇಶ ಬಡತನದಿಂದ ಕಡು ಬಡತನಕ್ಕೆ ತಳ್ಳಲ್ಪಟ್ಟಿದೆ. ಅಂಬಾನಿ–ಅದಾನಿಗಳು ಬೃಹದಾಕಾರವಾಗಿ ಬೆಳೆದಿದ್ದಾರೆ. ಅದೇ ಸಮಯದಲ್ಲಿ, ಬಡವರ ಜೀವನವು ಮತ್ತಷ್ಟು ಹದಗೆಟ್ಟಿದೆ ಎಂದು ವಾಸ್ತವ ಪರಿಸ್ಥಿತಿ ತೋರಿಸುತ್ತವೆ. ದೇಶದ 100 ಬಿಲಿಯನೇರ್‌ಗಳ ಆದಾಯ 975 ಬಿಲಿಯನ್ ಡಾಲರ್ (ಬಿಲಿಯನ್ ಎಂದರೆ 100 ಕೋಟಿ. 975 ಬಿಲಿಯನ್ ಡಾಲರ್ ಎಂದರೆ ರೂಪಾಯಿಗಳಲ್ಲಿ ಅಂದಾಜು 81 ಲಕ್ಷ ಕೋಟಿ). ಏತನ್ಮಧ್ಯೆ, ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ 59 ಲಕ್ಷದಿಂದ ಮೂರು ಪಟ್ಟು ಹೆಚ್ಚಾಗಿದೆ. ಇದನ್ನೇ ಅವರು ಸೂಪರ್ ಪವರ್ ಆರ್ಥಿಕತೆ ಎಂದು ಪ್ರಚಾರ ಮಾಡುತ್ತಾರೆ. ಹತ್ತಾರು ಕೋಟಿ ಜನರು ಬಡತನದ ನರಕದಲ್ಲಿ ಬದುಕುತ್ತಿರುವಾಗ ಭಾರತ ಸೂಪರ್ ಪವರ್ ಎಂದು ಬಿಂಬಿಸುತ್ತಿರುವುದು ಸತ್ಯಗಳನ್ನು ಅಪಹಾಸ್ಯ ಮಾಡುತ್ತದೆ. ಮೋದಿ ಆಡಳಿತವು ಭಾರತವನ್ನು ಬಡ ದೇಶವನ್ನಾಗಿ ಮಾಡಿದೆ ಎಂಬುದು ವಾಸ್ತವ. ಸ್ವಾತಂತ್ರ್ಯ ನಂತರ 2014ರಲ್ಲಿ ಮೋದಿ ಅಧಿಕಾರಕ್ಕೆ ಬರುವವರೆಗೆ ನಮ್ಮ ಸಾಲ 50 ಲಕ್ಷಕೋಟಿ ಇತ್ತು. ಆದರೆ ಕೇವಲ ಹತ್ತು ವರ್ಷಗಳ ಬಿಜೆಪಿ ಮತ್ತು ಮೋದಿ ಆಡಳಿತದಲ್ಲಿ ಮಾಡಿರುವ ಸಾಲ 100 ಲಕ್ಷಕೋಟಿ ರೂ. ಈ ಅಂಕಿಅಂಶಗಳು, ಅಭಿವೃದ್ಧಿ ಕುರಿತ ಅವರ ವಾಕ್ಚಾತುರ್ಯದಿಂದಾಗಿ ಮರೆಯಾಗಿವೆ.

ಚುನಾವಣಾ ಬಾಂಡ್ ಹಗರಣ ಬಿಜೆಪಿ

ನಿರುದ್ಯೋಗದ ಸ್ಥಿತಿ ತೀರಾ ಹದಗೆಟ್ಟಿದೆ. ನಮ್ಮ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಯುವಜನರು. ಅವರಲ್ಲಿ ನಿರುದ್ಯೋಗ ಸುಮಾರು ಶೇ.25 ರಷ್ಟಿದೆ. ಬಿಜೆಪಿಯುವರ ಹೇಳುವಂತೆ ಆರ್ಥಿಕತೆ ಸುಧಾರಿಸಿದ್ದರೆ ಹಸಿವು ಮತ್ತು ನಿರುದ್ಯೋಗ ಏಕೆ ಕಡಿಮೆಯಾಗುವುದಿಲ್ಲ? ದಿನದಿಂದ ದಿನಕ್ಕೆ ಅಸಮಾನತೆ ಏಕೆ ಹೆಚ್ಚುತ್ತಿದೆ? ಈ ಪ್ರಶ್ನೆಗಳಿಗೆ ಮೋದಿ ಅಥವಾ ಅವರ ಬೆಂಬಲಿಗರು ಉತ್ತರಿಸಲು ಸಾಧ್ಯವಾಗಲಿಲ್ಲ. ವಿಮಾನ ನಿಲ್ದಾಣಗಳು, ಏರ್ ಇಂಡಿಯಾ, ಡಿಪಾರ್ಟ್‌ಮೆಂಟ್ ಸ್ಟೋರ್‌ಗಳು, ಕಾರ್ಖಾನೆಗಳು ಮತ್ತು ಮೆಗಾ ಯೋಜನೆಗಳನ್ನು ಕೋಟ್ಯಾಧಿಪತಿಗಳಿಗೆ ಹಸ್ತಾಂತರಿಸಲಾಗುತ್ತಿದೆ. ಅವರಿಂದ ಚುನಾವಣಾ ಬಾಂಡ್ ಗಳ ಮೂಲಕ ಹಣ ಪಡೆಯುತ್ತಿದ್ದಾರೆ. ಭ್ರಷ್ಟ ಕೋಟ್ಯಾಧಿಪತಿಗಳ ಪರವಾಗಿ ತಮಗಿರುವ ಅಧಿಕಾರ ದುರುಪಯೋಗಪಡಿಸಿಕೊಂಡ ಈ ಆಡಳಿತದಿಂದ ದೇಶಕ್ಕೆ ಆಗಿರುವ ಹಾನಿ ಅಷ್ಟಿಷ್ಟಲ್ಲ.

ಮಾರ್ಕ್ಸ್‌ವಾದಿ ಪಕ್ಷದ ಧೈರ್ಯ

ದೇಶದಲ್ಲಿ ಚುನಾವಣಾ ಬಾಂಡ್ ಹಗರಣವನ್ನು ಸೃಷ್ಟಿಸಿದ ಬಿಜೆಪಿ ಸರ್ಕಾರ ಹಣಗಳಿಕೆ ಮತ್ತು ಕಾರ್ಪೊರೇಟೀಕರಣಕ್ಕೆ ಕಾರಣವಾಯಿತು. ಮೋದಿಯವರ ಚುನಾವಣಾ ಬಾಂಡ್ ಯೋಜನೆಯಲ್ಲಿ ಬಹುತೇಕ ಪಕ್ಷಗಳು ಭಾಗವಹಿಸಿದ್ದವು. ಆದರೆ, ಅದನ್ನು ತಿರಸ್ಕರಿಸುವ ದಿಟ್ಟತನವೂ ಒಂದು ಕಡೆ ಇದೆ ಎನ್ನುವುದನ್ನು ಮರೆಯಬಾರದು. ಚುನಾವಣಾ ಬಾಂಡ್ ಹಗರಣವನ್ನು ಹೊರತರುವಲ್ಲಿ ಎಡಪಕ್ಷಗಳು, ವಿಶೇಷವಾಗಿ ಸಿಪಿಎಂನ ಪಾತ್ರ ಮತ್ತು ಒಳಗೊಳ್ಳುವಿಕೆಯನ್ನು ಕಡೆಗಣಿಸಲಾಗುವುದಿಲ್ಲ.

ನೆನಪಿಸುತ್ತಲೇ ಇರಿ!

ಬಿಜೆಪಿ ಆಡಳಿತದಲ್ಲಿ ಸಂಸತ್ತು ಎಷ್ಟು ದಿನ ಸಭೆ ಸೇರಿತು? ಎಷ್ಟು ಚರ್ಚೆಗಳು ನಡೆದಿವೆ? ವಿರೋಧ ಪಕ್ಷಗಳ ಸಗಟು ಉಚ್ಚಾಟನೆ ಎಂತಹ ಪ್ರಜಾಪ್ರಭುತ್ವ? ರಾಷ್ಟ್ರಪತಿಗಳನ್ನು ನಿರ್ಲಕ್ಷಿಸುವ ಪುರೋಹಿತರನ್ನು ಸ್ಥಾಪಿಸಿ ಹೊಸ ರಾಷ್ಟ್ರೀಯ ಸಂಸತ್ತಿನ ಕಟ್ಟಡವನ್ನು ಉದ್ಘಾಟಿಸಲಿಲ್ಲವೇ? ರಾಜದಂಡ ಮತ್ತು ಕಿರೀಟದೊಂದಿಗೆ ತೆರೆಯಲಾದ ಈ ಸಮಾರಂಭದ ಸಭಾಂಗಣದಲ್ಲಿ ನೀವು ಪ್ರಜಾಸತ್ತಾತ್ಮಕ ಚರ್ಚೆಗೆ ಸಿದ್ಧರಿದ್ದೀರಾ? ಯಾವುದಾದರೂ ವಿಚಾರದಲ್ಲಿ ಪ್ರಧಾನಿಯವರು ಪ್ರತಿನಿಧಿ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆಯೇ? ದೇಶದ ಮೇಲೆ ಪರಿಣಾಮ ಬೀರುವ ಕಾನೂನುಗಳನ್ನು ಚರ್ಚಿಸಲು ಅನುಮತಿಸುವುದಿಲ್ಲ. ಚರ್ಚೆಯಿಲ್ಲದೆ, ಚರ್ಚೆ ಇಲ್ಲದೆ, ಬಿಸಿ ರೊಟ್ಟಿಯನ್ನು ಬೇಯಿಸಿದಂತೆ ಬಹುಸಂಖ್ಯಾತರ ಮೇಲೆ ಪರಿಣಾಮ ಬೀರುವ ಕೃಷಿ ಕಾಯ್ದೆಯನ್ನು ಅವರು ಅಂಗೀಕರಿಸಿದರು. ಅವರ ಪ್ರಜಾಸತ್ತಾತ್ಮಕ ಮನೋಭಾವ ಮತ್ತು ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಪ್ರತಿಯೊಬ್ಬರೂ ನೆನಪಿಸಿಕೊಳ್ಳಬೇಕು.

ಭಾರತ ಬಿಟ್ಟು ಹೋಗುವ ಜನರು

ಪೌರತ್ವ ಈಗ ಚರ್ಚೆಯ ಪ್ರಮುಖ ವಿಷಯವಾಗಿದೆ. ಮುಸ್ಲಿಮರನ್ನು ಗುರಿಯಾಗಿಸುವುದು ಸಮಸ್ಯಾತ್ಮಕವಾಗಿದೆ. ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಜಾರಿಗೆ ಬಂದಿದೆ. ಇಲ್ಲಿ ಧರ್ಮದ ಹೆಸರಿನಲ್ಲಿ ಪೌರತ್ವ ಜಾರಿಯಾಗಿದೆ. ಪೌರತ್ವ ವಿಚಾರಕ್ಕೆ ಬಂದರೆ ಮೋದಿ ಮತ್ತು ಬಿಜೆಪಿಗೆ ಉತ್ತರಿಸಲು ದೊಡ್ಡ ಸಮಸ್ಯೆ ಇದೆ. ಪ್ರತಿ ವರ್ಷ, ನಮ್ಮ ದೇಶದ ಜನರು ತಮ್ಮ ಭಾರತದ ಪೌರತ್ವವನ್ನು ಬಿಟ್ಟು ಬೇರೆ ದೇಶಗಳಿಗೆ ವಲಸೆ ಹೋಗುತ್ತಾರೆ. 2015 ರ ಹೊತ್ತಿಗೆ, 1.31 ಲಕ್ಷ ಜನರು ತಮ್ಮ ಪೌರತ್ವವನ್ನು ತ್ಯಜಿಸಿ ಭಾರತವನ್ನು ತೊರೆದಿದ್ದಾರೆ. ಮೋದಿ ಅಧಿಕಾರಕ್ಕೆ ಬಂದು 10 ವರ್ಷಗಳ ನಂತರ ಪೌರತ್ವ ತ್ಯಜಿಸಿ ದೇಶ ತೊರೆದವರ ಸಂಖ್ಯೆ 2.25 ಲಕ್ಷ ತಲುಪಿದೆ. ದೇಶವನ್ನು ಕತ್ತಲಲ್ಲಿ ಮುಳುಗಿಸುವ ಮೋದಿ ಆಡಳಿತದ ಭಯಾನಕ ವಾತಾವರಣದಲ್ಲಿ, ಈ ನಿರಂತರವಾಗಿ ಹೆಚ್ಚುತ್ತಿರುವ ಭಾರತೀಯ ನಾಗರಿಕರ ವಲಸೆಯನ್ನು ನಿರ್ಣಯಿಸಬೇಕಾಗಿದೆ.

ರಾಜ್ಯಗಳು ವಸಾಹತುಗಳಲ್ಲ

ರಾಜ್ಯಗಳನ್ನು ಆರ್ಥಿಕವಾಗಿ ಮತ್ತು ಆಡಳಿತಾತ್ಮಕವಾಗಿ ಅಭದ್ರಗೊಳಿಸುವುದು ಮತ್ತು ಬಲವಂತವಾಗಿ ದುರ್ಬಲಗೊಳಿಸುವುದು ಬಿಜೆಪಿ ಆಡಳಿತವಾಗಿದೆ. ಎಲ್ಲಾ ಹಣಕಾಸಿನ ಪ್ರಯೋಜನಗಳು ಮತ್ತು ಹಣವನ್ನು ಕೇಂದ್ರ ಸರ್ಕಾರವು ಸಂಗ್ರಹಿಸುತ್ತದೆ. ರಾಜ್ಯಗಳ ಮೇಲೆ ಷರತ್ತುಗಳನ್ನು ವಿಧಿಸುತ್ತದೆ. ನೀತಿ ಆಯೋಗದ ಸಭೆಯಲ್ಲಿ, ರಾಜ್ಯದ ಪಾಲನ್ನು ಇನ್ನೂ ಹತ್ತು ಪ್ರತಿಶತದಷ್ಟು (ಶೇ 42 ರಿಂದ 32 ಕ್ಕೆ) ಕಡಿಮೆ ಮಾಡುವಂತೆ ಪ್ರಧಾನಿ ಕೇಳಿದರು. ಅವರು ಕೇರಳ, ತಮಿಳುನಾಡು ಮತ್ತು ಕರ್ನಾಟಕವನ್ನು ಕಡೆಗಣಿಸುತ್ತಾರೆ. ಅದೇ ಸಮಯದಲ್ಲಿ, ಕೆಲವು ರಾಜ್ಯಗಳು ಅರ್ಹತೆಗಿಂತ ಹೆಚ್ಚಿನ ಹಣವನ್ನು ಪಡೆಯುತ್ತವೆ. ಮೋದಿ ಅವಳಿ ಯಂತ್ರ ನೀತಿಯನ್ನು ಮುಂದುವರೆಸಿದ್ದಾರೆ. ನೀವು ನಮ್ಮ ವಿರುದ್ಧ ಇದ್ದರೆ, ನೀವು ನೀತಿಯನ್ನು ವಿರೋಧಿಸಿದರೆ, ಹಣದ ಹಂಚಿಕೆಯನ್ನು ಕಡಿಮೆ ಮಾಡುವ ಮೂಲಕ ಆರ್ಥಿಕ ದಮನವನ್ನು ಮಾಡಲಾಗುತ್ತದೆ. ಈ ತತ್ವವು ನಮ್ಮ ದೇಶದ ಮೂಲಭೂತ ಪ್ರಜಾಸತ್ತಾತ್ಮಕ ಪರಿಕಲ್ಪನೆಯನ್ನು ಒಳಗೊಂಡಿದೆ. ಕೇರಳದಲ್ಲಿ ಅನೇಕ ಕಲ್ಯಾಣ ಯೋಜನೆಗಳಿವೆ. ವಿವಿಧ ವರ್ಗದ ಜನರಿಗೆ ಪಿಂಚಣಿ ನೀಡುವುದರಿಂದ ಕೇರಳ ಪಿಂಚಣಿದಾರರ ರಾಜ್ಯ ಎಂಬ ಆರೋಪವಿದೆ. ಆದಾಗ್ಯೂ, ಇಂತಹ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಸುಸಂಸ್ಕೃತ ಮತ್ತು ಪ್ರಗತಿಪರ ಸರ್ಕಾರ ಮತ್ತು ನೀತಿಯನ್ನು ಪ್ರತಿಬಿಂಬಿಸುತ್ತವೆ. ಇಂತಹ ಕಾರ್ಯಕ್ರಮಗಳ ಮೂಲಕ ಪ್ರಜಾಸತ್ತಾತ್ಮಕ–ಸಾಮಾಜಿಕ ಪರಿಸರದ ಆರೋಗ್ಯಕರ ಬೆಳವಣಿಗೆಯನ್ನು ಕಾರ್ಯಗತಗೊಳಿಸಲಾಗುತ್ತದೆ. ಆದ್ದರಿಂದ ಈ ಕಲ್ಯಾಣ ಯೋಜನೆಗಳು ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಉದ್ದೇಶಿಸಲಾಗಿದೆ. ಅವರು ಅಭಿವೃದ್ಧಿ ವಿರೋಧಿಗಳಲ್ಲ.

ಕೇರಳವೇ ಮಾದರಿ, ಗುಜರಾತ್ ಅಲ್ಲ

ಗುಜರಾತ್ ಅಭಿವೃದ್ಧಿಯಲ್ಲಿ ಮಿಂಚುತ್ತದೆ ಎಂಬುದು ಸುಳ್ಳು. ಮೋದಿ ಮಾಧ್ಯಮಗಳ ಬಣ್ಣದ ಬಲೂನ್ ಒಡೆದಿದೆ. ಕೇರಳ ಹಾಗಲ್ಲ. ಸತ್ಯವೆಂದರೆ ಗುಜರಾತ್ ಅನ್ನು ಕೇರಳದೊಂದಿಗೆ ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೋಲಿಸಲು ಸಾಧ್ಯವಿಲ್ಲ. ದ್ವೇಷವೇ ಗುಜರಾತ್‌ನ ಪ್ರತಿರೂಪ. ಮಾನವೀಯತೆಯೇ ಕೇರಳದ ಘೋಷಣೆ. ಕೇರಳ ಮಾನವ ಕಲ್ಯಾಣವನ್ನು ಕಲಿಸುತ್ತದೆ. ಕೇರಳವನ್ನು 'ದೇವರ ನಾಡು' ಎಂದು ಕರೆಯಲಾಗುತ್ತದೆ. ಆದಾಗ್ಯೂ, ಕೇರಳವು ಜನರ ರಾಷ್ಟ್ರ ಎಂದು ನಾನು ಹೇಳಲು ಬಯಸುತ್ತೇನೆ. ಭಾರತ ಈಗ ನಿರ್ಣಾಯಕ ಘಟ್ಟದಲ್ಲಿದೆ. ಸಂಘಪರಿವಾರದ ಬೆದರಿಕೆ ಮತ್ತು ಸರ್ವಾಧಿಕಾರಕ್ಕೆ ಹಿಂದೂ ಧರ್ಮ ಶರಣಾಗಬೇಕೇ ಎಂಬುದು ಇಂದಿನ ಪ್ರಶ್ನೆಯಾಗಿದೆ. ಇವರಿಗೆ ನಾವು ಬಾಗಿದರೆ ನಮ್ಮ ದೇಶವೇ ಬಾಗಿದಂತಾಗುತ್ತದೆ. ಮೋದಿ–ಅಮಿತ್ ಷಾ–ಬಿಜೆಪಿ–ಆರ್.ಎಸ್.ಎಸ್. ಮೈತ್ರಿಯೊಂದಿಗೆ ರಾಜಿ ಮಾಡಿಕೊಂಡು, ಚೌಕಾಸಿ ಮಾಡಿ, ಸಣ್ಣಪುಟ್ಟ ಸ್ಥಾನ ಗಿಟ್ಟಿಸಿಕೊಳ್ಳುವವರು ದೇಶದ ಸ್ಥಿತಿಯನ್ನು ಅಧೋಗತಿಗೆ ತಳ್ಳುತ್ತಿದ್ದಾರೆ.

ಕನ್ನಡಕ್ಕೆ: ಸಿಚಿ

‘ಹಿಂದೂ ರಾಷ್ಟ್ರ’ದ ಅಂತರಂಗ–ಬಹಿರಂಗ

ಹಿಂದೂ ರಾಷ್ಟ್ರದ ಆಗಮನವು ಹಿಂದೂಗಳಿಗೆ ಒಂದು ವಿಮೋಚನೆಯ ಕ್ಷಣ ಎಂಬಂತೆ ಹಿಂದುತ್ವವಾದಿಗಳು ಪ್ರಚಾರ ಮಾಡುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ, ಬಿಕ್ಕಟ್ಟಿನಲ್ಲಿ ಸಿಲುಕಿ ಒದ್ದಾಡುತ್ತಿರುವ ನವ–ಉದಾರವಾದಿ ಆಳ್ವಿಕೆಯನ್ನು ಮೇಲೆತ್ತುವ ಹಿಂದೂ ರಾಷ್ಟ್ರವು ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗಳಿಗಾಗಿ ಚಲಾಯಿಸುತ್ತಿರುವ ಸರ್ವಾಧಿಕಾರವನ್ನು ಮರೆಮಾಡುತ್ತದೆ. ಹಿಂದೂ ರಾಷ್ಟ್ರವು ಬಹುಸಂಖ್ಯಾತರ ಹಿತಾಸಕ್ತಿಗಳಿಗೆ ಪೂರಕವಾಗುವುದರ ಬದಲಾಗಿ, ಕಳೆದ ಶತಮಾನದಲ್ಲಿ ಜನರು ಗಳಿಸಿದ ಸಾಮಾಜಿಕ ಮತ್ತು ರಾಜಕೀಯ ಲಾಭಗಳನ್ನು ಹಿಮ್ಮೆಟ್ಟಿಸುವ ಪ್ರತಿ–ಕ್ರಾಂತಿಯ ಅನಾವರಣವನ್ನು ಸೂಚಿಸುತ್ತದೆ. ಆದ್ದರಿಂದ, ಹಿಂದೂ ರಾಷ್ಟ್ರದತ್ತ ಸಾಗುವ ಚಲನೆಯನ್ನು ರೈತರ ಮೈತ್ರಿಯೊಂದಿಗೆ ತಡೆಯುವುದು ಕಾರ್ಮಿಕ ವರ್ಗದ ಐತಿಹಾಸಿಕ ಕರ್ತವ್ಯವಾಗುತ್ತದೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ



ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಉದ್ದೇಶದಿಂದ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಹುಟ್ಟುಹಾಕಲಾಗಿದೆ. ತಕ್ಷಣವೇ ಒಂದು ಪ್ರಶ್ನೆ ಉದ್ಭವಿಸುತ್ತದೆ: ಹಿಂದೂ ರಾಷ್ಟ್ರ ಎಂದರೇನು? ಉಳಿದ ಎಲ್ಲ ಧರ್ಮಗಳಿಂತ ಹೆಚ್ಚು ಪ್ರಾಧಾನ್ಯತೆಯನ್ನು ಒಂದು ನಿರ್ದಿಷ್ಟ ಧರ್ಮಕ್ಕೆ ನೀಡುವ ಹಲವಾರು ದೇಶಗಳು ವಿಶ್ವದಲ್ಲಿವೆ. ದೇವರ ಹೆಸರಿನಲ್ಲಿ (ದೇವಪ್ರಭುತ್ವ) ಅಥವಾ ಧರ್ಮದ ಹೆಸರಿನಲ್ಲಿ ಆಳ್ವಿಕೆ ನಡೆಸುವ ದೇಶಗಳೂ ಇವೆ. ಪ್ರಭುತ್ವ ಮತ್ತು ಧರ್ಮಗಳ ಸಂಬಂಧದ ಸ್ವರೂಪ ಯಾವುದೇ ಇರಲಿ, ಅದು ದೇಶದ ಪ್ರಭುತ್ವದ ವರ್ಗ ಸ್ವರೂಪವನ್ನು ಬದಲಿಸುವುದಿಲ್ಲ. ಅದೇ ರೀತಿಯಲ್ಲಿ, ಒಂದು ಹಿಂದೂ ರಾಷ್ಟ್ರವು, ಯಾವತ್ತಾದರೂ ಅದು ಒಂದು ವೇಳೆ ಸಾಕಾರಗೊಂಡರೆ, ಹಿಂದೂ ಧರ್ಮವೇ ಸರ್ವ ಶ್ರೇಷ್ಠ ಎಂದು ಅದು ಪ್ರತಿಜ್ಞೆ ಮಾಡಬಹುದು. ಆದರೆ ಈ ಅಂಶವು ಅದರ ವರ್ಗ ಸ್ವರೂಪವನ್ನು ನಿಗದಿಸುವುದಿಲ್ಲ ಅಥವಾ ಬದಲಿಸುವುದಿಲ್ಲ. ಹಿಂದೂ ರಾಷ್ಟ್ರವು ಭಯಭೀತಿ ಹುಟ್ಟಿಸುವ ಒಂದು ಸರ್ವಾಧಿಕಾರವೇ ಆಗಿರುತ್ತದೆ. ಈ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಏಕಸ್ವಾಮ್ಯ ಬಂಡವಾಳದ ಹೊಸ ಮತ್ತು ಆಕ್ರಮಣಕಾರಿ ವಿಭಾಗಗಳು ಬೆಂಬಲಿಸಿಸುತ್ತವೆ. ಇಂಥಹ ಫ್ಯಾಸಿಸ್ಟ್ ಪ್ರಭುತ್ವವನ್ನು, ಕಮ್ಯುನಿಸ್ಟ್ ಇಂಟರ್ನ್ಯಾಷನಲ್‌ನ ಏಳನೇ ಕಾಂಗ್ರೆಸ್ಸಿನಲ್ಲಿ ಅದರ ಅಧ್ಯಕ್ಷರಾಗಿದ್ದ ಜಾರ್ಜಿ ಡಿಮಿಟ್ರೋವ್ ಹೀಗೆ ವ್ಯಾಖ್ಯಾನಿಸಿದ್ದರು: "ಹಣಕಾಸು ಬಂಡವಾಳದ ಅತ್ಯಂತ ಪುನರ್ವಶತಾವಾದಿ (revanchist) ಮತ್ತು ಅತ್ಯಂತ ಪ್ರತಿಗಾಮಿ ವಿಭಾಗಗಳ ಮುಚ್ಚು ಮರೆ ಇಲ್ಲದ ಉಗ್ರ ಸರ್ವಾಧಿಕಾರ". ಈ ವಿವರಣೆಯ ಪ್ರಕಾರವಾಗಿ, ಹಿಂದೂ ರಾಷ್ಟ್ರವು ಮೂಲಭೂತವಾಗಿ ಒಂದು ಫ್ಯಾಸಿಸ್ಟ್ ಪ್ರಭುತ್ವವಾಗಿರುತ್ತದೆ ಎಂದು ತರ್ಕಿಸಬಹುದು.



ಈ ತೆರನಾದ ಹಿಂದೂ ರಾಷ್ಟ್ರದಲ್ಲಿ, ಎಲ್ಲ ಅಧಿಕೃತ ಸಭೆ ಸಮಾರಂಭಗಳೂ ಹಿಂದೂ ದೇವ ದೇವತೆಗಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಬಹುದು. ಎಲ್ಲ ರಸ್ತೆಗಳ, ರೈಲು ನಿಲ್ದಾಣಗಳ ಅಥವಾ ನಗರಗಳ ಹೆಸರುಗಳನ್ನು ಮಧ್ಯ ಯುಗದ ಚಕ್ರವರ್ತಿಗಳ ಹೆಸರುಗಳಿಂದ ಹಿಂದುತ್ವದ ನಾಯಕಮಣಿಗಳ ಹೆಸರುಗಳಿಗೆ ಬದಲಾಯಿಸಬಹುದು. ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳು ಸರಸ್ವತಿ ವಂದನೆಯೊಂದಿಗೆ ಪ್ರಾರಂಭವಾಗಬಹುದು. ಒಂದಿಷ್ಟು ದೇವಸ್ಥಾನಗಳನ್ನು ಸರ್ಕಾರದ ಧನಸಹಾಯದೊಂದಿಗೆ ನಿರ್ಮಿಸಬಹುದು. ಆದರೆ, ಈ ಯಾವ ಕ್ರಮವೂ ಒಬ್ಬ ಸಾಮಾನ್ಯ ಹಿಂದೂವಿನ ಸ್ಥಿತಿ–ಗತಿಯನ್ನು ಬದಲಿಸುವುದಿಲ್ಲ. ಇತ್ತೀಚಿನ ಒಂದು ಗಮನಾರ್ಹ ಪ್ರಕರಣವನ್ನು ಇಲ್ಲಿ ಉಲ್ಲೇಖಿಸಬಹುದು. ಇಸ್ಲಾಮಿಕ್ ಭಾವುಕತೆಯನ್ನು ತಣಿಸುವ ಲಾಲಸೆಯಿಂದ ಇಸ್ತಾನ್ ಬುಲ್ ನ ಸುಪ್ರಸಿದ್ಧ ಹಗಿಯಾ ಸೋಫಿಯಾ (ಈ ಚರ್ಚ್‌ಅನ್ನು ರೋಮನರು ನಿರ್ಮಿಸಿದರು. 1435ರಲ್ಲಿ ಕಾನ್ಸ್ಟಾಂಟಿನೋಪಲ್ (ಇಂದಿನ ಇಸ್ತಾನ್ ಬುಲ್) ಅನ್ನು ಟರ್ಕರು ವಶಪಡಿಸಿಕೊಂಡ ನಂತರ ಅದು ಒಂದು ಮಸೀದಿಯಾಗಿತ್ತು. 1935ರಿಂದ 2020ರವರೆಗೆ ಒಂದು ಮ್ಯೂಸಿಯಂ ಆಗಿ ಪರಿವರ್ತಿಸಲಾಗಿತ್ತು) ಕಟ್ಟಡವನ್ನು ಇತ್ತೀಚೆಗೆ ಎರ್ಡುವಾನ್ ಸರ್ಕಾರವು ಒಂದು ಮಸೀದಿಯಾಗಿ ಪರಿವರ್ತಿಸಿದೆ. ಈ ಬದಲಾವಣೆಯ ನಂತರ ಟರ್ಕಿಯ ಸಾಮಾನ್ಯ ನಾಗರಿಕರ ಜೀವನದಲ್ಲಿ ಯಾವ ಬದಲಾವಣೆಯೂ ಕಂಡುಬಂದಿಲ್ಲ. ಹಾಗೆಯೇ, ಹಿಂದೂ ರಾಷ್ಟ್ರವೂ ಸಹ, ಸಾಮಾನ್ಯ ಹಿಂದೂವಿನ ಸ್ಥಿತಿ–ಗತಿಗಳನ್ನು ಬದಲಾಯಿಸುವುದಿಲ್ಲ.

ಹಿಂದುತ್ವವಾದಿಗಳ ಪ್ರಸ್ತುತ ಆಳ್ವಿಕೆಯಿಂದ ನಮಗೆ ದೊರೆತ ಅನುಭವವನ್ನು ಮೊದಲು ಪರಿಗಣಿಸೋಣ. ದೇಶದಲ್ಲಿ ಈಗ ನಿರುದ್ಯೋಗದ ಪ್ರಮಾಣವು ಕೆಲವು ದಶಕಗಳ ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ಭಯಾನಕವಾಗಿದೆ: ಸಿಎಂಐಇ ಸಂಸ್ಥೆಯ ಪ್ರಕಾರ (ಈ ಸಂಸ್ಥೆಯು ಅಂತಾರಾಷ್ಟ್ರೀಯವಾಗಿ ಅನುಸರಿಸುವ ವಿಧಾನದ ಅನುಗುಣವಾಗಿ, ವೇತನ ರಹಿತ ಕೌಟುಂಬಿಕ ಕೆಲಸವನ್ನು ಉದ್ಯೋಗವೆಂದು ಪರಿಗಣಿಸುವುದಿಲ್ಲ), 2008 ಮತ್ತು 2019ರ ನಡುವೆ ಸರಾಸರಿ ಶೇ.5 ಮತ್ತು ಶೇ. 6ರ ನಡುವೆ ಇದ್ದ ನಿರುದ್ಯೋಗ ದರವು, ಈಗ ಸುಮಾರು ಶೇ. 8ರ ಮಟ್ಟದಲ್ಲಿದೆ. ನಿರುದ್ಯೋಗದ ಈ ಪ್ರಮಾಣವನ್ನು ಲೆಕ್ಕ ಹಾಕುವಾಗ "ನಿರುತ್ಸಾಹಿ ಶ್ರಮಿಕ ಪರಿಣಾಮ"ವನ್ನು (ಅಂದರೆ, ಉದ್ಯೋಗದ ಅವಶ್ಯಕತೆ ಇರುವ, ಆದರೆ ಅದು ಸಿಗುವುದಿಲ್ಲ ಎಂಬ ಅನ್ನಿಸಿಕೆಯಿಂದ ನಿರುದ್ಯೋಗಿಯು ಕೆಲಸ ಹುಡುಕಲು ಉತ್ಸಾಹಪೂರ್ಣವಾಗಿ ತೊಡಗದ ಪರಿಣಾಮವನ್ನು) ಈ ಸಂಸ್ಥೆಯು ಗಣನೆಗೆ ತೆಗೆದುಕೊಂಡಿಲ್ಲ. ಉದ್ಯೋಗ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದ್ದರೂ ಸಹ ಅದನ್ನು ತಡೆಯಲು ಹಿಂದುತ್ವವಾದಿಗಳ ಸರ್ಕಾರವು ವಿಫಲವಾಗಿದೆ ಮಾತ್ರವಲ್ಲ, ಅದರ ಮುಖ್ಯ ಆರ್ಥಿಕ ಸಲಹೆಗಾರರು, ನಿರುದ್ಯೋಗದ ಬಗ್ಗೆ ಸರ್ಕಾರವು ಏನನ್ನೂ ಮಾಡುವ ಸ್ಥಿತಿಯಲ್ಲಿಲ್ಲ ಎಂದು ಬಹಿರಂಗವಾಗಿ ಹೇಳಿದ್ದಾರೆ. ತಮ್ಮ ಈ ಹೇಳಿಕೆಯನ್ನು ಅವರು ನಿರಾಕರಿಸಿಯೂ ಇಲ್ಲ ಅಥವಾ ಅವರ ಹೇಳಿಕೆಗೂ ಮತ್ತು ತನಗೂ ಯಾವ ಸಂಬಂಧವೂ ಇಲ್ಲ ಎಂದು ಅಧಿಕೃತವಾಗಿ ಸ್ಪಷ್ಟಪಡಿಸುವ ಪ್ರಯತ್ನವನ್ನು ಸರ್ಕಾರವೂ ಮಾಡಿಲ್ಲ. ಹಾಗಾಗಿ, ಇದು ಸರ್ಕಾರದ ನಿಲುವು ಎಂಬುದು ಸ್ಪಷ್ಟವಾಗುತ್ತದೆ. ಹೀಗೆ ದುಡಿಮೆಗಾರರನ್ನು ಬಾಧಿಸುತ್ತಿರುವ ಅತ್ಯಂತ ಜ್ವಲಂತ ಸಮಸ್ಯೆಯ ಬಗ್ಗೆ, ದುಡಿಯುವ ಜನರ ದುಃಸ್ಥಿತಿಗೆ ಕಾರಣವಾಗಿರುವ ಈ ಸಮಸ್ಯೆಯ ಬಗ್ಗೆ ಏನೂ ಮಾಡಲಾಗದು ಎಂಬ ಇಂಗಿತವನ್ನು ಸರ್ಕಾರ ವ್ಯಕ್ತಪಡಿಸಿದೆ.

ದಿನ ದಿನಕ್ಕೂ ಹೆಚ್ಚುತ್ತಿರುವ ಜನರ ದುಃಖ ದುಮ್ಮಾನಗಳು ಪ್ರಸ್ತುತ ಸರ್ಕಾರದ ಆಳ್ವಿಕೆಯಲ್ಲಿ ಮುಂದುವರಿಯುತ್ತವೆ ಎಂಬುದು ಇದರ ಅರ್ಥ. ಆದರೆ, ಈ ಸರ್ಕಾರದ ಪ್ರತಿಕ್ರಿಯೆ ಹೇಗಿದೆ ಎಂದರೆ, ಹುಸಿ ಅಂದಾಜಿನ ಮತ್ತು ಮೆಚ್ಚಬೇಕಾದ್ದು ಎಂದು ಹೇಳಲಾದ ಜಿಡಿಪಿಯ ಬೆಳವಣಿಗೆಯ ದರದ ಬಗ್ಗೆ ಡಂಗುರ ಹೊಡೆಯುತ್ತದೆ. ನಂತರ, ಅದನ್ನು "ಅಭಿವೃದ್ಧಿ"ಯ ಹೆಸರಿನಲ್ಲಿ ಏಕಸ್ವಾಮ್ಯ ಬೂರ್ಜ್ವಾಗಳಿಗೆ ನೀಡುತ್ತಿರುವ ಲಕ್ಷಗಟ್ಟಲೆ ಕೋಟಿ ರೂಗಳ ಧಾರಾಳ ಕೊಡುಗೆಯನ್ನು ಸಮರ್ಥಿಸಿಕೊಳ್ಳಲು ಬಳಸುತ್ತದೆ. ಅದೇ ಸಮಯದಲ್ಲಿ, ಜನರ ದುಃಖ ದುಮ್ಮಾನಗಳ ನೈಜ ಚಿತ್ರಣವನ್ನು ತೋರಿಸುವ ಪಕ್ಷಪಾತವಿಲ್ಲದ ಪ್ರಯತ್ನಗಳನ್ನು ತಿರಸ್ಕಾರದಿಂದ ಕಾಣುತ್ತದೆ. ಹಿಂದುತ್ವವಾದಿ ಪ್ರಾಬಲ್ಯದ ಒಂದು ಚುನಾಯಿತ ಸರ್ಕಾರವು ಈ ಪಾಟಿ ತಿರಸ್ಕಾರವನ್ನು ತೋರಿಸಿದರೆ, ಭವಿಷ್ಯದ ಹಿಂದೂ ರಾಷ್ಟ್ರವು ಜನರ ಲೌಕಿಕ ಸಮಸ್ಯೆಗಳ ಬಗ್ಗೆ ತೋರಿಸುವ ಈ ತಿರಸ್ಕಾರ ಮನೋಭಾವವು ಮತ್ತಷ್ಟು ಗಟ್ಟಿಯಾಗಿ ನೆಲೆಗೊಳ್ಳುತ್ತದೆ ಎಂಬುದಲ್ಲಿ ಅನುಮಾನವಿಲ್ಲ.

ಇದೇ ಈ ಕಾರಣದಿಂದಾಗಿಯೇ, ಅಂದರೆ, ಭೀಕರ ನಿರುದ್ಯೋಗ ಸಮಸ್ಯೆಯ ಬಗ್ಗೆ ಮತ್ತು ಜನರ ಸಂಕಷ್ಟಗಳ ಬಗ್ಗೆ ಹಿಂದುತ್ವವಾದಿಗಳು ಈಗ ತೋರುತ್ತಿರುವ ತಿರಸ್ಕಾರವನ್ನು ನೋಡಿದರೆ, ಭವಿಷ್ಯದ ಹಿಂದೂ ರಾಷ್ಟ್ರವು ಒಂದು ಭಯೋತ್ಪಾದಕ ಸರ್ವಾಧಿಕಾರವೇ ಆಗಿರಬೇಕಾಗುತ್ತದೆ. ಒಂದು ವರ್ಗ ಸರ್ವಾಧಿಕಾರವನ್ನು ಪ್ರತಿನಿಧಿಸುವ ಪ್ರಭುತ್ವವು, ರಾಜಕೀಯ ವ್ಯವಸ್ಥೆಯ ಸ್ವರೂಪವು ಪ್ರಜಾಸತ್ತಾತ್ಮಕವಾಗಿದ್ದರೂ ಸಹ, ಆಸ್ತಿವಂತ ವರ್ಗಗಳು ದುಡಿಯುವ ಜನರ ಮೇಲೆ ನಡೆಸುವ ಯಾವುದೇ ರೀತಿಯ ಆಳ್ವಿಕೆಯನ್ನು ಸಮರ್ಥಿಸುತ್ತದೆ. ಇದರರ್ಥ ಪ್ರಜಾಸತ್ತಾತ್ಮಕ ಸ್ವರೂಪವೇ ಅಪ್ರಸ್ತುತ ಎಂದಾಗಲಿ ಅಥವಾ ಪ್ರಜಾಪ್ರಭುತ್ವದ ಲಕ್ಷಣಗಳು ಕೇವಲ ಗೌಣವಾಗಿ ಪ್ರತಿನಿಧಿಸಲ್ಪಡುತ್ತವೆ ಎಂದಾಗಲಿ ಅಲ್ಲ. ಪ್ರಜಾಸತ್ತಾತ್ಮಕ ಸ್ವರೂಪವನ್ನು ಅದರಲ್ಲಿ ಅಡಗಿರುವ ವರ್ಗ ಸರ್ವಾಧಿಕಾರವು ದುರ್ಬಲಗೊಳಿಸುತ್ತದೆ ಎಂಬುನ್ನು ಒತ್ತಿ ಹೇಳಲು ಮಾತ್ರ. ಆದರೆ, ಈ ವರ್ಗ ಸರ್ವಾಧಿಕಾರದ ಪರಿಣಾಮವಾಗಿ ಜನರ ಸ್ಥಿತಿ ಗತಿಗಳು ನಿಜಕ್ಕೂ ಹದಗೆಟ್ಟಿರುವಾಗ, ಪ್ರಭುತ್ವವು ಅದರ ಬಗ್ಗೆ ಒಂದು ವೇಳೆ ಯಾವ ಕ್ರಮವನ್ನೂ ಕೈಗೊಳದಿದ್ದರೆ, ಆಗ ಈ ವರ್ಗ ಸರ್ವಾಧಿಕಾರವು ಸರ್ಕಾರದ ಪ್ರಜಾಸತ್ತಾತ್ಮಕ ಸ್ವರೂಪವನ್ನು ಮತ್ತಷ್ಟು ದುರ್ಬಲಗೊಳಿಸಬೇಕಾಗುತ್ತದೆ. ಇದು ಅನಿವಾರ್ಯವಾಗಿ ಜನರ ಹಕ್ಕುಗಳನ್ನು ದಮನಿಸುತ್ತದೆ ಮತ್ತು ಪ್ರಜಾಸತ್ತಾತ್ಮಕ ಆಳ್ವಿಕೆಯ ಸಂಸ್ಥೆಗಳನ್ನು ತುಳಿದು ಹಾಕುತ್ತದೆ.

ಹಿಂದೂ ರಾಷ್ಟ್ರವು ಒಂದು ವರ್ಗದ ಸರ್ವಾಧಿಕಾರವಾಗಿ ಒಂದು ವೇಳೆ ಅಸ್ತಿತ್ವಕ್ಕೆ ಬಂದರೆ, ಅದು ಏಕಸ್ವಾಮ್ಯ ಬಂಡವಾಳದ ಅಧೀನದಲ್ಲಿರಬೇಕಾಗುತ್ತದೆ. ಈ ಏಕಸ್ವಾಮ್ಯ ಬಂಡವಾಳವು, ನವ–ಉದಾರವಾದದೊಂದಿಗೆ ಬೆರೆತು ಹೋಗಿರುವ ಸನ್ನಿವೇಶದಲ್ಲಿ, ಹಿಂದೂ ರಾಷ್ಟ್ರವು ನವ–ಉದಾರವಾದಿ ಆರ್ಥಿಕ ಚೌಕಟ್ಟಿನೊಳಗೇ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ, ನವ–ಉದಾರವಾದವೇ ಒಂದು ಹೊರಬರಲಾರದ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದೆ. ಬಿಕ್ಕಟ್ಟಿನ ಪರಿಣಾಮವಾಗಿ ನವ–ಉದಾರವಾದವು ಜನರ ಸ್ಥಿತಿ ಗತಿಗಳನ್ನು ಅನಿವಾರ್ಯವಾಗಿ ಮತ್ತಷ್ಟು ಹಾಳುಗೆಡವುತ್ತದೆ. ಹಾಗಾಗಿ, ನವ–ಉದಾರವಾದವು ಬಿಕ್ಕಟ್ಟಿಗೆ ಒಳಗಾಗಿರುವ ಸನ್ನಿವೇಶದಲ್ಲಿ ಒಂದು ವೇಳೆ ಅಸ್ತಿತ್ವಕ್ಕೆ ಬಂದರೆ, ಈ ಹಿಂದೂ ರಾಷ್ಟ್ರವು ಹದಗೆಡುತ್ತಾ ಹೋಗುತ್ತಿರುವ ಪರಿಸ್ಥಿತಿಯನ್ನು ನಿಭಾಯಿಸಲು ಭಯೋತ್ಪಾದಕತೆಯನ್ನು ಅನಿವಾರ್ಯವಾಗಿ ಬಳಕೆ ಮಾಡುವ ಒಂದು ಸರ್ವಾಧಿಕಾರವೇ ಆಗಬೇಕಾಗುತ್ತದೆ.

ನಿಖರವಾಗಿ ಈ ಕಾರಣದಿಂದಲೇ ಬಂಡವಾಳ ವರ್ಗದ ಬಹುತೇಕ ಏಕಸ್ವಾಮ್ಯವಾದಿಗಳು ಈ ಹಿಂದೂ ರಾಷ್ಟ್ರ ಯೋಜನೆಗೆ ಮೌನಸಮ್ಮತಿ ನೀಡುವುದು. ಭಯೋತ್ಪಾದನೆಗಾಗಿ, ಕೋಮು ಘರ್ಷಣೆಗಳನ್ನು ಹುಟ್ಟುಹಾಕುವುದು, ಧಾರ್ಮಿಕ ಅಲ್ಪಸಂಖ್ಯಾತ ಗುಂಪುಗಳನ್ನು "ಹೊರಗಿನವರು" ಎಂದು ಬಿಂಬಿಸುವುದು, ಅಂಥಹ ಗುಂಪಿನ ವಿರುದ್ಧ ದ್ವೇಷವನ್ನು ಹುಟ್ಟುಹಾಕುವುದು, ಇವೆಲ್ಲವೂ ಹಿಂದೂ ರಾಷ್ಟ್ರದ ರಚನೆಗೆ ಪೂರಕವಾಗಿ ಕೆಲಸ ಮಾಡುತ್ತವೆ ಮತ್ತು ಆ ಮೂಲಕ ಒಂದು ಖಚಿತ ರೂಪವನ್ನು ಪಡೆಯುತ್ತವೆ. ಏಕಸ್ವಾಮ್ಯ ಬಂಡವಾಳದ ಭಯೋತ್ಪಾದನೆಯನ್ನು ಬಳಸಿಕೊಳ್ಳುವ ಸರ್ವಾಧಿಕಾರವು, ಹಿಂದೂ ರಾಷ್ಟ್ರದಲ್ಲಿ ಒಂದು ಖಚಿತ ರೂಪವನ್ನು ಪಡೆಯುವ ಹಿಂದೂ ಶ್ರೇಷ್ಠತೆಯ ಭಾವನೆಯನ್ನು ಬಳಕೆ ಮಾಡಿಕೊಳ್ಳುತ್ತದೆ. ಏಕಸ್ವಾಮ್ಯ ಬಂಡವಾಳದ ಆಸರೆಯಲ್ಲಿ ಭಯೋತ್ಪಾದನೆಯನ್ನು ಬಳಕೆ ಮಾಡಿಕೊಳ್ಳುವ ಕಾರಣದಿಂದಾಗಿಯೇ ಹಿಂದೂ ರಾಷ್ಟ್ರವು ಒಂದು ಸರ್ವಾಧಿಕಾರವಾಗುತ್ತದೆ ಎಂಬುದನ್ನು ಆರಂಭದಲ್ಲೇ ಹೇಳಿದ್ದೇವೆ.

ಭಯೋತ್ಪಾದನೆಯ ಬಳಕೆ ಮತ್ತು ಹಿಂದೂ–ಶ್ರೇಷ್ಠತೆಯ ಭಾವನೆಯ ಪ್ರಚೋದನೆ, ಈ ಎರಡು ಅಂಶಗಳ ಹೊರತಾಗಿ, ಹಿಂದೂ ರಾಷ್ಟ್ರವನ್ನು ಸಜ್ಜುಗೊಳಿಸಲು ಬಳಸುವ ಮೂರನೇ ಅಂಶವೆಂದರೆ, ಸಾಮಾಜಿಕ ಪ್ರತಿ–ಕ್ರಾಂತಿಯ ಅನಾವರಣ. ಇಪ್ಪತ್ತನೇ ಶತಮಾನವು ಭಾರತದಲ್ಲಿ

ಪುಟ 14 ಕ್ಕೆ

ಸಂವಿಧಾನದ ಸಂರಕ್ಷಣೆಯೇ ಅಂಬೇಡ್ಕರ್ ಅವರಿಗೆ ಸಲ್ಲಿಸುವ ನಿಜವಾದ ಗೌರವ... ಪುಟ 5 ರಿಂದ

ಮತ್ತು ಕಾಶ್ಮೀರದಲ್ಲಿ ಆರ್ಟಿಕಲ್ 370 ರದ್ದತಿ, ರಾಮಮಂದಿರ ನಿರ್ಮಾಣ, ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅನುಷ್ಠಾನ ಮುಂತಾದವುಗಳನ್ನು ಮುಂದೆ ತಂದಿತು. ಈಗ ಏಕ ನಾಗರೀಕ ಸಂಹಿತೆ ಅನುಷ್ಠಾನದ ಕುರಿತು ಮಾತನಾಡುತ್ತಿರುವುದು ಕೂಡ ಧಾರ್ಮಿಕ ವಿಭಜನೆಯಾಗಿದೆ. ಜಾತ್ಯತೀತತೆಯನ್ನು ಕಾಪಾಡುವುದು ಭಾರತದ ರಾಷ್ಟ್ರೀಯ ಏಕತೆಗೆ ಪ್ರಮುಖವಾಗಿದೆ.

ನ್ಯಾಯ ವ್ಯವಸ್ಥೆಯ ಮೇಲೆ ಒತ್ತಡ

ಕಳೆದ ಹತ್ತು ವರ್ಷಗಳಿಂದ ನ್ಯಾಯಾಂಗದ ಮೇಲಿನ ಒತ್ತಡ ಹೆಚ್ಚಿಸಿ, ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಕೊಲಿಜಿಯಂ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಾಧೀಶರ ನೇಮಕಾತಿಯಲ್ಲಿ ಹಸ್ತಕ್ಷೇಪ ಮಾಡುತ್ತ, ತಮಗೆ ಅನುಕೂಲಕರವಾದ ನ್ಯಾಯಾಧೀಶರ ನೇಮಿಸುವಂತೆ ಹಲವು ರೀತಿಯ ಒತ್ತಡ ಹೇರುತ್ತದೆ. ಕೆಲವು ಸಂದರ್ಭಗಳಲ್ಲಿ ಕೊಲಿಜಿಯಂ ಮಾಡಿದ ಶಿಫಾರಸುಗಳು ಅನುಮೋದನೆ ಇಲ್ಲದೆ ವರ್ಷಗಳ ಕಾಲ ಬಾಕಿ ಉಳಿದಿವೆ. ತಮಗೆ ಅನುಕೂಲಕರವಾದ ತೀರ್ಪುಗಳನ್ನು ನೀಡಿದ ನ್ಯಾಯಾಧೀಶರನ್ನು ಅವರ ಅಧಿಕಾರಾವಧಿ ಮುಗಿದ ತಕ್ಷಣ ಇತರ ಉನ್ನತ ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ. ನ್ಯಾಯಮೂರ್ತಿ ರಂಜನ್ ಗೊಗೊಯ್ ಅವರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನಿವೃತ್ತರಾದ ತಕ್ಷಣ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಕಳುಹಿಸಿರುವುದು ಇದಕ್ಕೆ ದೊಡ್ಡ ಉದಾಹರಣೆಯಾಗಿದೆ. ರಂಜನ್ ಗೊಗೊಯ್ ಹಲವು ಪ್ರಕರಣಗಳಲ್ಲಿ ಮೋದಿ ಸರ್ಕಾರದ ಪರವಾಗಿ ತೀರ್ಪು ನೀಡಿದ್ದಾರೆ. ನ್ಯಾಯಾಂಗವು ಒತ್ತಡದಲ್ಲಿದೆ. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗವನ್ನು ಸಂವಿಧಾನಾತ್ಮಕವಾಗಿ ಏರ್ಪಾಡು ಮಾಡಿ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ಅವಶ್ಯಕತೆ ಇದೆ.

ರಾಜ್ಯಗಳ ಹಕ್ಕುಗಳ ಉಲ್ಲಂಘನೆ

ಕಳೆದ ಒಂದು ದಶಕದಿಂದ ಭಾರತೀಯ ಒಕ್ಕೂಟ ವ್ಯವಸ್ಥೆಯು ಒತ್ತಡದಲ್ಲಿದೆ. ರಾಜ್ಯಗಳ ಹಕ್ಕುಗಳನ್ನು ಒಕ್ಕೂಟ ಸರ್ಕಾರ ಕಸಿದುಕೊಳ್ಳುತ್ತಿದೆ. ಅಧಿಕಾರ ವಿಂಗಡಣೆಯಲ್ಲಿ ರಾಜ್ಯ ಪಟ್ಟಿಗೆ ಸೇರಿದ ವಿಷಯಗಳ ಬಗ್ಗೆಯೂ ಕಾನೂನು ರೂಪಿಸುವ ಮೂಲಕ ಒಕ್ಕೂಟ ಸರ್ಕಾರ ರಾಜ್ಯಗಳ ಅಧಿಕಾರವನ್ನು ಅತಿಕ್ರಮಿಸುತ್ತಿದೆ. ಸಂಸತ್ತಿನ ಮೂಲಕ ಕೇಂದ್ರವು ಅಂಗೀಕರಿಸಿದ ಮೂರು ಕೃಷಿ ಕಾಯಿದೆಗಳು ಇದಕ್ಕೆ ದೊಡ್ಡ ಉದಾಹರಣೆಯಾಗಿದೆ. ರೈತ ಚಳವಳಿಯ ಮೂಲಕವೇ ಕಾನೂನುಗಳನ್ನು ಹಿಂಪಡೆಯುವಂತೆ ಮಾಡಲು ಸಾಧ್ಯವಾಯಿತು. ಜಿಎಸ್‌ಟಿಯಿಂದ ರಾಜ್ಯಗಳು ಸುಮಾರು 3 ಲಕ್ಷ ಕೋಟಿ ನಷ್ಟ ಅನುಭವಿಸಿವೆ. 15ನೇ ಹಣಕಾಸು ಆಯೋಗದ ಶಿಫಾರಸುಗಳೂ ಕೇಂದ್ರದ ಪರವಾಗಿವೆ. ಅನೇಕ ರಾಜ್ಯಗಳಲ್ಲಿ, ಆಡಳಿತಾರೂಢ ಸರ್ಕಾರಗಳು ತಮ್ಮ ಪರವಾಗಿಲ್ಲದಿದ್ದರೆ ರಾಜ್ಯಪಾಲರಿಂದ ತೊಂದರೆಗೊಳಗಾಗುತ್ತವೆ. ರಾಜ್ಯ ವಿಧಾನಸಭೆ ಅಂಗೀಕರಿಸಿದ ವಿಧೇಯಕಗಳಿಗೆ ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳು ಅನುಮೋದನೆಯ ಮುದ್ರೆಯನ್ನು ನೀಡದ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಬೇಕಾಯಿತು. ರಾಜ್ಯಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ಗೆದ್ದು ಆಡಳಿತ ನಡೆಸುತ್ತಿರುವುದನ್ನು ಕೇಂದ್ರದ ಬಿಜೆಪಿ ಸರ್ಕಾರ ಸಹಿಸುತ್ತಿಲ್ಲ. ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿರುವುದು ಇದಕ್ಕೆ ದೊಡ್ಡ ಉದಾಹರಣೆ. 'ಇಂಡಿಯಾ' ಬ್ಲಾಕ್ ರಚನೆಯನ್ನು ಬಿಜೆಪಿ ಸಹಿಸುತ್ತಿಲ್ಲ. ಫೆಡರಲಿಸಂನಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರದಲ್ಲಿ ಇರುವುದು ಸಹಜ ಎಂಬುದು ಅವರಿಗೆ ಇಷ್ಟವಿಲ್ಲ.

ಈಗ ಏನಾಗಬೇಕು?

ಡಾ. ಬಿ.ಆರ್.ಅಂಬೇಡ್ಕರ್ ಅವರು ನವೆಂಬರ್ 26, 1949 ರಂದು ಸಂಸತ್ತು ಸಂವಿಧಾನವನ್ನು ಅಂಗೀಕರಿಸಿದ ದಿನ ಮಾತನಾಡುತ್ತಾ 'ಭಾರತ ದೇಶದಲ್ಲಿ ವೈವಿಧ್ಯತೆಯನ್ನು ರಕ್ಷಿಸುವುದಕ್ಕಾಗಿ, ವಿವಿಧ ಜನಾಂಗಗಳು, ಧರ್ಮಗಳು, ಜಾತಿಗಳು ಮತ್ತು ಪ್ರದೇಶಗಳ ಜನರ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ' ಅನೇಕ ಚರ್ಚೆಗಳನ್ನು ಮಾಡುವ ಮೂಲಕ ಸಂವಿಧಾನ ರಚನೆಗೆ ಮೂರು ವರ್ಷಗಳ ಸಮಯ ಬೇಕಾಯಿತು ಹೇಳಿದರು. ಇಂತಹ ಸಂವಿಧಾನವನ್ನು ನಾಶ ಮಾಡಲು ಇಂದಿನ ಆಡಳಿತಗಾರರು ಸಂಕಲ್ಪ ಮಾಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ 400 ಸ್ಥಾನಗಳನ್ನು ಪಡೆದು ಸಂವಿಧಾನ ಮತ್ತು ಅದರ ಮೂಲ ರಚನೆಯನ್ನು ಸಂಪೂರ್ಣವಾಗಿ ಬದಲಾಯಿಸಲು ಅವರು ಯೋಜಿಸುತ್ತಿದ್ದಾರೆ. ಇವುಗಳನ್ನು ಎದುರಿಸಲು ಬುದ್ಧಿಜೀವಿಗಳು, ಶಿಕ್ಷಣ ತಜ್ಞರು, ಸಾರ್ವಜನಿಕ ಸಂಘಟನೆಗಳು ಮತ್ತು ನಾಗರಿಕ ಸಮಾಜದ ಜನರು ಮುಂಬರುವ ಚುನಾವಣೆಯಲ್ಲಿ ಧಾರ್ಮಿಕ ಶಕ್ತಿಗಳ ಸೋಲಿಗೆ ಶ್ರಮಿಸಬೇಕಾಗಿದೆ. ಸಂವಿಧಾನವನ್ನು ಸಂರಕ್ಷಿಸುವ ಈ ಪ್ರಯತ್ನವು ಡಾ. ಅಂಬೇಡ್ಕರ್ ಅವರ ಜನ್ಮದಿನದಂದು ಅವರಿಗೆ ನಾವು ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ.

ಲೇಖಕರು: ಕೆ.ವೈ.ಲಕ್ಷ್ಮಣರಾವ್

(ಮೂಲ ಲೇಖನ: ತೆಲುಗು-ಕನ್ನಡಕ್ಕೆ: ಸಿಚಿ)

'ಹಿಂದೂ ರಾಷ್ಟ್ರ'ದ ಅಂತರಂಗ-ಬಹಿರಂಗ..... ಪುಟ 13 ರಿಂದ

ಎರಡು ಚಳುವಳಿಗಳು ಸಮಾನಾಂತರವಾಗಿ ತೆರೆದುಕೊಂಡಿರುವುದನ್ನು ಕಂಡಿದೆ: ಒಂದು, ವಸಾಹತುಶಾಹಿ ವಿರೋಧಿ ಹೋರಾಟ ಮತ್ತು ಇನ್ನೊಂದು, ಜಾತಿ-ಆಧಾರಿತ ಊಳಿಗಮಾನ್ಯ ಸಮಾಜದೊಳಗೆ ಸಹಸ್ರಾರು ವರ್ಷಗಳಿಂದಲೂ ಸಾಮಾಜಿಕವಾಗಿ ತುಳಿತಕ್ಕೊಳಗಾದವರು ತಮ್ಮ ವಿಮೋಚನೆಗಾಗಿ ನಡೆಸಿದ ಹೋರಾಟ. ಈ ಎರಡು ಚಳುವಳಿಗಳಲ್ಲಿ. ಒಂದು ಚಳುವಳಿಯ ಜೊತೆಗೆ ಗುರುತಿಸಿಕೊಂಡ ಹಲವು ನಾಯಕರು ಇನ್ನೊಂದು ಚಳುವಳಿಯ ಮುಖಂಡರೊಂದಿಗೆ ವೈಯಕ್ತಿಕವಾಗಿ ಸಹಾನುಭೂತಿಯ ಸಂಬಂಧವನ್ನು ಹೊಂದಿರದೇ ಇರಬಹುದು. ಆದರೆ, ಜನ ಮಾನಸದಲ್ಲಿ ಮತ್ತು ಈ ಇಬ್ಬರ ನಡುವೆ ಒಂದು ಪರಸ್ಪರ ಕೊಡುಬಾಳ್ವೆಯ ಸಂಬಂಧವಿತ್ತು. ಎಡ ಪಂಥವು ಈ ಪರಸ್ಪರ ಕೊಡುಬಾಳ್ವೆಯ ಸಂಬಂಧದ ಪ್ರತೀಕವಾಗಿತ್ತು.

ಈ ಜೋಡಿ ಆಂದೋಲನದ ಪರಿಣಾಮವಾಗಿ, ದೇಶದಲ್ಲಿ ಒಂದು ಅಗಾಧವಾದ ಸಾಮಾಜಿಕ ಪರಿವರ್ತನೆ ಸಂಭವಿಸಿರುವುದು ಕಂಡು ಬರುತ್ತದೆ. ಎಷ್ಟು ಆಮೂಲಾಗ್ರವಾಗಿ ಪರಿವರ್ತನೆ ಆಗಬೇಕಿತ್ತೋ, ಅಷ್ಟಾಗಲಿಲ್ಲ. ಮೀರಲಾಗದ ಕೆಲವು ಬೂರ್ಜ್ವಾ ಮಿತಿಗಳಿಂದ ಈ ಪರಿವರ್ತನೆ ಸೊರಗಿತು. ಅದೇನೇ ಇದ್ದರೂ, ಈ ಸಾಮಾಜಿಕ ಪರಿವರ್ತನೆಯು ಒಂದು ಅದ್ಭುತವಾದ ಪ್ರಗತಿಯನ್ನು ದಾಖಲಿಸಿತು. ಇದನ್ನು ಕೇವಲ ಒಂದು ಉದಾಹರಣೆಯ ಮೂಲಕ ವಿವರಿಸಬಹುದು.

20ನೇ ಶತಮಾನದ ಆರಂಭದಲ್ಲಿ, ಕೇರಳದಲ್ಲಿ "ಅಸ್ಪೃಶ್ಯತೆ" ಮಾತ್ರವಲ್ಲ, "ಅಗೋಚರತೆ" ("unseeability") ಕೂಡ ಇತ್ತು. ಅಂದರೆ, "ಮೇಲು" ಜಾತಿಯ ವ್ಯಕ್ತಿಯ ಎದುರಿಗೆ ಒಬ್ಬ ಕೆಳ ಜಾತಿಯ ವ್ಯಕ್ತಿಯು ಕಾಣಿಸಿಕೊಂಡರೆ ಅಥವಾ ಹಾದು ಹೋದರೆ, ಮೇಲ್ಜಾತಿಯ ವ್ಯಕ್ತಿಗೆ ಮೈಲಿಗೆ ಅಂಟಿದೆ ಎಂದಾಗುತ್ತಿತ್ತು. ಮಾನವ ಅಭಿವೃದ್ಧಿ ಸೂಚಕಗಳು ಮೂರನೇ ಜಗತ್ತಿನ ಬಹುತೇಕ ದೇಶಗಳಿಗಿಂತ ಉತ್ತಮವಾಗಿರುವ ಮತ್ತು ಮುಂದುವರಿದ ಬಂಡವಾಳಶಾಹಿ ದೇಶಗಳೊಂದಿಗೆ ಅನುಕೂಲಕರವಾಗಿ ಹೋಲಿಸಲಾಗುವ, ಇಂದಿನ ಕೇರಳವನ್ನು ಕೇರಳದ ಅಂದಿನ ಪರಿಸ್ಥಿತಿಯೊಂದಿಗೆ ಹೋಲಿಸಿದಾಗ, ಸಾಮಾಜಿಕ ಬದಲಾವಣೆಗಳು ಅದೆಷ್ಟು ಅಗಾಧವಾಗಿ ಸಂಭವಿಸಿವೆ ಎಂಬುದನ್ನು ಕಲ್ಪಿಸಿಕೊಳ್ಳಬಹುದು. ಕೇರಳದ ಬದಲಾವಣೆಗಳನ್ನು ಒಂದು ಅಪವಾದ ಎಂದುಕೊಂಡರೂ ಸಹ, ಬದಲಾವಣೆಯ ಅಗಾಧತೆ ಕೇರಳಕ್ಕಿಂತ ಕಡಿಮೆ ಇದ್ದರೂ ಸಹ, ಭಾರತದ ಉದ್ದಗಲಕ್ಕೂ ಬೇರೆ ಬೇರೆ ಮಟ್ಟದಲ್ಲಿ ಸಾಮಾಜಿಕ ಬದಲಾವಣೆಗಳು ಸಂಭವಿಸಿವೆ.

ಸಾಮಾಜಿಕ ಪರಿವರ್ತನೆಯನ್ನು ಹಿಮ್ಮೆಟ್ಟಿಸಲು ಹಿಂದುತ್ವವಾದಿಗಳು ಸೂಚ್ಯವಾಗಿ ನೀಡಿದ ಭರವಸೆ ಮತ್ತು ನಿಜಕ್ಕೂ ಕೈಗೊಂಡ ಪ್ರಯತ್ನಗಳು ಹಿಂದುತ್ವವು ಮೇಲೇರುವಲ್ಲಿ ಸಹಾಯ ಮಾಡಿವೆ. ಜನರನ್ನು ರಾಜಕೀಯವಾಗಿ ಸಶಕ್ತಗೊಳಿಸಿದ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಮೂಲಕ ಮತ್ತು ಜಾತ್ಯತೀತತೆಯನ್ನು ಹಿಮ್ಮೆಟ್ಟಿಸುವ ಮೂಲಕ ಹಿಂದುತ್ವವು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಂಭವಿಸಿದ ಈ ಪರಿವರ್ತನೆಯನ್ನು ಹೆಚ್ಚು ವ್ಯಾಪಕವಾಗಿ ಹಿಂದಕ್ಕೆ ಒಯ್ದಿರುವುದು ಎಲ್ಲರಿಗೂ ಗೊತ್ತಿರುವ. ಸಂಗತಿ. ಉದಾಹರಣೆಗೆ, ಹಿಂದುತ್ವ ನೇತೃತ್ವದ ನವ-ಉದಾರವಾದದ ಅಡಿಯಲ್ಲಿ ಶಿಕ್ಷಣ ವಲಯವೂ ಸೇರಿದಂತೆ ಅನೇಕ ವಲಯಗಳಲ್ಲಿ ಸಂಭವಿಸುವ ಖಾಸಗೀಕರಣವು ಸಾಮಾಜಿಕವಾಗಿ ವಂಚಿತರಾದವರನ್ನು ಉದ್ಯೋಗಗಳು ಮತ್ತು ಅವಕಾಶಗಳಿಂದ ಹೊರಗಿಡಲು ಕಾರಣವಾಗುತ್ತದೆ ಮತ್ತು ಹಿಂದಿನ ಮೀಸಲಾತಿ ಪದ್ಧತಿಯನ್ನು ಕೊನೆಗಾಣಿಸುತ್ತದೆ.

ನವ-ಉದಾರವಾದಿ ಆಳ್ವಿಕೆಯ ಫಲಾನುಭವಿಯಾಗಿರುವ ಮತ್ತು ದುಡಿಯುವ ಜನರ ಕುರಿತು ಕೊಂಚವೂ ಕನಿಕರವಿಲ್ಲದೆ ಅವರ ಜತೆ ಸಂಬಂಧವನ್ನು ಕಡಿದುಕೊಂಡಿರುವ ಮೇಲ್ಮಧ್ಯಮ ವರ್ಗವು ಈ ಪ್ರತಿ-ಕ್ರಾಂತಿಯ ಕಟ್ಟಾ ಬೆಂಬಲಿಗನಾಗಿದೆ. ಕಳೆದ ಹಲವಾರು ವರ್ಷಗಳಿಂದ ಭಾರತದಲ್ಲಿ ಸಂಭವಿಸಿದ ಸಾಮಾಜಿಕ ಪರಿವರ್ತನೆಗಳ ಹಿನ್ನಡೆಗೂ ಮತ್ತು ಹಿಂದುತ್ವದ ಮುನ್ನಡೆಗೂ ಸಂಬಂಧ ಇದೆ ಎಂದಾದರೆ, ಹಿಂದೂ ರಾಷ್ಟ್ರವು ನಿಜಕ್ಕೂ ಒಂದು ಪ್ರತಿ-ಕ್ರಾಂತಿಯನ್ನು ಉಂಟುಮಾಡುತ್ತದೆ.

ಶಬ್ದಗಳು ಅತಿಯಾಗಿ ಮೋಸಗೊಳಿಸಬಲ್ಲವು. ಹಿಂದೂ ರಾಷ್ಟ್ರವು ಇದಕ್ಕೊಂದು ಪರಿಪೂರ್ಣ ಉದಾಹರಣೆಯಾಗುತ್ತದೆ. ಹಿಂದೂ ರಾಷ್ಟ್ರದ ಆಗಮನವು ಹಿಂದೂಗಳಿಗೆ ಒಂದು ವಿಮೋಚನೆಯ ಕ್ಷಣ ಎಂಬಂತೆ ಹಿಂದುತ್ವವಾದಿಗಳು ಪ್ರಚಾರ ಮಾಡುತ್ತಾರೆ. ಇದಕ್ಕೆ ತದ್ವಿರುದ್ಧವಾಗಿ, ಬಿಕ್ಕಟ್ಟಿನಲ್ಲಿ ಸಿಲುಕಿ ಒದ್ದಾಡುತ್ತಿರುವ ನವ-ಉದಾರವಾದಿ ಆಳ್ವಿಕೆಯನ್ನು ಮೇಲೆತ್ತುವ ಹಿಂದೂ ರಾಷ್ಟ್ರವು ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗಳಿಗಾಗಿ ಚಲಾಯಿಸುತ್ತಿರುವ ಸರ್ವಾಧಿಕಾರವನ್ನು ಮರೆಮಾಡುತ್ತದೆ. ಹಿಂದೂ ರಾಷ್ಟ್ರವು ಬಹುಸಂಖ್ಯಾತರ ಹಿತಾಸಕ್ತಿಗಳಿಗೆ ಪೂರಕವಾಗುವುದರ ಬದಲಾಗಿ, ಕಳೆದ ಶತಮಾನದಲ್ಲಿ ಜನರು ಗಳಿಸಿದ ಸಾಮಾಜಿಕ ಮತ್ತು ರಾಜಕೀಯ ಲಾಭಗಳನ್ನು ಹಿಮ್ಮೆಟ್ಟಿಸುವ ಪ್ರತಿ-ಕ್ರಾಂತಿಯ ಅನಾವರಣವನ್ನು ಸೂಚಿಸುತ್ತದೆ. ಆದ್ದರಿಂದ, ಹಿಂದೂ ರಾಷ್ಟ್ರದತ್ತ ಸಾಗುವ ಚಲನೆಯನ್ನು ರೈತರ ಮೈತ್ರಿಯೊಂದಿಗೆ ತಡೆಯುವುದು ಕಾರ್ಮಿಕ ವರ್ಗದ ಐತಿಹಾಸಿಕ ಕರ್ತವ್ಯವಾಗುತ್ತದೆ.

ಚುನಾವಣಾ ಬಾಂಡ್:

ಕೋಟಕ್ ಮಹೀಂದ್ರಾ ಬ್ಯಾಂಕ್ ಪರವಾಗಿ ಆರ್‌ಬಿಐ ಕೆಲಸ ಕೋಟಕ್ ನಿಂದ ಬಿಜೆಪಿಗೆ ರೂ.60 ಕೋಟಿ ದೇಣಿಗೆ

ಕೊಟಕ್ ಕುಟುಂಬದ ಒಡೆತನದ NBFC ಇನ್ಫಿನಾ ಫೈನಾನ್ಸ್ (Infina Finance Private Ltd), ಬಿಜೆಪಿಗೆ 60 ಕೋಟಿ ರೂಪಾಯಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು ದೇಣಿಗೆ ನೀಡಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಚುನಾವಣಾ ಆಯೋಗಕ್ಕೆ ನೀಡಿದ ಮಾಹಿತಿಯ ಪ್ರಕಾರ, ಮುಂಬೈ ಮೂಲದ ಇನ್ಫಿನಾ ಫೈನಾನ್ಸ್ ಈ ಬಾಂಡ್‌ಗಳನ್ನು 1 ಕೋಟಿ ರೂಪಾಯಿ ಮುಖಬೆಲೆಯಲ್ಲಿ 2019, 2020 ಮತ್ತು 2021 ರಲ್ಲಿ ಖರೀದಿಸಿದೆ. ಈ ಎಲ್ಲಾ ಬಾಂಡ್‌ಗಳನ್ನು ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ನೀಡಲಾಗಿದೆ ಎಂದು ಅಂಕಿಅಂಶಗಳು ತೋರಿಸಿವೆ.



Infina Finance Private Ltd, ಅದರ ವೆಬ್‌ಸೈಟ್‌ನ ಪ್ರಕಾರ, 2008 ರಲ್ಲಿ ಸಂಘಟಿತವಾಗಿದೆ ಮತ್ತು ಬಂಡವಾಳ ಮಾರುಕಟ್ಟೆ ಹಣಕಾಸು ಮತ್ತು ಸ್ವಾಮ್ಯದ ವ್ಯಾಪಾರ ಮತ್ತು ಹೂಡಿಕೆಗಳ ವ್ಯವಹಾರದಲ್ಲಿದೆ. ವೆಬ್‌ಸೈಟ್‌ನ ಪ್ರಕಾರ, ಅದರ ಅಂಗಸಂಸ್ಥೆ ಮತ್ತು ಕೋಟಕ್ ಕುಟುಂಬದ ಮೂಲಕ ಕೋಟಕ್ ಮಹೀಂದ್ರಾ ಬ್ಯಾಂಕ್ ಜಂಟಿಯಾಗಿ ಒಡೆತನದಲ್ಲಿದೆ. ಆರ್‌ಬಿಐನಲ್ಲಿ ನೋಂದಾಯಿಸಲಾದ ಠೇವಣಿ ಸ್ವೀಕರಿಸದ, ವ್ಯವಸ್ಥಿತವಾಗಿ ಪ್ರಮುಖವಾದ ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿಯಾದ ಇನ್ಫಿನಾ 2022-23ರಲ್ಲಿ 105.55 ಕೋಟಿ ರೂ. ಗಳ ಲಾಭವನ್ನು ವರದಿ ಮಾಡಿದೆ. ಹಣಕಾಸು ವರ್ಷದಲ್ಲಿ ಸಂಸ್ಥೆಯ ಒಟ್ಟು ಆದಾಯ 227.84 ಕೋಟಿ ರೂ.

ಚುನಾವಣಾ ಬಾಂಡ್ ಖರೀದಿಸಿದವರ ಪಟ್ಟಿಯಲ್ಲಿ ಅಪರೂಪದ ಹೆಸರು ಉದಯ್ ಸುರೇಶ್ ಕೋಟಕ್. ಅವರು ದೇಶದ ಮೂರನೇ ಅತಿದೊಡ್ಡ ಖಾಸಗಿ ವಲಯದ ಬ್ಯಾಂಕ್ ಕೋಟಕ್ ಮಹೀಂದ್ರಾದಲ್ಲಿ ಷೇರುಗಳನ್ನು ಹೊಂದಿದ್ದಾರೆ. ಆದರೆ, ಬ್ಯಾಂಕ್ ನಿಗದಿಪಡಿಸಿದ ಮಿತಿಯನ್ನು ಮೀರಿ ಬ್ಯಾಂಕ್ ಷೇರುಗಳನ್ನು ಹೊಂದಿದೆ ಎಂದು ರಿಸರ್ವ್ ಬ್ಯಾಂಕ್ ಆಕ್ಷೇಪಿಸಿದೆ. ಈ ಪ್ರಕರಣವು ಅಂತಿಮವಾಗಿ ಡಿಸೆಂಬರ್ 2018 ರಲ್ಲಿ ನ್ಯಾಯಾಲಯದವರೆಗೂ ಹೋಯಿತು. ಆರ್‌ಬಿಐ ವಿರುದ್ಧ ಕೋಟಕ್ ಮಹೀಂದ್ರಾ ಬ್ಯಾಂಕ್ ನ್ಯಾಯಾಲಯಕ್ಕೆ ಮೊರೆ ಹೋಯಿತು. 13 ತಿಂಗಳ ನಂತರ ಜನವರಿ 2020 ರಲ್ಲಿ RBI ಹಿಂದೆ ಸರಿಯಿತು. ನ್ಯಾಯಾಲಯದ ಹೊರಗೆ ಇತ್ಯರ್ಥಪಡಿಸುವ ಕೋಟಕ್ ಮಹೀಂದ್ರಾ ಬ್ಯಾಂಕ್ ಮಾಡಿದ ಪ್ರಸ್ತಾಪವನ್ನು ರಿಸರ್ವ್ ಬ್ಯಾಂಕ್ ಒಪ್ಪಿಕೊಂಡಿತು.

ಏತನ್ಮಧ್ಯೆ, ಈ ವಿವಾದ ಇತ್ಯರ್ಥವಾಗುವ ಕೆಲವು ತಿಂಗಳ ಮೊದಲು, ಕೋಟಕ್ ಗ್ರೂಪ್ ಬಿಜೆಪಿಗೆ 35 ಕೋಟಿ ರೂ. ದೇಣಿಗೆ ನೀಡಿದೆ. ಪರಿಹಾರ ಹೇಳಿಕೆಗಳು ಹೊರಬೀಳುವ ಕೆಲ ದಿನಗಳ ಹಿಂದೆ ಬಿಜೆಪಿ ಪಕ್ಷದ ಖಾತೆಗೆ 10 ಕೋಟಿ ರೂ. ಸೇರಿದೆ. ಅದರ ನಂತರ, ಕೋಟಕ್ ಗ್ರೂಪ್‌ಗೆ ಸೇರಿದ ಇನ್ಫಿನಾ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್, ಏಪ್ರಿಲ್ 2021 ರಲ್ಲಿ ಬಿಜೆಪಿಗೆ 25 ಕೋಟಿ ರೂ. ಕೊಟ್ಟಿದೆ. ಕೋಟಕ್ ಮಹೀಂದ್ರಾ ಬ್ಯಾಂಕ್‌ನ ಎಂಡಿ ಮತ್ತು ಸಿಇಒ ಅವರನ್ನು ಇನ್ನೂ 32 ತಿಂಗಳು ಮುಂದುವರಿಸಲು ಆರ್‌ಬಿಐ ಮಾರ್ಗಸೂಚಿಗಳನ್ನು ಹೊರಡಿಸಿದ ಮೂರು ವಾರಗಳ ನಂತರ ದೇಣಿಗೆ ಬಿಜೆಪಿಯ ಖಜಾನೆಗೆ ತಲುಪಿದೆ. ರೇಟಿಂಗ್ ಏಜೆನ್ಸಿ ಕೇರ್ ರೇಟಿಂಗ್ಸ್ ಪ್ರಕಾರ, ಕೋಟಕ್ ಕುಟುಂಬವು ಇನ್ಫಿನಾ ಫೈನಾನ್ಸ್‌ನಲ್ಲಿ ಶೇಕಡಾ 50.01 ರಷ್ಟು ಪಾಲನ್ನು ಹೊಂದಿದ್ದರೆ, ಮುಂಬೈ ಮೂಲದ ಕೋಟಕ್ ಮಹೀಂದ್ರಾ ಕ್ಯಾಪಿಟಲ್ ಕಂಪನಿ ಲಿಮಿಟೆಡ್ 39.99 ಶೇಕಡಾ ಪಾಲನ್ನು ಹೊಂದಿದೆ. ಮಹೀಂದ್ರಾ ಕ್ಯಾಪಿಟಲ್ ಕಂಪನಿ ಲಿಮಿಟೆಡ್‌ನಲ್ಲಿ ಉದಯ್ ಕೋಟಕ್ ಅವರು ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಇನ್ಫಿನಾ ಫೈನಾನ್ಸ್ ಖರೀದಿಸಿದ ಒಟ್ಟು ರೂ. 60 ಕೋಟಿ ಬಾಂಡ್ ಗಳು ಒಂದೇ ಪಕ್ಷದ, ಅದೂ ಬಿಜೆಪಿಯ ಖಾತೆಗೆ ಹೋಗಿರುವುದು ಗಮನಾರ್ಹ.

ಏನಿದು ವಿವಾದ?

ಯಾವುದೇ ಕಂಪನಿಯ ವ್ಯವಹಾರವನ್ನು ಪ್ರಾರಂಭಿಸಿದ ನಂತರ 12 ವರ್ಷಗಳವರೆಗೂ ಪ್ರವರ್ತಕರು ಶೇ. 15 ಕ್ಕಿಂತ ಹೆಚ್ಚು ಪಾಲನ್ನು ಪಡೆಯಬಾರದು ಎಂದು ಆರ್‌ಬಿಐ ಫೆಬ್ರವರಿ 22, 2013 ರಂದು ಮಾರ್ಗಸೂಚಿಗಳನ್ನು ಹೊರಡಿಸಿದೆ. ಈ ಹಿನ್ನೆಲೆಯಲ್ಲಿ ಪ್ರವರ್ತಕರ ಪಾಲನ್ನು ಜೂನ್ 30, 2017 ರೊಳಗೆ ಶೇ. 30 ಕ್ಕೆ, ಡಿಸೆಂಬರ್ 31, 2018 ರೊಳಗೆ ಶೇ. 20 ಕ್ಕೆ ಮತ್ತು ಮಾರ್ಚ್ 31, 2020 ರೊಳಗೆ ಶೇ. 15 ಕ್ಕೆ ಇಳಿಸಲು ಆರ್‌ಬಿಐ ತನಗೆ ಸಲಹೆ ನೀಡಿದೆ ಎಂದು ಕೋಟಕ್ ಬ್ಯಾಂಕ್ ತಿಳಿಸಿದೆ. ಮೇ 22, 2017 ರಂದು, ಕೋಟಕ್ ಬ್ಯಾಂಕ್‌ನಲ್ಲಿ ತನ್ನ ಪಾಲನ್ನು ಉದಯ್ ಸುರೇಶ್ ಕೋಟಕ್ ಶೇ.29.79ಕ್ಕೆ ಇಳಿಸಿದರು. ಆಗಸ್ಟ್ 2, 2018 ರಂದು, ಪ್ರವರ್ತಕ ಪಾಲನ್ನು ಶೇ. 30 ರಿಂದ ಶೇ. 19.7 ಕ್ಕೆ ಇಳಿಸಲು ಹೊಸ ವಿಧಾನವನ್ನು ಅನುಸರಿಸಲು ಕೋಟಕ್ ಬ್ಯಾಂಕ್ ನಿರ್ಧರಿಸಿತು. ಆದರೆ ಅದಕ್ಕೆ ಆರ್‌ಬಿಐ ಒಪ್ಪಿಗೆ ನೀಡಿರಲಿಲ್ಲ. ಇದನ್ನು ಪ್ರಶ್ನಿಸಿ ಕೋಟಕ್ ಬ್ಯಾಂಕ್ ಬಾಂಬೆ ಹೈಕೋರ್ಟ್ ಮೆಟ್ಟಿಲೇರಿತ್ತು. ಆ ನಂತರ ಇನ್ಫಿನಾ ಫೈನಾನ್ಸ್ (Infina Finance) ಕಂಪನಿ ಎರಡು ಕಂತುಗಳಲ್ಲಿ ಬಿಜೆಪಿ ಪಕ್ಷಕ್ಕೆ ರೂ. 35 ಕೋಟಿ ದೇಣಿಗೆ ನೀಡಿದೆ. ಕೋಟಾಕ್ ಮತ್ತು ಆರ್‌ಬಿಐ ಜನವರಿ 29, 2020 ರಂದು ನ್ಯಾಯಾಲಯದ ಹೊರಗೆ ಇತ್ಯರ್ಥ ಮಾಡಿಕೊಳ್ಳುವ ಒಪ್ಪಂದಕ್ಕೆ ಬಂದವು.

ಸಿಪಿಐ(ಎಂ) ನ 4ನೇ ಪಟ್ಟಿಯಲ್ಲಿ ಇನ್ನೂ 7 ಅಭ್ಯರ್ಥಿಗಳು

CPI(M) ಅಭ್ಯರ್ಥಿಗಳು ಮತ್ತು ಸ್ಪರ್ಧಿಸಲಿರುವ ಸ್ಥಾನಗಳ ನಾಲ್ಕನೇ ಪಟ್ಟಿ

ಮಹಾರಾಷ್ಟ್ರ

1) ಹಿಂಗೋಲಿ- ವಿಜಯ್ ಗಭಾನೆ

ಪಶ್ಚಿಮ ಬಂಗಾಳ

1) ಬರಾಕ್‌ಪುರ-ದೇಬ್ದುತ್ ಘೋಷ್

2) ಬಸಿರ್ಹತ್-ನಿರಪಾದ ಸರ್ದಾರ್

3) ಡೈಮಂಡ್ ಹಾರ್ಬರ್ - ಪ್ರತೀಕ್ ಉರ್ ರೆಹಮಾನ್ 4) ಮಥುರಾಪುರ (SC)- ಡಾ. ಶರತ್ ಚಂದ್ರ ಹಲ್ದಾರ್ 5) ಜಾರ್ಗ್ರಾಮ್ (ST) -ಸೋನಾಮಣಿ ತುಡು (W) 6) ಅರಂಬಾಗ್ (SC)- ಬಿಪ್ಲಬ್ ಕುಮಾರ್ ಮೊಯಿತ್ರಾ.

ಇದಕ್ಕೂ ಮೊದಲು ಬಿಡುಗಡೆ ಮಾಡಿದ 3 ಪಟ್ಟಿಗಳಲ್ಲಿ ಒಟ್ಟು 44 ಕ್ಷೇತ್ರಗಳೂ ಸೇರಿದಂತೆ, ಇದುವರೆಗೆ ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಸ್ಪರ್ಧಿಸುವ ಒಟ್ಟು 51 ಅಭ್ಯರ್ಥಿಗಳ ಪಟ್ಟಿಯನ್ನು ಸಿಪಿಐ(ಎಂ) ಬಿಡುಗಡೆ ಮಾಡಿದಂತಾಗಿದೆ.

ಭಾರತದಲ್ಲಿ ವೈರಸ್ ಹರಡುವಿಕೆ ನಿಯಂತ್ರಿಸಲಿಲ್ಲ.......

ಪುಟ 11 ರಿಂದ

'ನಮಸ್ತೆ ಟ್ರಂಪ್' ಕಾರ್ಯಕ್ರಮ

ಕೊವಿಡ್-19 ವೈರಸ್ ಚೀನಾ ಗಡಿ ದಾಟಿ ಜಗತ್ತಿನ ಇತರೆ ದೇಶಗಳಿಗೂ ಕಾಲಿಟ್ಟಿತ್ತು, ಇದೇ ಸಂದರ್ಭದಲ್ಲಿ 2020ರ ಫೆಬ್ರವರಿ ತಿಂಗಳಿನಲ್ಲಿ ಗುಜರಾತಿನಲ್ಲಿ ನಡೆದ 'ನಮಸ್ತೆ ಟ್ರಂಪ್' ಕಾರ್ಯಕ್ರಮಕ್ಕೆ ಉದ್ಯಮಿಗಳ ಏಜೆಂಟರು, ಪತ್ರಕರ್ತರು, ಅಮೆರಿಕದ ಭದ್ರತಾ ಸಿಬ್ಬಂದಿ ಸೇರಿದಂತೆ ವಿದೇಶದಿಂದ ಸಾವಿರಾರು ಜನರು ಭಾರತಕ್ಕೆ ಬಂದರು. ಧರ್ಮ ಪ್ರಚಾರಕ್ಕಾಗಿ ಮುಸ್ಲಿಂ ಧಾರ್ಮಿಕ ಪ್ರಚಾರಕರೂ ಬಂದರು. ಉದ್ಯೋಗ, ಪ್ರವಾಸಗಳಿಗಾಗಿ ವಿದೇಶಗಳಿಗೆ ಹೋಗಿದ್ದ ಲಕ್ಷಾಂತರ ಜನರನ್ನು ಭಾರತ ಸರ್ಕಾರವೇ ವಿಮಾನಗಳ ಮೂಲಕ ಕರೆಸಿಕೊಂಡಿತು. ಅವರನ್ನು ನಿರ್ದಿಷ್ಟ ದಿನಗಳ ಕಾಲ ಕ್ವಾರಂಟೈನ್ ನಲ್ಲಿ ಇಡದೇ ಅವರವರ ಮನೆಗಳಿಗೆ ಕಳುಹಿಸಿಕೊಟ್ಟು ದೇಶಾದ್ಯಂತ ವೈರಸ್ ವೇಗವಾಗಿ ಹರಡಲು ಕಾರಣರಾದರು.

ಸೋಂಕಿತರ ರಕ್ಷಣೆಗೆ ಬೇಕಾದ ಪೂರ್ವಸಿದ್ಧತೆ ಮಾಡಿಕೊಳ್ಳಲಿಲ್ಲ

ಆ ನಂತರವೂ ವೈರಸ್ ವ್ಯಾಪಕವಾಗಿ ಹರಡುವುದನ್ನು ತಡೆಯಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿಲ್ಲ. ವ್ಯಾಪಕವಾದ ತಪಾಸಣೆಗೆ ಮುಂದಾಗಲಿಲ್ಲ. ಸೋಂಕಿತರ ರಕ್ಷಣೆಗೆ ಬೇಕಾದ ಪೂರ್ವಸಿದ್ಧತೆಯನ್ನೂ ಮಾಡಿಕೊಳ್ಳಲಿಲ್ಲ ಅದಾಗಲೇ ಇದ್ದ ಆಸ್ಪತ್ರೆಗಳನ್ನು ಸೋಂಕಿತರಿಗೆ ಅಗತ್ಯ ತುರ್ತು ಚಿಕಿತ್ಸೆ ಒದಗಿಸಲು ಅವಶ್ಯಕವಾದ ಮೂಲ ಸೌಕರ್ಯ ಹೆಚ್ಚಿಸಲಿಲ್ಲ. ಸೋಂಕಿತರ ಸಂಖ್ಯೆ ಹೆಚ್ಚಾಗುತ್ತದೆ ಎಂಬ ಸೂಚನೆ ಇದ್ದರೂ ಹೊಸ ಆಸ್ಪತ್ರೆಗಳ ನಿರ್ಮಾಣ, ಹೆಚ್ಚಿನ ಹಾಸಿಗೆಗಳ ವ್ಯವಸ್ಥೆ, ಚಿಕಿತ್ಸೆ ನೀಡಲು ಅಗತ್ಯ ಔಷಧಿ, ಜೀವ ರಕ್ಷಕ ಆಮ್ಲಜನಕ ಉತ್ಪಾದನೆ ಮತ್ತು ಪೂರೈಕೆ, ಸಂಗ್ರಹ ಮಾಡಿಕೊಳ್ಳಲಿಲ್ಲ. ವೈದ್ಯಕೀಯ ಪರಿಕರಗಳನ್ನು ಹೊಂದಿಸುವ ಕೆಲಸವನ್ನು ಸರ್ಕಾರ ಮಾಡಲಿಲ್ಲ. ಸೋಂಕಿತರಿಗೆ ಉಚಿತ ಚಿಕಿತ್ಸೆ ಮತ್ತು ಔಷಧ ನೀಡುವ ವ್ಯವಸ್ಥೆ ಮಾಡಲಿಲ್ಲ.

ಏಕಾಏಕಿ ಲಾಕ್ ಡೌನ್ ಘೋಷಣೆ

ಬದಲಾಗಿ ಮೋದಿ ಸರ್ಕಾರ ಮಾಡಿದ್ದೇನೆಂದರೆ, ದೇಶಾದ್ಯಂತ ಲಾಕ್ ಡೌನ್ ಘೋಷಣೆ. ಮೋದಿಯವರು ಅವೈಜ್ಞಾನಿಕವಾಗಿ ಮತ್ತು ಏಕಾಏಕಿ ಲಾಕ್ ಡೌನ್ ಘೋಷಣೆ ಮಾಡಿ 'ಎಲ್ಲರೂ ಮನೆಯಲ್ಲೇ ಇರಿ' ಎಂದು ಉಪದೇಶ ಮಾಡುವ ಮೂಲಕ ಕೊರೊನಾ ಭಯದಲ್ಲಿದ್ದ ಜನರನ್ನು ಮತ್ತಷ್ಟು ಸಂಕಷ್ಟಗಳಿಗೆ ದೂಡಿದರು. ಜನರು ಕೆಲಸಕ್ಕೆ ಹೋಗಲಾರದೆ, ಹಣ ಇಲ್ಲದೆ, ಆಹಾರವಿಲ್ಲದೆ ನರಳುವಂತಾಯಿತು. ಅಗತ್ಯ ವಸ್ತುಗಳನ್ನು, ಆಹಾರ ಪದಾರ್ಥಗಳನ್ನು, ಹಾಲು, ಹಣ್ಣು, ರೋಗಿಗಳಿಗೆ ಔಷಧಿ, ಇವುಗಳನ್ನು ಉಚಿತವಾಗಿ ಮನೆ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಿಲ್ಲ.... ಸರ್ಕಾರದ ವೈಫಲ್ಯಗಳನ್ನು ಹೀಗೆ ಪಟ್ಟಿ ಮಾಡಿ ಹೇಳುತ್ತಾ ಹೋಗಬಹುದು. ಆಳುವವರ ಬೇಜವಾಬ್ದಾರಿ ನಡೆಯಿಂದಾಗಿ ಇಡೀ ದೇಶ ಆತಂಕದಲ್ಲಿ ಮುಳುಗುವ ಸ್ಥಿತಿಗೆ ಬಂದಿತ್ತು. ಇವರಲ್ಲಿ ದುಡಿಯುವ ವರ್ಗ, ಕೆಲಸಕ್ಕಾಗಿ ತಮ್ಮ ಹಳ್ಳಿಗಳನ್ನು ತೊರೆದು ನಗರ, ಪಟ್ಟಣಗಳಿಗೆ ವಲಸೆ ಹೋದ ಕಾರ್ಮಿಕರು, ಹೊರ ರಾಜ್ಯಗಳಿಗೆ ಹೋಗಿದ್ದ, ಹೊರ ರಾಜ್ಯಗಳಿಂದ ಬಂದಿದ್ದ ವಲಸೆ ಕಾರ್ಮಿಕರು ಎದುರಿಸಿದ ಸಂಕಷ್ಟಗಳು ಅಷ್ಟಿಷ್ಟಲ್ಲ. ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಹೋಗಿ ಸೇರಿಕೊಳ್ಳಲು ಯಾವುದೇ ಸಾರಿಗೆ ವ್ಯವಸ್ಥೆ ಇರಲಿಲ್ಲ. ರೈಲು, ಬಸ್ಸು ಎಲ್ಲವೂ ಸ್ಥಗಿತಗೊಂಡಿದ್ದವು. ವಲಸೆ ಕಾರ್ಮಿಕರು ತಾವಿದ್ದ ಊರುಗಳಿಂದ ತಮ್ಮ ಸ್ವಂತ ಊರುಗಳಿಗೆ ನೂರಾರು, ಸಾವಿರಾರು ಕಿಲೋಮೀಟರ್ ದೂರ ನಡೆದು ಹೋಗುತ್ತಿದ್ದ ದೃಶ್ಯಗಳು, ಎಳೆಯ ಮಕ್ಕಳನ್ನು ಹೊತ್ತ ತಂದೆ ತಾಯಿಗಳು, ಗರ್ಭಿಣಿ ಸ್ತ್ರೀಯರು, ಹಿರಿಯ ವಯಸ್ಸಿನವರು ನಡೆದು, ನಡೆದು ಸುಸ್ತಾಗಿ, ಅನ್ನ ನೀರಿಲ್ಲದೆ ಹಾದಿಯಲ್ಲೇ ಪ್ರಾಣ ಬಿಟ್ಟವರೆಷ್ಟೋ, ರೈಲು ಹಳಿಗಳ ಮೇಲೆ ನಡೆದು ಹೋಗುವಾಗ ಅನಿರೀಕ್ಷಿತವಾಗಿ ಬರುವ ರೈಲಿಗೆ ಸಿಲುಕಿ ಸತ್ತವರೆಷ್ಟೊ, ಇವೆಲ್ಲವೂ ಇಂದಿಗೂ ಮನಸ್ಸಿಗೆ ಘಾಸಿ ಉಂಟುಮಾಡುತ್ತವೆ.

ಗಂಗಾ ನದಿಯಲ್ಲಿ ತೇಲಿದ ಶವಗಳು

ಎರಡನೆಯ ಅಲೆಯ ಸಮಯದಲ್ಲಿ ದೇಶದ ಅನೇಕ ಭಾಗಗಳಲ್ಲಿನ ಆರೋಗ್ಯ ವ್ಯವಸ್ಥೆಯು ತೀರಾ ಹದಗೆಟ್ಟಿತ್ತು. ಸ್ಮಶಾನಗಳು ಕೋವಿಡ್ ನಿಂದ ಮೃತಪಟ್ಟವರ ಶವಗಳಿಂದ ತುಂಬಿ ತುಳುಕುತ್ತಿದ್ದವು, ದೇಶದೆಲ್ಲೆಡೆ ಸ್ಮಶಾನಗಳ ಬಳಿ ಶವಗಳನ್ನು ಹೊತ್ತುತಂದ ವಾಹನಗಳ ಸಾಲುಗಳು ಸುದ್ದಿಗಳಾಗಿದ್ದವು. ಗಂಗಾ ನದಿಯಲ್ಲಿ ನೀರಿನ ಮೇಲೆ ತೇಲುತ್ತಿದ್ದ ಶವಗಳ ದೃಶ್ಯಗಳು, ಯಾವುದೇ ವಿಧಿ ವಿಧಾನಗಳಿಲ್ಲದೆ ನಡೆದ ಅಂತ್ಯಕ್ರಿಯೆಗಳು, ಸಾಮೂಹಿಕ ಶವಸಂಸ್ಕಾರಗಳ ವರದಿಗಳು, ಶವಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಮೂಟೆ ಕಟ್ಟಿ, ಲಾರಿಯಲ್ಲಿ ತುಂಬಿಕೊಂಡು ಬಂದು, ಅಗೆದ ಗುಂಡಿಗಳಿಗೆ ಹಾಕುತ್ತಿದ್ದ ದೃಶ್ಯಗಳು ಎಂತವರ ಮನಸ್ಸನ್ನೂ ಕಲಕುವಂತಿತ್ತು. ತಮ್ಮ ಕುಟುಂಬದ, ತಮ್ಮ ಸಂಬಂಧಿಕರ, ತಮ್ಮ ಸ್ನೇಹಿತರ ಮುಖವನ್ನು ಕೊನೆಯ ಬಾರಿ ನೋಡಲಾಗದ, ತಮ್ಮ ಸಂಪ್ರದಾಯದಂತೆ ಅಂತ್ಯ ಸಂಸ್ಕಾರ ಮಾಡಲಾಗದ, ಭಯಾನಕ ಪರಿಸ್ಥಿತಿಯ ಸುದ್ದಿಗಳು ಗಟ್ಟಿ ಹೃದಯದವರನ್ನೂ ಕಲಕುವಂತಿದ್ದವು.

ಹೋರಾಟ ನಿರತರ ವಿರುದ್ಧ ಅಪಪ್ರಚಾರ

ಇದರ ಜೊತೆಗೆ, ತಮ್ಮ ಸೈದ್ಧಾಂತಿಕ ವಿರೋಧಿ ರಾಷ್ಟ್ರವಾದ ಚೀನಾದವರೇ ಜಗತ್ತಿಗೆಲ್ಲಾ ಕೊರೋನಾ ವೈರಸ್ ಹರಡುತ್ತಿದ್ದಾರೆ ಎಂದರು, ದೆಹಲಿಯಲ್ಲಿ ಹೋರಾಟ ನಿರತರಾಗಿದ್ದ ರೈತರೂ ಚೀನಾದವರ ಜೊತೆ ಸಾಮೀಲಾಗಿ ವೈರಸ್ ಹರಡುತ್ತಿದ್ದಾರೆ ಎಂದರು. ಸಿಎಎ ವಿರುದ್ಧ ಹೋರಾಟ ನಡೆಸುತ್ತಿದ್ದವರ ಮೇಲೂ ಇಂತದೇ ಆರೋಪಗಳನ್ನು ಮಾಡಿದರು. ಒಟ್ಟಾರೆಯಾಗಿ, ಸಾಂಕ್ರಾಮಿಕ ರೋಗವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಮೋದಿ ಸರ್ಕಾರದ ವೈಫಲ್ಯಗಳ ವಿರುದ್ಧ, ಜನವಿರೋಧಿ, ರೈತವಿರೋಧಿ, ಸಂವಿಧಾನ ವಿರೋಧಿ ನೀತಿಗಳ ವಿರುದ್ಧ ಧ್ವನಿ ಎತ್ತುತ್ತಿದ್ದ ಎಲ್ಲರ ಮೇಲೂ ಸಂಘಪರಿವಾರ ಮತ್ತು ಮೋದಿ ಸರ್ಕಾರ ಈ ರೀತಿಯ ಆರೋಪಗಳನ್ನು ಹೊರೆಸುವ ಮೂಲಕ ಜನರನ್ನು ಹೋರಾಟಗಾರರ ಮತ್ತು ಅಲ್ಪಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡಿದರು.

ಕೊರೋನಾ ವೈರಸ್ ಗೆ ಲಕ್ಷಾಂತರ ಸಾವಿರ ಜನರು ಬಲಿಯಾದರು. ಇಂತಹ ವೈರಸ್ ಗಳಿಗೆ ಕೆಲ ಸಮಯದಲ್ಲೇ ಒಂದು ಅಂತ್ಯ ಎಂಬುದಿರುತ್ತದೆ. ಆದರೆ, ಧಾರ್ಮಿಕ ಮೂಲಭೂತವಾದಿಗಳು ಹರಡಿದ, ಹರಡುವ 'ಕೋಮು ವೈರಸ್' ಭಾರತವನ್ನು ಬಹುಕಾಲ ಕಾಡಲಿದೆ. ಇದು ನಮ್ಮೆಲ್ಲರಿಗೂ ಬಾರಿ ಅಪಾಯ ತಂದೊಡ್ಡುತ್ತದೆ.


NEW No. MAG(3)/NPP/205/2021-2022
JANASHAKTHI KANNADA VARA PATRIKE April 15-21, 2024 Price: Rs. 10/- Date of Publication: 12 April 2024 RNI No. KARKAN /2006/17926 Posted on 17-04-2024
Posted at BG PSO, BG - 560026 **Posted at Periodical Rate -** Rs. 2

ಪುಸ್ತಕ ಪರಿಚಯ: ಮೂರು ದಶಕಗಳ ಕರಾವಳಿ ಪತನದ ಕಿರುಚರಿತ್ರೆ

ಕರಾವಳಿ ಕನಾಟಕದಲ್ಲಿ ಅಭಿವೃದ್ದಿಯ ಬದಲಿಗೆ ಧರ್ಮ, ಮತೀಯತೆ, ಭಾವುಕತೆಯ ಆಧಾರದ ರಾಜಕಾರಣ ಕಟ್ಟಿದ ಬಿಜೆಪಿ ಈಗ ಸತತ ಎಂಟು ಚುನಾವಣೆಗಳನ್ನು ಗೆದ್ದು 33 ವರ್ಷಗಳಿಂದ ತನ್ನದೇ ರಾಜಕೀಯ ಸಾಮ್ರಾಜ್ಯವನ್ನು ಕಟ್ಟಿದೆ. ಈ 33 ವರ್ಷಗಳ ದೀರ್ಘ ಅವಧಿಯನ್ನು ಹಿಂತಿರುಗಿ ನೋಡಿ ಈ ಅವಧಿಯಲ್ಲಿ 'ಕರಾವಳಿಯ ಪತನದ ಚರಿತ್ರೆ'ಯನ್ನು ಕಟ್ಟಿಕೊಟ್ಟಿದ್ದಾರೆ ಚಿಂತಕ-ಹೋರಾಟಗಾರ-ಲೇಖಕರಾದ ನವೀನ್ ಸೂರಿಂಜೆ ಮತ್ತು ಮುನೀರ್ ಕಾಟಿಪಳ್ಳ.

ಕರಾವಳಿಯ ಹೆಮ್ಮೆಯ ವಿಮಾನ ನಿಲ್ದಾಣ ಅದಾನಿಗೆ ಮಾರಾಟ, ಮಂಗಳೂರು ಬಂದರಿನ ಖಾಸಗೀಕರಣ, ಮಂಗಳೂರು-ಬೆಂಗಳೂರು ರೈಲು ಮಾರ್ಗದಲ್ಲಿ ಕರಾವಳಿಯವರಿಗೆ ಸೀಟು ಸಿಗದ ಪರಿಸ್ಥಿತಿ, ಜೇಪಲ್ಲಿ ಓಡಾಡ್ತಿದ್ದ ಅಡಿಕೆ, ಕಾಳುಮೆಣಸು ಕೃಷಿಕರ ಆತ್ಮಹತ್ಯೆ, ಮೊಗವೀರರನ್ನು ಬೀದಿಗೆ ತಂದ ಆಮದಾದ 'ಮೋದಿ ಮೀನು', ಕರಾವಳಿಯ ಉದ್ಯಮಶೀಲತೆಯ ಕುರುಹುಗಳಾದ ಹೆಮ್ಮೆಯ ವಿಜಯ ಮತ್ತು ಕಾರ್ಪೊರೇನ್ ಬ್ಯಾಂಕಗಳ ಮಾಯ, ಖಾಸಗಿ ಆಸ್ಪತ್ರೆ ಮಾಫಿಯಾದ ಬೆಳವಣಿಗೆ, ಈ ಪ್ರದೇಶದ ಹೆಂಚು, ಬೀಡಿಉದ್ಯಮಗಳ ಅವನತಿಯೊಂದಿಗೆ ಕಮರಿದ ಜನರ ಬದುಕು, ಎಂ.ಆರ್.ಪಿ.ಎಲ್ ನಂತಹ ಹೊಸ ಉದ್ಯಮಗಳಲ್ಲಿ ಸ್ಥಳೀಯರಿಗೆ ಉದ್ಯೋಗದ ವಂಚನೆ - ಮುಂತಾದ ಕಳೆದ ಮೂರು ದಶಕಗಳ ಆರ್ಥಿಕ ಅವನತಿಯ ಪ್ರಮುಖ ಆಯಾಮಗಳ ಬಗ್ಗೆ ಕಿರಿದಾದರೂ ಅರ್ಥಪೂರ್ಣ ಚರಿತ್ರೆಯ ಕಥನವಿದೆ ಈ ಕಿರು ಪುಸ್ತಕದಲ್ಲಿ.

ಇದೇ ಅವಧಿಯಲ್ಲಿ ಕೋಮುವಾದ-ಜಾತಿವಾದದ ವಿಷ ಹರಡುತ್ತಿದ್ದು, ಈ ಪ್ರದೇಶದ ದೇಶದ ಕೋಮುವಾದದ ಪ್ರಯೋಗಶಾಲೆಯಾಗಿರುವುದು, ಇದರ ಪರಾಕಾಷ್ಟೆ ಮತ್ತು ಪ್ರತೀಕವಾದಶ್ರೀ ನಾರಾಯಣ ಗುರುಗಳ ಸ್ತಬ್ಧಚಿತ್ರಕ್ಕೆ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಅವಕಾಶ ನಿರಾಕರಿಸಿದ್ದರ ಕುರಿತ ಕಿರುಚಿತ್ರಣವಿದೆ.



ಆದರೆ ಈ ಹತಾಶೆ ತರಬಹುದಾದ ಚಿತ್ರಣದ ನಂತರ ಇದನ್ನು ಮೆಟ್ಟಿ ನಿಲ್ಲುವ 'ನಾವು ಕೊಲ್ಲುವವರೂ, ಕೊಲ್ಲಲ್ಪಡುವವರೂ ಅಲ್ಲ. ಈ ನೆಲವನ್ನು ಆಳುವವರು' ಆಗಬೇಕು ಎಂಬ ಸ್ಫೂರ್ತಿದಾಯಕ ಕರೆ ಮತ್ತು ದೃಢ ನಿರ್ಧಾರದೊಂದಿಗೆ ಈ ಕಿರುಪುಸ್ತಕ ಅರ್ಥಪೂರ್ಣವಾಗಿ ಕೊನೆಗೊಳ್ಳುತ್ತದೆ.

ಜನಕೇಂದ್ರಿತ ರಾಜಕಾರಣಕ್ಕೆ ಮತ್ತೊಮ್ಮೆ ಮುನ್ನುಡಿ ಬರೆಯುವುದು ಕರಾವಳಿಗರ ಆಧ್ಯತೆಯಾಗಬೇಕು. ಮುಂದಿನ ತಲೆಮಾರು ಒಳ್ಳೆಯ ಭವಿಷ್ಯವನ್ನು ಕಾಣವಂತಾಗಬೇಕು, ಕಡಲ ತಡಿಯ ಸುಂದರ, ಸೌಹಾರ್ದದ ಕುಡ್ಲ ಮರು ನಿರ್ಮಾಣ ಆಗಬೇಕು ಅಂದರೆ ಜನ ಪ್ರಜ್ಞಾವಂತಿಕೆ ಪ್ರದರ್ಶಿಸಬೇಕು. ಆ ರೀತಿಯ ಪ್ರಜ್ಞಾವಂತಿಕೆಯನ್ನು ಸದಾ ಕಾಲ ಜಾಗೃತವಾಗಿಡಲು ಈ ಕಿರುಪುಸ್ತಕ ಪ್ರಯತ್ನಿಸಿದೆ. ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದೆ.

ಒಂದು ದೊಡ್ಡ ರಾಜಕೀಯ ಪಲ್ಲಟಕ್ಕೆ ಇಡೀ ದೇಶದಂತೆ ಕರಾವಳಿ ಕರ್ನಾಟಕ ತೆರೆದುಕೊಳ್ಳುತ್ತಿರುವ ಈ ನಿರ್ಣಾಯಕ ಗಳಿಗೆಯಲ್ಲಿ ಈ ಕಿರುಪುಸ್ತಕ ಓದಲೇಬೇಕಾದ, ದೊಡ್ಡ ಸಂಖ್ಯೆಯಲ್ಲಿ ಪ್ರಸಾರ ಮಾಡಬೇಕಾದ ಪುಸ್ತಕ. 'ಕರಾವಳಿ ಪತನದ ಚರಿತ್ರೆ'ಯ ಸ್ಯಾಂಪಲ್ ಆಗಿ ಎರಡು ಆಯ್ದ ಭಾಗಗಳು ಇಲ್ಲಿವೆ.

*****

ಬರದಲ್ಲೂ ಮನೆ-ಮಠ ರಕ್ಷಿಸಿದ ಹಾಜಿ ಅಬ್ದುಲ್ಲರ ಬ್ಯಾಂಕ್ ಮಾಯ

ಹಾಜಿ ಅಬ್ದುಲ್ಲರು 1906ರಲ್ಲಿ ಉಡುಪಿಯಲ್ಲಿ ಕಾರ್ಪೊರೇಶನ್ ಬ್ಯಾಂಕನ್ನು ಹುಟ್ಟು ಹಾಕಿದರು. ಅದು ಬ್ರಿಟೀಷ್ ಆಳ್ವಿಕೆಯ ಕಾಲ. ತನ್ನಲ್ಲಿದ್ದ 700 ಎಕರೆ ಕೃಷಿ ಭೂಮಿಯನ್ನು ಭೂಮಿಯನ್ನು ಬಹುತೇಕ ಗೇಣಿದಾರ ರೈತರಿಗೆ ನಾವು ಊಹಿಸಲೂ ಸಾಧ್ಯವಾಗದ ಕಾಲದಲ್ಲಿ ಹಾಜಿ ಅಬ್ದುಲ್ಲರು ರೈತರಿಗೆ ಬಿಟ್ಟುಕೊಟ್ಟಿದ್ದರು. ಉಳಿದ ಬಹುತೇಕ ಭೂಮಿಗಳನ್ನು ಶಾಲೆ, ಆಸ್ಪತ್ರೆಗೆ ದಾನವಾಗಿ ನೀಡಿದ್ದರು. ಈಗಲೂ ಉಡುಪಿ ಸರಕಾರಿ ಆಸ್ಪತ್ರೆಯ ಜಾಗ ಹಾಜಿ ಅಬ್ದುಲ್ಲರ ಹೆಸರಿನಲ್ಲಿದೆ. ಮಧ್ವಾಚಾರ್ಯರು ಸ್ಥಾಪಿಸಿ ಹೊರಟ ಉಡುಪಿಯ ಅಷ್ಟಮಠ ಆಗ ಭೀಕರ ಸಮಸ್ಯೆಗಳನ್ನು ಎದುರಿಸುತ್ತಿದ್ದ ದಿನವದು. ಬರದ ಪರಿಣಾಮವಾಗಿ ಅಷ್ಟಮಠದ ಸ್ವಾಮೀಜಿಗಳಿಗೆ ದೀಪದ ಎಣ್ಣೆಗೂ ತಾತ್ವಾರ ಇತ್ತು. ಆಗ ಅಳಿವಿನಂಚಿನಲ್ಲಿದ್ದ ಅಷ್ಟಮಠಕ್ಕೆ ಎಣ್ಣೆ, ಅಕ್ಕಿ, ಹಣ ನೀಡಿ ಕಾಪಾಡಿದವರು ಇದೇ ಹಾಜಿ ಅಬ್ದುಲ್ಲ. ಆ ನಂತರ ಹಾಜಿ ಅಬ್ದುಲ್ಲರು ಅಷ್ಟಮಠದ ಲಕ್ಷದೀಪೋತ್ಸವಕ್ಕೆ ಖಾಯಂ ಅತಿಥಿಯಾಗಿದ್ದರು. ಹಾಜಿ ಅಬ್ದುಲ್ಲರನ್ನುರಾಜ ಮಹಾರಾಜರನ್ನು ದ’ ೀ ವ’ ಸ್ಥಾ ನ’ ದ’ ೂ ಳ’ ಗ’ ಕ’ ರ’ ದ’ ೂ ೦ ು’ ು ು ್ಯ ವಾ ಗ’ ನೀಡಲಾಗುತ್ತಿದ್ದ ಹಗಲು ದೀವಿಟಿಗೆಯ ಮರ್ಯಾದೆಯನ್ನು ನೀಡಲಾಗುತ್ತಿತ್ತು. ಕೇವಲ ಮಠ ಮಾತ್ರವಲ್ಲ, ಕರಾವಳಿಯ ಜನ ಬರದಲ್ಲಿ ತತ್ತರಿಸುತ್ತಿದ್ದಾಗ ತನ್ನಲ್ಲಿದ್ದ ಅಕ್ಕಿ, ದಿನಸಿ ಸಾಮಾನುಗಳು ಇಡೀ ಕರಾವಳಿಗೆ ದಾನ ಮಾಡಿದ, ಹಾಗೆಯೇ ವಿದೇಶದಿಂದ ಅಕ್ಕಿಯನ್ನು ಆಮದು ಮಾಡಿಸಿಕೊಂಡುಜನರಿಗೆ ಹಂಚಿದ್ದ ಮಹಾನುಭಾವರು ಇವರು.

ಇಷ್ಟೇ ಕಾರಣಕ್ಕೆ ನಮಗೆ ಈ ಕಾಲದಲ್ಲಿ ಹಾಜಿ ಅಬ್ದುಲ್ಲರು ಮುಖ್ಯರಾಗುವುದಲ್ಲ. ಈಗ ನಡೆಯುವ ಬ್ಯಾಂಕಿಂಗ್ ಬೆಳವಣಿಗೆಗಳ ಜೊತೆ ಹಾಜಿ ಅಬ್ದುಲ್ಲರು ಜಗಳ ಮಾಡುತ್ತಾರೆ. ಅಂದು ತನ್ನಲ್ಲಿದ್ದ ಭೂಮಿಯನ್ನು, ಹಣವನ್ನು ದೇವಸ್ಥಾನ, ಶಾಲೆ, ಆಸ್ಪತ್ರೆ, ಬ್ಯಾಂಕಿಗೆ ದಾನ ಮಾಡಿ ಅಬ್ದುಲ್ಲರು ದಿವಾಳಿಯಾಗುತ್ತಾ ಬರುತ್ತಾರೆ. ಆದರೆ ಅವರು ಕಟ್ಟಿ ಬೆಳೆಸುತ್ತಿದ್ದ ಬ್ಯಾಂಕ್ ದಿನದಿಂದ ದಿನಕ್ಕೆ ಉದ್ದಾರವಾಗುತ್ತಿರುತ್ತದೆ. ಕೊನೆಗೆ ಅಬ್ದುಲ್ಲರು ತನ್ನಲ್ಲಿದ್ದ ಮೂರು ಹಡಗುಗಳನ್ನು ಉಳಿಸಿಕೊಳ್ಳಲು ತಾನೇ ಸ್ಥಾಪಕ ಅಧ್ಯಕ್ಷನಾಗಿದ್ದ ಕಾರ್ಪೊರೇಷನ್ ಬ್ಯಾಂಕಿನಿಂದ ಸಾಲ ಪಡೆಯುತ್ತಾರೆ. ಆದರೆ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಬ್ಯಾಂಕಿನ ಸಿಬ್ಬಂದಿಗಳು ಬ್ಯಾಂಕ್‌ನ ಸ್ಥಾಪಕಾಧ್ಯಕ್ಷ ಅಬ್ದುಲ್ಲರ ಹಡಗನ್ನು ಜಪ್ತಿ ಮಾಡುತ್ತಾರೆ. 1935 ರಲ್ಲಿ ಅವರೇ ಮಾಲೀಕರು ಆಗಿದ್ದ ಕಾರ್ಪೊರೇಷನ್ ಬ್ಯಾಂಕಿನ ಒಬ್ಬ ಸಿಬ್ಬಂದಿ ಅವರ ಸಾಲ ವಸೂಲಿ ಮಾಡುತ್ತಾನೆ. ಆಗ ಸಿಬ್ಬಂದಿಯನ್ನು ಕೆಲಸದಿಂದ ಕಿತ್ತೆಸೆಯುವ ಎಲ್ಲಾ ಅವಕಾಶಗಳು ಇದ್ದರೂ ಅಧಿಕಾರ ದುರುಪಯೋಗ ಮಾಡದೇ ಅವರು ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಾರೆ. ಬದುಕಲು ಸಾಧ್ಯವಾಗದೆ ಅಬ್ದುಲ್ಲರು 1935 ಆಗಸ್ಟ್ 12ರಂದು ಆತ್ಮಹತ್ಯೆ ಮಾಡಿಕೊಂಡರು. ಕಾನೂನು ಕಟ್ಟಳೆಗಳು ಇಲ್ಲದ ದಿನಗಳಲ್ಲೂ ತನ್ನ ಸಾಲಕ್ಕಾಗಿ, ತನ್ನ ಸಾವು ಬದುಕಿನ ಹೋರಾಟಕ್ಕಾಗಿ ಅವರು ಬ್ಯಾಂಕನ್ನು ಬಲಿಕೊಡುವುದಿಲ್ಲ. ಇಂತಹ ಮಹಾತ್ಮ ಕಟ್ಟಿದ್ದ ಕಾರ್ಪೊರೇಷನ್ ಬ್ಯಾಂಕನ್ನು ಕರಾವಳಿಯಿಂದ ಇಲ್ಲವಾಗಿಸಲಾಗಿದೆ.

ಕರಾವಳಿಯಲ್ಲಿ ಹಾಜಿ ಅಬ್ದುಲ್ಲರಿಂದ ಹುಟ್ಟಿಕೊಂಡ ಸಾರ್ವಜನಿಕ ವಲಯದ ಕಾರ್ಪೊರೇಷನ್ ಬ್ಯಾಂಕ್ ಭಾರತದಲ್ಲೇ ಎರಡನೇ ಅತೀ ದೊಡ್ಡ ಎಟಿಎಂ ಜಾಲವನ್ನು ಹೊಂದಿದ್ದ ಬ್ಯಾಂಕ್ ಎಂಬ ಗರಿಮೆ ಹೊಂದಿತ್ತು. ಮಂಗಳೂರಿನಲ್ಲಿ ಪ್ರಧಾನ ಕಚೇರಿ ಹೊಂದಿದ್ದು, ದೇಶದಾದ್ಯಂತ 2200 ಶಾಖೆಗಳನ್ನೂ 1800ಕ್ಕೂ ಹೆಚ್ಚು ಎಟಿಎಂಗಳನ್ನು ಹೊಂದಿತ್ತು. ಲಾಭದಲ್ಲಿ ನಡೆಯುತ್ತಿದ್ದ ಕರಾವಳಿಗರ ಹೆಮ್ಮೆಯ, ಸ್ವಾಭಿಮಾನದ ಪ್ರತೀಕವಾಗಿದ್ದ ಕಾರ್ಪೊರೇಶನ್ ಬ್ಯಾಂಕ್ ಅನ್ನು 2020 ಎಪ್ರಿಲ್‌ನಲ್ಲಿ ನಷ್ಟದಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ವಿಲೀನ ಮಾಡಲಾಯಿತು. ಕರಾವಳಿಗರ ಆತ್ಮಾಭಿಮಾನವನ್ನು ಈ ಮೂಲಕ ಹೊಸಕಿ ಹಾಕಲಾಯಿತು.

*****

ಖಾಸಗಿ ಆಸ್ಪತ್ರೆ ಮಾಫಿಯಾ

ಬಿಜೆಪಿ ಪ್ರಥಮ ಭಾರಿ ಲೋಕಸಭೆ ಚುನಾವಣೆಯಲ್ಲಿ ಗೆದ್ದದ್ದು 1991 ರಲ್ಲಿ. ಆ ನಂತರ ಬಿಜೆಪಿ ಎದುರಾಳಿಗಳೇ ಇಲ್ಲ ಎಂಬಂತೆ ದ.ಕ. ಜಿಲ್ಲೆಯಲ್ಲಿ ಚುನಾವಣೆಯಲ್ಲಿ ಸತತ ಗೆಲುವು ಸಾಧಿಸುತ್ತಲೇ ಬಂದಿದೆ. 1991 ರ ವರೆಗೆ ಜಿಲ್ಲೆಯಲ್ಲಿ ಇದ್ದದ್ದು ಕೇವಲ ಒಂದು ಖಾಸಗಿ ಮೆಡಿಕಲ್ ಕಾಲೇಜು ಮಾತ್ರ. ಈಗ ನೋಡಿದರೆ ಎಂಟು ಖಾಸಗಿ ಮೆಡಿಕಲ್ ಕಾಲೇಜುಗಳಿವೆ! ಜಿಲ್ಲೆಯ ಆರೋಗ್ಯ ಕ್ಷೇತ್ರ ಪೂರ್ತಿಯಾಗಿ ಈಗ ಖಾಸಗಿ ಮೆಡಿಕಲ್ ಕಾಲೇಜು ಲಾಬಿಗಳ ಹಿಡಿತಕ್ಕೆ ಸಿಕ್ಕಿ ಹಾಕಿಕೊಂಡಿದೆ. ಖಾಸಗಿ ಆರೋಗ್ಯ ಕ್ಷೇತ್ರ ಮಾತ್ರ ಅಲ್ಲ, ಸಾರ್ವಜನಿಕ (ಸರಕಾರಿ) ಆರೋಗ್ಯ ಕ್ಷೇತ್ರವನ್ನು ಖಾಸಗಿ ಮೆಡಿಕಲ್ ಕಾಲೇಜು ಲಾಭಿ ತಮ್ಮ ಹಿಡಿತಕ್ಕೆ ತೆಗೆದಕೊಂಡು, ಅವುಗಳ ಕತ್ತು ಹಿಸುಕುತ್ತಿವೆ. ಹೀಗಾಗಿ ಬಡವ ಬದುಕುವುದೇ ಕಷ್ಟವಾಗಿದೆ.

ಬ್ರಿಟಿಷ್ ಆಡಳಿತದಲ್ಲಿ ನಿರ್ಮಾಣಗೊಂಡ ವೆನ್‌ಲಾಕ್ ಜಿಲ್ಲಾಸ್ಪತ್ರೆ 90 ರ ದಶಕದ ವರೆಗೆ ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲದೆ ಸುತ್ತಲ ಐದಾರು ಜಿಲ್ಲೆಗಳ ಜನ ಸಾಮಾನ್ಯರಿಗೆ, ಬಡವರಿಗೆ ಸಂಜೀವಿನಿಯಂತೆ ಆರೋಗ್ಯ ಸೇವೆ ಒದಗಿಸುತ್ತಿತ್ತು. ಜಿಲ್ಲೆಯಲ್ಲಿ ಸ್ಥಾಪನೆಯಾದ ಪ್ರತಿಯೊಂದು ಖಾಸಗಿ ಮೆಡಿಕಲ್ ಕಾಲೇಜು, ನರ್ಸಿಂಗ್ ಕಾಲೇಜುಗಳು ವೆನ್‌ಲಾಕ್ ಜಿಲ್ಲಾಸ್ಪತ್ರೆಯನ್ನು ತಮ್ಮ ಕ್ಲಿನಿಕಲ್ ಆಗಿ ಬಳಸಿಯೇ ಬೆಳವಣಿಗೆ ಹೊಂದಿದವು. ಆ ಕಾಲದಲ್ಲಿ ಜಿಲ್ಲೆಯ ಮೂಲೆ ಮೂಲೆಗಳಲ್ಲಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲೂಕು ಸರಕಾರಿ ಆಸ್ಪತ್ರೆಗಳೂ ಜನಸಾಮಾನ್ಯರ ಬಹುತೇಕ ಆರೋಗ್ಯ ಸಮಸ್ಯೆಗಳನ್ನು ಬಗೆಹರಿಸುತ್ತಿತ್ತು.

ಆದರೆ, ಈ ಮೂರು ದಶಕದ ಅವಧಿಯಲ್ಲಿ ವೆನ್‌ಲಾಕ್ ಜಿಲ್ಲಾಸ್ಪತ್ರೆಯ ಬಹುತೇಕ ವಿಭಾಗಗಳು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಒಪ್ಪಂದದ ಮೂಲಕ ಹಸ್ತಾಂತರಗೊಂಡವು. ಈಗ ವೆನ್‌ಲಾಕ್ ಭಾಗಶಃ ಖಾಸಗಿ ಮೆಡಿಕಲ್ ಕಾಲೇಜಿನ ವೈದ್ಯ ವಿದ್ಯಾರ್ಥಿಗಳ ಕಲಿಕೆಗಷ್ಟೆ ಸೀಮಿತಗೊಂಡಿದೆ. ಪೋಸ್ಟ್‌ಮಾರ್ಟಂನಿಂದ ಹಿಡಿದು ಸಾಮಾನ್ಯ ಪರೀಕ್ಷೆಗಳಿಗೂ ಖಾಸಗಿ ಮೆಡಿಕಲ್ ಕಾಲೇಜಿನ ವೈದ್ಯರು, ವೈದ್ಯ ವಿದ್ಯಾರ್ಥಿಗಳನ್ನೇ ಅವಲಂಬಿಸಬೇಕಾದ ದುಸ್ಥಿತಿಗೆ ವೆನ್‌ಲಾಕ್ ತಲುಪಿದೆ.

ಜಿಲ್ಲಾಸ್ಪತ್ರೆ ವೆನ್‌ಲಾಕ್ ಮಾತ್ರವಲ್ಲದೆ, ತಾಲೂಕು ಆಸ್ಪತ್ರೆ, ಪ್ರಾಥಮಿಕ, ಸಮುದಾಯ ಆಸ್ಪತ್ರೆಗಳೂ ಬಹುತೇಕ ಖಾಸಗಿ ಮೆಡಿಕಲ್ ಕಾಲೇಜುಗಳ ವೈದ್ಯ ವಿದ್ಯಾರ್ಥಿಗಳ ಕಲಿಕೆಯ ಕೇಂದ್ರಗಳಾಗಿ ಬಳಕೆಯಾಗುತ್ತಿವೆ. ಆ ನಿಟ್ಟಿನಲ್ಲಿ ಒಪ್ಪಂದಗಳು ಆಗುತ್ತಿವೆ.

ಇದರಿಂದಾಗಿ ಜಿಲ್ಲೆಯ ಸಾರ್ವಜನಿಕ ಆರೋಗ್ಯ ಸೇವೆಯ ಸ್ಥಿತಿ ಶೋಚನೀಯವಾಗಿದೆ. ಜನಸಾಮಾನ್ಯರು ಖಾಸಗಿ ಆಸ್ಪತ್ರೆಗಳನ್ನೇ ಅವಲಂಬಿಸುವ, ಅಲ್ಲಿನ ದುಬಾರಿ ದರಗಳನ್ನು ಪಾವತಿಸಲಾಗದೆ ಪರದಾಡುವ ಅಸಹನೀಯ ಸ್ಥಿತಿ ಎದ್ದುಕಾಣುತ್ತಿದೆ. ಜಿಲ್ಲೆಗೊಂದು ಸರಕಾರಿ ಮೆಡಿಕಲ್ ಕಾಲೇಜು ಮಂಜೂರಾತಿಯ ಬೇಡಿಕೆ ಕನಸಾಗಿಯೇ ಉಳಿದಿದೆ. ಇಂದು ಗಂಭೀರ ಆರೋಗ್ಯ ಸಮಸ್ಯೆ ಕಾಣಿಸಿಕೊಂಡರೆ, ಖಾಸಗಿ ಆಸ್ಪತ್ರೆಗಳ ಬಿಲ್ ಪಾವತಿಸಲಾಗದೆ ಇಡೀ ಕುಟುಂಬವೇ ಬೀದಿಗೆ ಬರುವ ಸ್ಥಿತಿ ಉಂಟಾಗಿದೆ.

33 ವರ್ಷಗಳ ಕಾಲ ನಿರಂತರವಾಗಿ ಗೆದ್ದು ಆಡಳಿತ ನಡೆಸಿದ ಬಿಜೆಪಿ ಜಿಲ್ಲೆಯ ಆರೋಗ್ಯ ಕ್ಷೇತ್ರವನ್ನು ತಂದು ನಿಲ್ಲಿಸಿರುವುದು ಇಲ್ಲಿಗೆ. ಸದಾ ಉನ್ಮಾದದ ವಾತಾವರಣವನ್ನು ನಿರ್ಮಿಸಿ ಅದರ ಮರೆಯಲ್ಲಿ ಜನ ಸಾಮಾನ್ಯರ ಆರೋಗ್ಯದ ಹಕ್ಕು ಕಸಿದು ಕೊಳ್ಳಲಾಯಿತು. ಖಾಸಗಿ ಮೆಡಿಕಲ್ ಕಾಲೇಜು, ಕಾರ್ಪೊರೇಟ್ ಆಸ್ಪತ್ರೆಗಳ ಏಕಸ್ವಾಮ್ಯ ಸ್ಥಾಪಿಸಲಾಯಿತು.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**